ಆ ತೀರ್ಥೋದಕದಿಂದ ಸ್ನಾನಮಾಡಿ ಕಶ್ಮಲರಹಿತನಾಗಿ ಶುದ್ಧನಾಗಿ, ಏಕಾಂತ ಸ್ಥಳದಲ್ಲಿ, ಸಮವಾದ, ಚಲಿಸದ - (ಸ್ವಸ್ತಿಕ, ಪದ್ಮ) ಆಸನದಲ್ಲಿ ಕುಳಿತು, ಆತನಲ್ಲಿ ಅರ್ಪಿಸಿದ ಐಕಾಗ್ರಮನಸ್ಸುಳ್ಳವನಾಗುವುದು.

ಚಿಂತಯೇದಾತ್ಮನೋ ದೇಹಮೀಶಾಧಿಷ್ಠಾನಮದ್ಭುತಮ್ ।
ತ್ವಕ್ಚರ್ಮಮಾಂಸರುಧಿರಮೇದೋಮಜ್ಜಾಸ್ಥಿನಾಮಕಾಃ ॥ ೬ ॥

ತನ್ನ ಶರೀರವನ್ನು, ಶ್ರೀಶನು ಇರಲು ಯೋಗ್ಯವಾದ ಉತ್ತಮ ಸ್ಥಾನವೆಂದು ತಿಳಿಯುವುದು; ಈ ದೇಹದಲ್ಲಿ, ತ್ವಕ್, ಚರ್ಮ, ಮಾಂಸ, ರಕ್ತ ಮೇದಸ್ಸು, ಮಜ್ಜೆಯು ಮತ್ತು ಎಲುಬು ಎಂಬ ಏಳು ಧಾತುಗಳಿರುವುವು.

ಪಂಚಭೂತಾತ್ಮಕಾಃ ಸಪ್ತಧಾತವಶ್ಚೈತದಾತ್ಮಕಮ್ ।
ಮನೋ ಮುಖ್ಯೇಂದ್ರಿಯಾಯತ್ತಂ ತತ್ವಾತ್ಮಕಮಿತಿ ಸ್ಫುಟಂ ॥ ೭ ॥

ಈ ಏಳು ಧಾತುಗಳು, ಭೂಮಿ, ನೀರು, ಅಗ್ನಿ, ವಾಯು ಮತ್ತು ಆಕಾಶವೆಂಬ ಐದು ಭೂತಗಳಿಂದ ಆದವು; ಇವುಗಳಿಂದ ಕೂಡಿದುದು ದೇಹವು; ಮನವೇ ಮೊದಲಾದ ಇಂದ್ರಿಯಗಳಿಗೆ ಆಶ್ರಯವಾಗಿಯೂ ಮತ್ತು ಆಧೀನವಾಗಿಯೂ ಇರುವುದರಿಂದ, ಈ ದೇಹವು ತತ್ವಮಯವೆಂದು ಸ್ಪಷ್ಟವು.

ಸಪ್ತಧಾತುಷು ಧಾತ್ವಂತಃ ಕ್ರಮಾತ್ಕೋಶಾಃ ಪ್ರತಿಷ್ಠಿತಾಃ ।
ಅನ್ನಪ್ರಾಣ ಮನೋವಿಜ್ಞಾನಾನಂದಮಯನಾಮಕಾಃ ॥ ೮ ॥

ಈ ಏಳು ಧಾತುಗಳಲ್ಲಿ ಒಂದೊಂದರೊಳಗೂ, ಕ್ರಮವಾಗಿ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯವೆಂಬ ಐದು ಕೋಶಗಳಿರುವುವು.

ತನ್ನಾಮಕಾನಿರುದ್ಧಾದಿರೂಪಾಣ್ಯೇಷು ವಿಚಿಂತಯೇತ್ ।

ಈ ಕೋಶಗಳಲ್ಲಿ - ಆದರದರ ನಾಮದಿಂದಲೇ ಪ್ರಸಿದ್ಧವಾದ, ಶ್ರೀ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ ಎಂಬ ಐದು ರೂಪಗಳನ್ನು ಚೆನ್ನಾಗಿ ಧ್ಯಾನಿಸಬೇಕು.

ಭೂಮಿಸ್ಥಮನ್ನನಾಮಾನಂ ಪ್ರಾಣಮಗ್ನ್ಯಾದಿಸಂಸ್ಥಿತಮ್ ॥ ೯ ॥

ಮಾನಸಂ ಮನ ಆದಿಸ್ಥಂ ವಿಜ್ಞಾನಂ ಮಹತಿಸ್ಥಿತಮ್ ।
ಆನಂದಮವ್ಯಕ್ತಗತಂ ಕ್ರಮಶೋಯಾಂತಿದೇವತಾಃ ॥ ೧೦ ॥

ದೇಹದ ಭೂಭಾಗದಲ್ಲಿ ಅನ್ನಮಯ ಕೋಶವೂ, ಅಲ್ಲಿ ಪ್ರಾಣಾಂತರ್ಗತನಾದ ಶ್ರೀ ಅನಿರುದ್ಧ ದೇವನೂ, ಅಗ್ನಿಯ ಭಾಗದಲ್ಲಿ ಪ್ರಾಣಮಯಕೋಶವೂ, ಅಲ್ಲಿ ಅಪಾನಾಂತರ್ಗತ ಪ್ರದ್ಯುಮ್ನನೂ, ಮನವೇ ಮೊದಲಾದ ಸ್ಥಳಗಳಲ್ಲಿ, ಮನೊಮಯ ಕೋಶವೂ, ಅಲ್ಲಿ ವ್ಯಾನಾಂತರ್ಗತ ಸಂಕರ್ಷಣನೂ, ಮತ್ತತ್ವದಲ್ಲಿ ವಿಜ್ಞಾನಮಯ ಕೋಶವೂ, ಅಲ್ಲಿ ಉದಾನಾಂತರ್ಗತ ವಾಸುದೇವನೂ ಮತ್ತು ಅವ್ಯಕ್ತತತ್ವದಲ್ಲಿ ಆನಂದಮಯ ಕೋಶವೂ ಅಲ್ಲಿ ಸಮಾನಾಂತರ್ಗತ ಶ್ರೀ ನಾರಾಯಣನೂ ಇರುವರೆಂದು ತಿಳಿಯುವುದು.

ಏವಂ ಕೋಶಸ್ಥಿತಾಶ್ಚಕ್ಷುಶ್ಶ್ರೋತ್ರವಾಙ್ಮಯನಾಮಕಾಃ ।

ಹೀಗೆ ಕೋಶಗಳಲ್ಲಿ ಚಕ್ಷು, ಶ್ರೋತ್ರ - ವಾಙ್ಮಯ ಎಂಬ ದೇವತೆಗಳಿರುವರು.

ತೇಷ್ವಪ್ಯಾನ್ಯುದಿತ್ಯಾನ್ಯೇತನ್ನಾಮಕಾನಿ ರಮಾಪತೇಃ ।
ಚಿಂತನೀಯಾನಿ ರೂಪಾಣಿ ತೈತ್ತರೀಯೋದಿತಾನಿಚ ॥ ೧೧ ॥

ಅವುಗಳಲ್ಲಿ ವ್ಯಾಪ್ತವಾದ, ತೈತ್ತರೀಯೋಪನಿಷತ್ತಿನಲ್ಲಿ ಹೇಳಿರುವ ಆಯಾಯ ನಾಮಗಳನ್ನು ಶ್ರೀಲಕ್ಷ್ಮೀಪತಿ ನಾರಾಯಣನ ರೂಪವಿಶೇಷಗಳನ್ನು ಧ್ಯಾನಿಸುವುದು.

ಧಾತೂಪರಿಷ್ಠಾದಾಪಾದಮೌಳಿ ಪರ್ಯಂತಮಾತತಮ್ ।
ವಾಸುದೇವಾಭಿಧಂರೂಪಂ ಚಿಂತಯೇತ್ಕವಚಾಕೃತಿಮ್ ॥ ೧೨ ॥

ಚರ್ಮದ ಮೇಲ್ಭಾಗದಲ್ಲಿ - ಕಾಲಿನಿಂದ ತಲೆಯವರಿವಿಗೂ ವಿಸ್ತಾರ ವಾಗಿರುವ - ವಾಸುದೇವರೂಪವು - ಕವಚದಂತೆ ಇದೆಯೆಂದು - ತಿಳಿಯುವುದು.

ಏವಮಾಮೌಳಿಪಾದಾಂತಂ ಧ್ಯೇಯಂ ನಾರಾಯಣಾಭಿಧಮ್ ।
ದಶೈತತ್ಕವಚರೂಪಾಣಿ ಜ್ಞಾತ್ವಾದೋಷೈರ್ನಲಿಪ್ಯತೇ ॥ ೧೩ ॥

ಹೀಗೆ ತಲೆಯಿಂದ ಕಾಲಿನವರೆವಿಗೂ ನಾರಾಯಣನನ್ನು ಧ್ಯಾನಿಸುವುದು, ಹೀಗೆ ಕವಚರೂಪನಾದ ಶ್ರೀನಾರಾಯಣನ ಹತ್ತುರೂಪಗಳನ್ನು ತಿಳಿದವರಿಗೆ ದೋಷಗಳ ಲೇಪವಾಗುವುದಿಲ್ಲ.

ದೇಹೆ ತ್ರಿಕೋಟಿಕೋಟ್ಯರ್ಧರೋಮಕೂಪಾ ಭವಂತಿಹಿ ।
ಹಿಂಕಾರ ನಾಮಕಸ್ತೇಷು ವ್ಯಾಪ್ತಃ ಪ್ರದ್ಯುಮ್ನಕೋಹರಿಃ ॥ ೧೪ ॥

ಈ ದೇಶದಲ್ಲಿ ಮೂರೂವರೆಕೋಟಿ ರೋಮಕೂಪಗಳಿರುವುವು; ಅವು ಗಳಲ್ಲಿ ಹಿಂಕಾರವೆಂಬ ಪ್ರಸಿದ್ಧನಾದ - ಪ್ರದ್ಯುಮ್ನನೆಂಬ ಶ್ರೀಹರಿಯು ತುಂಬಿರುವನು.

ಸಾರ್ಧತ್ರಿಕೋಟತೀರ್ಥಾನಿ ರೋಮಕೂಪಸ್ಥಿತಾನಿಚ ।
ತನ್ನಿಯಾಮಕರೂಪಾಣಿ ಚಿಂತನೀಯಾನಿ ಚಕ್ರಿಣಃ ॥ ೧೫ ॥

ಈ ರೋಮಕೂಪಗಳಲ್ಲಿ - ಮೂರೂವರೆಕೋಟಿ ತೀರ್ಥಗಳು - ತದಭಿಮಾನಿ ದೇವತೆಗಳು ಇರುವರು; ಅವುಗಳಲ್ಲಿ ನಿಯಾಮಕವಾದ ಅಷ್ಟೇ ಚಕ್ರಧಾರಿಯಾದ ಶ್ರೀಹರಿಯ ರೂಪಗಳನ್ನು ತಿಳಿಯುವುದು.

ತ್ವಚಿಸ್ಥಿತೋಽನಿರುದ್ಧಶ್ಚವೇದ್ಯಃ ಪ್ರಸ್ತಾವನಾಮಕಃ ।
ರಾಮರೂಪೋಪಿ ತತ್ರೈವ ಲಾವಣ್ಯಾದಿ ಪ್ರದೋ ಹರಿಃ ॥ ೧೬ ॥

ತ್ವಕ್ಕಿನಲ್ಲಿ (ಮೇಲಿನ ಚರ್ಮದ ಒಳಗಡೆಯ ಭಾಗ) ಪ್ರಸ್ತಾವನೆಂಬ ಶ್ರೀ ಅನಿರುದ್ಧನನ್ನು - ತಿಳಿಯುವುದು; ಅಲ್ಲಿಯೇ ಸೌಂದರ್ಯಾದಿಗಳನ್ನು ಚೆನ್ನಾಗಿ ಕೊಡುವ ರಾಮರೂಪಿಯಾದ ಶ್ರೀಹರಿಯು - ಇರುವನು.

ಚರ್ಮಣ್ಯುದ್ಗೀಥ ನಾಮಾಸೌವೇದ್ಯಃ ಪ್ರದ್ಯುಮ್ನನಾಮಕಃ ।
ಲಕ್ಷ್ಮೀಪತಿಶ್ಚ ತತ್ರೈವ ಮಹಾವ್ರಣನಿವಾರಕಃ ॥ ೧೭ ॥

ಚರ್ಮದಲ್ಲಿ - ಉದ್ಗೀಥನೆಂಬ ಪ್ರದ್ಯುಮ್ನನನ್ನು ತಿಳಿಯುವುದು; ಅಲ್ಲಿಯೇ ಶ್ರೀಲಕ್ಷ್ಮೀಪತಿಯು - ಮಹಾವ್ರಣಗಳನ್ನು ಪರಿಹರಿಸುವವನಾಗಿ ಇರುವನು.

ಮಾಂಸಸ್ಥಃ ಪ್ರತಿಹಾರಾಖ್ಯಃ ಚಿಂತ್ಯಃ ಸಂಕರ್ಷಣೋಽಚ್ಯುತಃ ।
ವರರೂಪೀಚ ತತ್ರಾಪಿ ವಿಷ್ಣುಃ ಪುಷ್ಟಿವಿವರ್ಧನಃ ॥ ೧೮ ॥

ಮಾಂಸದಲ್ಲಿ - ಪ್ರತಿಹಾರನೆಂಬ - ಚ್ಯುತಿರಹಿತನಾದ ಶ್ರೀ ಸಂಕರ್ಷಣನನ್ನು - ಧ್ಯಾನಮಾಡುವುದು; ಅಲ್ಲಿಯೂ, ಪುಷ್ಟಿಯನ್ನು - ವೃದ್ಧಿಗೊಳಿಸುತ್ತಾ ವರರೂಪದಿಂದಿರುವನು.

ರುಧಿರಸ್ಥೋ ವಾಸುದೇವಶ್ಚಿಂತ್ಯಶ್ಚೋಪದ್ರವಾಭಿಧಃ ।
ಶಾಂತಸಂವಿದ್ಧರಿಶ್ಚಾಪಿ ಶಾರೀರಬಲ ಸಾರದಃ ॥ ೧೯ ॥

ರಕ್ತದಲ್ಲಿರುವ - ಉಪದ್ರವನೆಂಬ ವಾಸುದೇವನನ್ನು - ಧ್ಯಾನಿಸಬೇಕು; ಅಲ್ಲಿ ಶರೀರದ ಬಲ ಸಾರಪ್ರದನಾದ ಶಾಂತಸಂವಿತ್ - ಎಂಬ ಹರಿಯು ಇರುವನು.

ಮೇದಸ್ಥೋ ನಿಧನೋ ನಾಮ ಧ್ಯೇಯೋ ನಾರಾಯಣೋ ವಿಭುಃ ।
ತತ್ರೈವ ಷಡ್ಗುಣೋ ವಿಷ್ಣುಃ ಐಶ್ವರ್ಯಾದಿಗುಣಪ್ರದಃ ॥ ೨೦ ॥

ಮೇದಸ್ಸಿನಲ್ಲಿ - ನಿಧನ ನಾಮಕನಾದ, ಸಮರ್ಥನಾದ ನಾರಾಯಣನನ್ನು - ಧ್ಯಾನಮಾಡುವುದು; ಅಲ್ಲಿಯೂ, ಐಶ್ವರ್ಯ, ವೀರ್ಯ, ಯಶಸ್ಸು, ಸಂಪತ್ತು - ಮೊದಲಾದ ಆರು ಗುಣಗಳಿಂದ ಪೂರ್ಣನಾದ - ಐಶ್ವರ್ಯಾದಿ ಗುಣದಾಯಕನಾದ ಶ್ರೀವಿಷ್ಣುವನ್ನು - ತಿಳಿಯುವುದು.

ಮಜ್ಜಾಸ್ಥಿತೋವಷಟ್ಕಾರಃ ಸಾರಾತ್ಮಾಚ ವ್ಯವಸ್ಥಿತಃ ।
ಮದಸ್ಯ ಜನನಾದೇವ ಮಜ್ಜಾನಾಮಾನಿ ವೈ ಹರೇಃ ॥ ೨೧ ॥

ಮಜ್ಜೆಯಲ್ಲಿ - ವಷಟ್ಕಾರವೆಂಬ ಸಾರಾತ್ಮನಾಮಕನಾದ ಹರಿಯು ಇರುವನು; ಮದಜನಕನಾದುದರಿಂದಲೇ ಅವನನ್ನು ಮಜ್ಜಾ ಎಂದು ಹೇಳುವರು.

ಚಿಂತನೀಯಾನಿ ರೂಪಾಣಿ ಸಷಷ್ಟಿತ್ರಿಶತಾನಿಚ ।
ತಾನಿ ಸಂಧ್ಯಾ ದೈವತಾನಿ ದಿನಸಂಖ್ಯಾಮಿತಾನಿ ಚ ॥ ೨೨ ॥

ಮತ್ತು ವರ್ಷಕ್ಕೆ ಆಗುವ - ಹಗಲುಗಳ ಸಂಖ್ಯೆಯಿಂದ ಕೂಡಿದ ಸಂಧ್ಯೆಗೆ - ದೇವತೆಗಳಾದ - ಮುನ್ನೂರರವತ್ತು ಶ್ರೀಹರಿಯ ರೂಪಗಳನ್ನು ಚಿಂತಿಸುವುದು.

ಮಜ್ಜೈವರೇತೋ ಭವತಿ ತಸ್ಮಿನ್ ಪ್ರಾಣಃ ಪ್ರತಿಷ್ಠಿತಃ ।
ಪ್ರಾಣೇ ನಾರಾಯಣಸ್ತಸ್ಮಾದ್ರೇತೋ ಗರ್ಭತ್ವಮೇಶ್ಯತಿ ॥ ೨೩ ॥

ಮಜ್ಜವೇ ರೇತಸ್ಸಾಗುವುದು; ಅದರಲ್ಲಿ ಪ್ರಾಣನಿರುವನು. ಆತನಲ್ಲಿ - ಶ್ರೀನಾರಾಯಣನಿರುವನು; ಆದುದರಿಂದ - ಆ ರೇತಸ್ಸು ಗರ್ಭ ಭಾವವನ್ನು ಹೊಂದುವುದು.

ಸಷಷ್ಟಿತ್ರಿಶತಾಸ್ಥಿಸ್ಥಂ ಹಂಸಂ ಚೈವಾದಿನಾಮಕಂ ।
ಆಸ್ಥಾನಾದಸ್ಥಿನಾಮಾನಿ ಅಸ್ಥಿಷ್ವಾಚರಿತಾನಿ ಚ ॥ ೨೪ ॥

ಮುನ್ನೂರರವತ್ತು ಎಲುಬುಗಳಲ್ಲಿ - ಶ್ರೀಹರಿಯ ಹಂಸಾದಿ ರೂಪಗಳಿರುವುವು; ಅಲ್ಲಿ ಚೆನ್ನಾಗಿ ಇದ್ದು ಆಶ್ರಯನಾಗಿರೋಣದರಿಂದ -'ಅಸ್ಥಿ' ಎಂಬ ಹೆಸರಿನಿಂದಲೇ ಅಲ್ಲಿ ವ್ಯಾಪ್ತನಾಗಿರುವನು.

ಸಷಷ್ಟಿ ತ್ರಿಶತಾನ್ಯೇವ ವಿಷ್ಣೋರ್ರೂಪಾಣಿ ಚಿಂತಯೇತ್ ।
ಏತಾನ್ಯೇವ ಸ್ವರೂಪಾಣಿ ರಾತ್ರೀಣಾಂ ದೇವತಾನಿ ಚ ॥ ೨೫ ॥

ಪಾದಹಸ್ತಾಂಗುಲಿಸ್ಥಾನಿ ಯಾನಿ ಪರ್ವಾಣಿ ವಿಗ್ರಹೇ ।
ತತ್ಪರ್ವಸು ಪರಿಜ್ಞಾನಾತ್ಪರ್ವನಾಮಾನಿ ವೈ ಹರೇಃ ॥ ೨೬ ॥

ಕೈಕಾಲುಗಳ ಬೆರಳುಗಳಲ್ಲಿ ಪರ್ವಗಳಿವೆ (ಗಿಣ್ಣು) ಅವುಗಳಲ್ಲಿ ಪರ್ವವೆಂಬ ಹರಿಯ ರೂಪಗಳನ್ನು ತಿಳಿಯುವುದು.

ಸಮ್ಯಕ್ ಸಷಷ್ಟಿತ್ರಿಶತಸ್ವರೂಪಾಣಿ ನಿಬೋಧಯೇತ್ ।
ಏತಾನಿ ಪರ್ವರೂಪಾಣಿ ದಿನಾಹ್ನಾಂ ದೇವತಾನಿ ಚ ॥ ೨೭ ॥

ಅಲ್ಲಿ ಚೆನ್ನಾಗಿ ಒಂದೊಂದು ಪರ್ವದಲ್ಲಿ ಮುನ್ನೂರರವತ್ತು ರೂಪಗಳನ್ನು ತಿಳಿಯುವುದು, ಈ ಪರ್ವರೂಪಗಳು ದಿನದ ಹಗಲಿನ ದೇವತೆಗಳು.

ಅಶೀತ್ಯುತ್ತರಸಾಹಸ್ರರೂಪಾಣ್ಯೇತಾನಿ ಸರ್ವಶಃ ।
ಯೋ ವಿಜಾನಾತಿ ಸತ್ಯೈವ ನಿತ್ಯ ಮಾಯು ರ್ವಿವರ್ಧತೇ॥ ೨೮ ॥

ಒಂದೊಂದು ಬೆರಳಿನಲ್ಲಿಯೂ ಒಂದು ಸಾವಿರದ ಎಂಭತ್ತು ರೂಪಗಳನ್ನು ಸರ್ವಕಡೆಗಳಲ್ಲಿಯೂ ಯಾರು ತಿಳಿಯುವರೋ ಅವರ ಆಯುಷ್ಯವು ನಿತ್ಯದಲ್ಲಿಯೂ ಅಭಿವೃದ್ಧಿಯಾಗುವುದು.

ತತ್ವಾಭಿಮಾನಿನೋ ದೇವಾ ದೇಹೇಽಸ್ಮಿನ್ ನವಕೋಟಯಃ ।
ವಿಷ್ಣ್ವಾಜ್ಞಯಾ ಪ್ರವರ್ತಂತೇ ತತ್ತತ್ತತ್ವಾವಬೋಧಕಾಃ ॥ ೨೯ ॥

ಈ ದೇಹದಲ್ಲಿ ಒಂಭತ್ತು ಕೋಟಿ ತತ್ವಾಭಿಮಾನಿ ದೇವತೆಗಳಿರುವರು. ಶ್ರೀವಿಷ್ಣುವಿನ ಆಜ್ಞೆಯಿಂದ ಆಯಾಯ ತತ್ವಗಳನ್ನು ತಿಳಿಸುತ್ತಾ ಪ್ರೇಸಿಸುತ್ತಿರುವರು.

ಮುಖ್ಯಾಸ್ತೇಷ್ವಪಿ ವಿಜ್ಞೇಯಾ ಶ್ಚತುರ್ವಿಂಶತಿ ತತ್ವಕಾಃ ।
ಕೇಶವಾದಿ ಚತುರ್ವಿಂಶ ನ್ಮೂರ್ತಯಸ್ತ ನ್ನಿಯಾಮಕಾಃ ॥ ೩೦ ॥

ಮತ್ತು ಅವುಗಳಲ್ಲಿ, ಇಪ್ಪತ್ತು ನಾಲ್ಕು ತತ್ವಾಭಿಮಾನಿ ದೇವತೆಗಳು ಅತಿ ಮುಖ್ಯರಾದವರೆಂದು ತಿಳಿಯುವುದು; ಆಚಮನ ಕಾಲದಲ್ಲಿ ಉಚ್ಚರಿಸಲ್ಪಡುವ ಶ್ರೀ ಕೇಶವನಿಂದ - ಶ್ರೀಕೃಷ್ಣನವರೆಗಿನ ಇಪ್ಪತ್ತು ನಾಲ್ಕು ಭಗವದ್ರೂಪಗಳು ತನ್ನಿಯಾಮಕಗಳು.

ಆ ತತ್ವಗಳ, ತದಭಿಮಾನಗಳ ಮತ್ತು ತನ್ನಿಯಾಮಕ ಭಗವದ್ರೂಪಗಳ ನಾಮಗಳನ್ನು ಮುಂದೆ ಹೇಳುವಂತೆ ಭಾವಿಸುವುದು.

ಸಂ.	ತತ್ವಗಳ ನಾಮ	ಅಭಿಮಾನಿ ದೇವತಾ	ನಿಯಾಮಕ ಭಗವದ್ರೂಪ ತತ್ಪತ್ನೀನಾಮ ಸಹಿತ
೧.	ಅವ್ಯಕ್ತತತ್ವ	ಸರಸ್ವತೀ, ಭಾರತಿ, ಲಕ್ಮೀ	ಶ್ರೀಕೇಶವ
೨.	ಮಹತ್ತತ್ವ	ಬ್ರಹ್ಮ, ವಾಯು,	ಲಕ್ಷ್ಮೀನಾರಾಯಣ
೩.	ಅಹಂಕಾರತತ್ವ	ರುದ್ರ, ಗರುಡ, ಶೇಷ	ಕಮಲಾ ಮಾಧವ

೪.	ಮನಸ್ತತ್ವ	ಇಂದ್ರಕಾಮರು	ಪದ್ಮಾಗೋವಿಂದ
೫.	ಶ್ರೋತ್ರೇಂದ್ರಿಯ	ಚಂದ್ರ	ಪದ್ಮಾ ವಿಷ್ಣು.
೬.	ಚಕ್ಷು	ಸೂರ್ಯ	ಕಮಲಾ ಮಧುಸೂದನ
೭.	ತ್ವಗಿಂದ್ರಿಯ	ಅಹಂಕಾರಿಕ ಪ್ರಾಣ	ರಮಾ ತ್ರಿವಿಕ್ರಮ
೮.	ರಸನೇಂದ್ರಿಯ	ವರುಣ	ವೃಷಾಕಪಿ ವಾಮನ
೯.	ಘ್ರಾಣೇಂದ್ರಿಯ	ನಾಸತ್ಯದಸ್ರರು	ಪ್ರಕೃತಿ ಶ್ರೀಧರ
೧೦.	ವಾಗಿಂದ್ರಿಯ	ಅಗ್ನಿ	ಬುದ್ಧೀ ಹೃಷೀಕೇಶ.
೧೧.	ಪಾಣಿ	ದಕ್ಷಬ್ರಹ್ಮ	ಯಜ್ಞಾ ಪದ್ಮನಾಭ
೧೨.	ಪಾದ	ಜಯಂತ	ಇಂದಿರಾ ದಾಮೋದರ
೧೩.	ಪಾಯು	ಮಿತ್ರ	ಹಿರಣ್ಮ್ಯಾ ಸಂಕರ್ಷಣ
೧೪.	ಉಪಸ್ಥ	ಸ್ವಾಯಂಭುವ ಮನು	ಹರಿಣೀ ವಾಸುದೇವ
೧೫.	ಶಬ್ದ	ಪ್ರಾಣ	ಸತ್ಯಾ ಪ್ರದ್ಯುಮ್ನ
೧೬.	ಸ್ಪರ್ಶ	ಅಪಾನ	ನಿತ್ಯಾ ಅನಿರುದ್ಧ.
೧೭.	ಗಂಧ	ವ್ಯಾನ	ಆನಂದಿನೀ ಪುರುಷೋತ್ತಮ
೧೮.	ರಸ	ಉದಾನ	ಅಸಂಜ್ಞಾ ಅಧೋಕ್ಷಜ
೧೯.	ರೂಪ	ಸಮಾನ	ಸುಖಾ ನೃಸಿಂಹ
೨೦.	ಆಕಾಶ	ಗಣಪತಿ	ಸುಗಂಧೀ ಅಚ್ಯುತ.
೨೧.	ವಾಯು	ಪ್ರವಹವಾಯು	ಸುಂದರೀ ಜನಾರ್ದನ
೨೨.	ಅಗ್ನಿ	ಪಾವಕ	ವಿದ್ಯಾ ಉಪೇಂದ್ರ
೨೩.	ಅಪ್ಪು	ವರುಣ	ಸುಶೀಲಾ ಹರಿ
೨೪.	ಪೃಥ್ವೀ	ಧರಣೀ, ಶನೈಶ್ಚರ	ಸುಲಕ್ಷಣಾ ಶ್ರೀಕೃಷ್ಣ

ಪ್ರಾಣಸ್ತ್ವಗಾತ್ಮಾ ತತ್ರತ್ಯ
ಶ್ಚಿಂತನೀಯೋ ನಿರುದ್ಧಕಃ ।
ಅಜಾಂತೌ ಮೂರ್ಧ್ನಿವಿಜ್ಞೇಯಾ
ವಾನಂದಸ್ತ್ವಭಿತೋಮುಖೇ ॥ ೩೧ ॥

ತ್ವಗಿಂದ್ರಿಯಾಭಿಮಾನಿಯು ಪ್ರಾಣನಾಮಕ ವಾಯುವು; ಆತನಲ್ಲಿ ಅನಿರುದ್ಧನನ್ನು ತಿಳಿಯುವುದು; ಅಜ ಮತ್ತು ಅಂತ ಎಂಬ ಎರಡು ರೂಪಗಳನ್ನು ಶಿರಸ್ಸಿನಲ್ಲಿಯೂ, ಆನಂದನನ್ನು ಹಣೆಯಲ್ಲಿಯೂ ತಿಳಯುವುದು.

ಶ್ರೋತ್ರಾಭಿಮಾನಿನಶ್ಚಿಂತ್ಯಾ
ದಿಗ್ದೇವಾಶ್ಚಂದ್ರಮಾಮುಖಾಃ ।
ಚಂದ್ರೇ ಬೃಹತ್ಪಾಂಡುವಾಸೋ
ಸೋಮರಾಜಾ ನಿಯಾಮಕಃ ॥ ೩೨ ॥

ಕಿವಿಗಳಿಗೆ ಮತ್ತು ಶಬ್ದವನ್ನು ಗ್ರಹಣಮಾಡುವ ಇಂದ್ರಿಯಕ್ಕೆ ಚಂದ್ರನೇ ಮೊದಲಾದ ದಿಗಭಿಮಾನಿದೇವತೆಗಳೇ ಅಭಿಮಾನಿಗಳು; ಚಂದ್ರನ ದೊಡ್ಡದಾದ ಬೆಳ್ಳಗಿರುವ ಪ್ರಕಾಶದಲ್ಲಿ ಸೋಮರಾಜನು ನಿಯಾಮಕನು.

ಧನ್ವಂತರಿರ್ಹಯಗ್ರೀವ
ಶ್ಚಿಂತಾಮಣಿರಜಾದಯಃ ।
ಹಂಸೋಽಪಿ ವಾಮನಶ್ಚಿಂತ್ಯ
ಉಗ್ರೋರ್ಜಾವಪಿಕರ್ಣಯೋಃ॥ ೩೩ ॥

ಧನ್ವಂತರಿ, ಹಯಗ್ರೀವ, ಚಿಂತಾಮಣಿ, ಅಜ, ಹಂಸ, ವಾಮನ, ಉಗ್ರ ಮತ್ತು ಊರ್ಜ ಎಂಬ ಕ್ರಮವಾಗಿ, ಪೂರ್ವ, ಆಗ್ನೇಯ, ದಕ್ಷಿಣ, ನಿರಋತಿ, ಪಶ್ಚಿಮ, ವಾಯುವ್ಯ, ಉತ್ತರ ಮತ್ತು ಈಶಾನ್ಯವೆಂಬ ಎಂಟು ದಿಕ್ಕು ವಿದಿಕ್ಕುಗಳಿಗೆ ನಿಯಾಮಕವಾದ ಭಗವದ್ರೂಪಗಳನ್ನು ಆಯಾಯ ದಿಗಧಿಪತಿಗಳೊಡನೆ ಕಿವಿಗಳೆರಡರಲ್ಲಿ ತಿಳಿಯುವುದು.

ಹಯಗ್ರೀವಶ್ಚ ಸಂವೇದ್ಯೋದಿಶ್ವ್ಯಾಪ್ತೋದಿಙ್ನಿಯಾಮಕಃ ।
ವಿದಿಙ್ನಿಯಾಮಕಶ್ಚೈವ ವ್ಯಾಪ್ತಃ ಪ್ರದ್ಯುಮ್ನ ನಾಮಕಃ ॥ ೩೪ ॥

ಹಯಗ್ರೀವ ಮತ್ತು ಸಂವೇದ್ಯವೆಂಬ ಎರಡು ಶ್ರೀಹರಿ ರೂಪಗಳು ಪೂರ್ವಾದಿ ನಾಲ್ಕು ದಿಕ್ಕುಗಳಲ್ಲಿ ವ್ಯಾಪ್ತರಾದವರು ಮತ್ತು ತನ್ನಿಯಾಮಕರು; ಆಗ್ನೇಯಾದಿ ನಾಲ್ಕು ವಿದಿಕ್ಕುಗಳಿಗೆ, ಅಲ್ಲಿ ತುಂಬಿರುವ ಪ್ರದ್ಯುಮ್ನನು ನಿಯಾಮಕನು.

ವಿಪ್ರದಕ್ಷಿಣ ಕರ್ಣೇಚ ಭಾಗೀರಥ್ಯಾದಿಕಾನಿ ಚ ।
ತೀರ್ಥಾನಿ ನಿವಸಂತ್ಯಸ್ಮಾತ್ ಸ್ವಕರ್ಣಸ್ಪರ್ಶನಾಚ್ಛುಚಿಃ ॥ ೩೫ ॥

ಬ್ರಾಹ್ಮಣರ ಬಲಗಿವಿಯಲ್ಲಿ, ಭಾಗೀರಥಿಯೇ (ಗಂಗೆ) ಮೊದಲಾದ ತೀರ್ಥಾಭಿಮಾನಿ ದೇವತೆಗಳಿರುವರು; ಆದುದರಿಂದ ಅದನ್ನು ಸ್ಪರ್ಶಮಾದರೆ ಶುಚಿಯಾಗುವನು. (ಕೆಲವು ಕಾಲದಲ್ಲಿ ಆಚಮನಕ್ಕೆ ಪ್ರತಿನಿಧಿಯಾ ಬಲಗಿವಿಯನ್ನು ಮುಟ್ಟುವುದೂ ಮತ್ತು ಜನಿವಾರವನ್ನು ಮೂತ್ರಪುರಿಷೋತ್ಸರ್ಜನ ಕಾಲದಲ್ಲಿ ಬಲಗಿವಿಗೆ ಹಾಕಿಕೊಳ್ಳುವುದೂ ರೂಢಿಯಲ್ಲಿದೆ.

ನೇತ್ರಯೋರಿಂದ್ರ ಈಶಶ್ಚ ಕ್ರಮಾದೇತೌ ಪ್ರತಿಷ್ಠಿತೌ ।
ಚಕ್ಷುರ್ದ್ವಯಾಭಿಮಾನೀಚ ಸೂರ್ಯಸ್ತಸ್ಮಿನ್ನಿಯಾಮಕಃ ॥ ೩೬ ॥

ಬಲ ಮತ್ತು ಎಡಕಣ್ಣುಗಳಲ್ಲಿ ಇಂದ್ರ ಮತ್ತು ಈಶ ಎಂಬ ಎರಡು ಭಗವದ್ರೂಪಗಳಿರುವುವು; ಆ ಎರಡು ಕಣ್ಣುಗಳಿಗೂ ಸೂರ್ಯನು ಅಭಿಮಾನಿಯು. ಆ ಸೂರ್ಯನನ್ನು ಮತ್ತು ಚಕ್ಷುರಿಂದ್ರಿಯವನ್ನೂ ನಿಯಮಿಸುವನು.

ನಾರಾಯಣ ಸ್ವತಿಷ್ಠಾಖ್ಯೋ ಮೂರ್ಧರಾಜೇತಿ ನಾಮಕಃ ।
ವಾಜಿನೀವಸ್ವಜಾದ್ಯಾಶ್ಚ ಕಪಿಲೋನ್ನಾಮಕಾದಯಃ ॥ ೩೭ ॥

ಅತಿಷ್ಠನೆಂಬ ನಾರಾಯಣನು ಮೂರ್ಧರಾಜನೆಂಬ ಹೆಸರಿನಿಂದ ಇರುವನು; ವಾಜಿನೀವಸು (ಕುದುರೆಯ ರೂಪ) ಅಜ, ಕಪಿಲ ಮೊದಲಾದ ರೂಪಗಳು ಇರುವುವು.

ದಕ್ಷಿಣಾಕ್ಷಿಸ್ಥಿತೋ ವಿಷ್ಣು
ಸ್ತಂಭರೂಪೀ ರಮಾಸ್ವಯಂ ।
ರಜ್ಜುರೂಪತಯಾ ಬದ್ಧ್ವಾವಾಯು
ಗೋವತ್ಸರೂಪಿಣಮ್ ॥ ೩೮ ॥

ಬಲಗಣ್ಣಿನಲ್ಲಿ ಶ್ರೀವಿಷ್ಣುವು ಸ್ತಂಭರೂಪನಾಗಿರುವನು; ಸಾಕ್ಷಾತ್ ಲಕ್ಷ್ಮೀದೇವಿಯು ಹಗ್ಗರೂಪವಾಗಿ ಆಕಳ ಕರುವಿನಂತಿರುವ ವಾಯುದೇವನನ್ನು ಬಂಧಿಸಿರುವಳು.

ನಯನೇರಕ್ತ ರಾಜಿಸ್ಥೋ ರುದ್ರೋ ಗೌತುಮನಾಮಕಃ ।
ಶ್ವೇತ ತಾರಾಗತಶ್ಚಂದ್ರೋ ವಸಿಷ್ಠಾಖ್ಯಃ ಸುರೇಶ್ವರಃ ॥ ೩೯ ॥

ನೇತ್ರಗಳ ಕೆಂಪಿರುವ ಭಾಗದಲ್ಲಿ ಗೌತಮನೆಂಬ ರುದ್ರನಿರುವನು; ಬಿಳಿಯ ಗುಡ್ಡೆಯಲ್ಲಿ ವಸಿಷ್ಠನೆಂಬ ದೇವನಾಯಕನಾದ ಇಂದ್ರನು ಇರುವನು.

ಕೃಷ್ಣತಾರಾಸ್ಥಿತೋ ವಹ್ನಿರ್ಜಮದಗ್ನಿರಿತಿಸ್ಮೃತಃ ।
ಕಾನೀನಿಕಾಯಾಮಾದಿತ್ಯೋ ವಿಶ್ವಾಮಿತ್ರಾಭಿಧಸ್ತಥಾ ॥ ೪೦ ॥

ಕರಿಯ ಗುಡ್ಡೆಯಲ್ಲಿ ಜಮದಗ್ನಿ ಎಂಬ ಅಗ್ನಿಯೂ, ಕಾನೀನಿಕೆ ಯಲ್ಲಿ (The central point in the eye where the things are received; Doctors call it retina) ವಿಶ್ವಾಮಿತ್ರನೆಂಬ ಸೂರ್ಯನಿರುವನು.

ವಾರಿಗೋ ವರುಣಃ ಸಾಕ್ಷಾದ್ಭರದ್ವಾಜಾಭಿಧಸ್ತಥಾ ।
ಅಧರಾವರ್ತಿನೀ ಸಂಸ್ಥಾ ಪೃಥ್ವೀ ಕಾಶ್ಯಪೀ ನಾಮಿಕಾ ॥ ೪೧ ॥

ನೀರಿನಲ್ಲಿ ಭರದ್ವಾಜನೆಂಬ ವರುಣನೂ, ಹಾಗೆಯೇ ಕೆಳಗಡೆ ರೆಪ್ಪೆಯಲ್ಲಿ - ಕಾಶ್ಯಪೀ ಎಂಬ ಪೃಥ್ವಿಯೂ ಇರುವರು.

ದಕ್ಷಿಣಾಕ್ಷಿಸ್ಥಿತೋ ಜ್ಞೇಯೋ ವಿಶ್ವನಾಮಾನಿರುದ್ಧಕಃ ।
ದ್ವಿಪಾದಃ ಪಂಚ ಹಸ್ತೇತೋ ಮಧ್ಯೇ ಗಜಕರಸ್ಮೃತಃ ॥ ೪೨ ॥

ಬಲಗಣ್ಣಿನಲ್ಲಿ ವಿಶ್ವನಾಮಕನಾದ ಅನಿರುದ್ಧನಿರುವನೆಂದು ತಿಳಿಯುವುದು; ಅವನಿಗೆ ಎರಡು ಕಾಲುಗಳು ಐದು ಕೈಗಳು ಮಧ್ಯದ ಕೈ ಆನೆಯ ಸೊಂಡಿಲನಂತಿರುವುದು.

ಏಕೋನವಿಂಶತಿಮುಖೋ ಮಧ್ಯೇ ಚೈಕಂ ಗಜಾನನಮ್ ।
ತತ್ಪಾರ್ಶ್ವಯೋ ರ್ನವಾಸ್ಯಾನಿ ಕ್ರಮಾದೇಕೋನವಿಂಶತಿಃ ॥ ೪೩ ॥

ಮಧ್ಯದಲ್ಲಿ ಆನೆಯ ಮುಖದಂತೆಯೂ ಅದರ ಎರಡು ಪಕ್ಕಗಳಲ್ಲಿಯೂ ಒಂಭೊತ್ತೊಂಭತ್ತು ಮನುಷ್ಯರ ಮುಖದಂತೆಯೂ ಹೀಗೆ ಹತ್ತೊಂಭತ್ತು ಮುಖವುಳ್ಳವನು ವಿಶ್ವಮೂರುತಿಯು.

ಏವಮದ್ಭುತರೂಪೋಸಾವಷ್ಟದಿಕ್ಪಾಲಸೇವಿತಃ ।
ಜೀವಾನಾಂ ಚ ಸದಾಜಾಗ್ರದವಸ್ಥಾ ಪ್ರೇರಕೋ ಹರಿಃ ॥ ೪೪ ॥

ಇಂತಹ ಆಶ್ಚರ್ಯಕರ ರೂಪವುಳ್ಳ ಈ ಹರಿಯು, ಎಂಟು ದಿಕ್ಕುಗಳಿಗೆ ಪಾಲಕರಾದ, ಇಂದ್ರ, ಅಗ್ನಿ, ಯಮ, ನಿರಋತಿ, ವರುಣ, ವಾಯು, ಕುಬೇರ ಮತ್ತು ಈಶಾನನೆಂಬ ದೇವತೆಗಳಿಂದ ಯಾವಾಗಲೂ ಸೇವೆಯನ್ನು ಕೈಕೊಳ್ಳತ್ತಾ ಸಕಲ ಜೀವರ ಜಾಗ್ರದವಸ್ಥೆಯನ್ನು ಪ್ರೇರಿಸುವನು.

ತತಃ ಕಂಠಗತೋ ದಾನ
ಸೇವಿತಸ್ತೈಜಸಾಭಿಧಃ ।
ಪ್ರದ್ಯುಮ್ನೋ ವಿಶ್ವವದ್‌ಜ್ಞೇಯೋ
ಮುಖಹಸ್ತಾದಿ ಸಂಯುತಃ ॥ ೪೫ ॥

ಅನಂತರ ಕಂಠದಲ್ಲಿ (ಗಂಟಲ) ಉದಾನನಾಮಕ ವಾಯುವಿನಿಂದ ಸೇವಿತನಾದ ತೈಜಸನೆಂಬ ಪ್ರದ್ಯುಮ್ನ ಹಿಂದೆ ಹೇಳಿದ ವಿಶ್ವನಂತೆಯೇ ಆಕೃತಿಯುಳ್ಳವನಾಗಿರುವನು.

ಸ ಏವ ಸರ್ವಜೀವಾನಾಂ ಸ್ವಪ್ನಾವಸ್ಥೇರಕಃ ಪ್ರಭುಃ ।
ಹೃತ್ಪದ್ಮಕರ್ಣಿಕಾಗ್ರಸ್ಥ ಸ್ತಗ್ರೇಶಃ ಪ್ರಾಜ್ಞ ಸಂಜ್ಞಕಃ ॥ ೪೬ ॥

ಈತನೇ ಸಕಲಜೀವರ ಸ್ವಪ್ನಾವಸ್ಥೆಯನ್ನು ಪ್ರೇರಿಸುವ ಪ್ರಭುವು ಸರ್ವಜೀವರ ಹೃದಯಕಮಲದ ಕರ್ಣಿಕೆಯ ತುದಿಯಲ್ಲಿ ಪ್ರಾಜ್ಞನೆಂಬ ಅಗ್ರೇಶನು ಇರುವನು.

ಸಂಕರ್ಷಣಃ ಸುಷುಪ್ತ್ಯಾದಿ ಪ್ರೇರಕಃ ಸಮುದಾಹೃತಃ ।
ವಿಶ್ವೋಜಾಗ್ರತ್ಸ್ಥಿತಾನರ್ಥಾಃತೈಜಸಃ ಸ್ವಪ್ನಸಂಸ್ಥಿತಾನ್ ॥ ೪೭ ॥

ಪ್ರಾಜ್ಞಃ ಸುಷುಪ್ತಿಗಾನರ್ಥಾ ಸ್ವೀಕರೋತಿ ಸೃಜನ್ವಿಭುಃ ।
ಜಾಗ್ರತ್ಸ್ವಪ್ನಸುಷುಪ್ತ್ಯಾದಿಕ್ರಮೋ ಯಮವಗಮ್ಯತಾಮ್ ॥ ೪೮ ॥

ಸಂಕರ್ಷಣರೂಪಿ ಹರಿಯು ಸುಷುಪ್ತಿಯೇ ಮೊದಲಾದ ಅವಸ್ಥೆಗಳ ಪ್ರೇರಕನೆಂದು ನಿಶ್ಚಯವು; ಶ್ರೀ ವಿಶ್ವನು ಜಾಗ್ರದವಸ್ಥೆಯಲ್ಲಿನ ಪದಾರ್ಥಗಳನ್ನೂ, ತೈಜಸನು ಸ್ವಪ್ನ ಪದಾರ್ಥಗಳನ್ನೂ ಮತ್ತು ಪ್ರಾಜ್ಞನು ಸುಷುಪ್ತಿ ಪದಾರ್ಥಗಳನ್ನೂ ಉಂಟುಮಾಡಿ ತಾನು ಅನುಭವಿಸಿ ಜೀವರ ಅನುಭವಕ್ಕೆ ತಂದುಕೊಡುತ್ತಾನೆ. ಹೀಗೆ ಈ ಮೂರು ಅವಸ್ಥೆಗಳ ನಿಯಮನ ಕ್ರಮವನ್ನೂ ಮುಂದೆ ಹೇಳುವಂತೆ ತಿಳಿಯುವುದು.

ವಿಶ್ವೋಗೃಹೀತ್ವಾ ಜೀವಸ್ಯ ಸ್ವಪ್ರಕಾಶ ವಿಶೇಷಕಮ್ ।
ಕಂಠದೇಶಂ ಸಮಾಗತ್ಯ ಸಂಶ್ಲಿಷ್ಟಸ್ತೈಜಸೇನಯತ್ ॥ ೪೯ ॥

ಶ್ರೀವಿಶ್ವನು ಜೀವನ ಅಭಿಮಾನಾತ್ಮಕವಾದ ಹೊರಗಿನ ಪದಾರ್ಥಗಳ ಕಡೆಗೆ ಹೋಗುತ್ತಿರುವ ಲಕ್ಷ್ಯಾತ್ಮಕವಾದ ಪ್ರಕಾಶವನ್ನು ತಿರುಗಿಸಿಕೊಂಡು ಸ್ಥೂಲದೇಹದ ಕಂಠಕ್ಕೆ ಬಂದು ಅಲ್ಲಿರುವ ತೈಜಸನೆಂಬ ತನ್ನ ರೂಪದಲ್ಲಿ ತಾನು ಸೇರಿಕೊಂಡು ಈ ಜೀವನ ಪ್ರಕಾಶವನ್ನು ಆತನ ಅಧೀನಮಾಡುವನು.

ತದಾತು ತೈಜಸಃ ಸಾಕ್ಷಾತ್ಪದಾರ್ಥಾನ್ವಾಸನಾಮಯಾರ್ನ ।
ದರ್ಶಯಿಷ್ಯತಿಜೀವಾಯ ಸ್ವಪ್ನಾವಸ್ಥಾ ತದುಚ್ಯತೇ ॥ ೫೦ ॥

ಆಗ ಆ ತೈಜಸನು ಈ ಜೀವನಿಂದ ಜಾಗ್ರದವಸ್ಥೆಯಲ್ಲಿ ಇಂದ್ರಿಯಗಳಿಂದ ಅನುಭವಿಸಿದ್ದವುಗಳಿಗೆ ಸದೃಶವಾದ ವಾಸನಾಮಯವಾದ ವಿಷಯಪದಾರ್ಥಗಳನ್ನು ಜೀವನಿಗೆ ತೋರಿಸುತ್ತಾನೆ; ಇದನ್ನೇ ಸ್ವಪ್ನಾವಸ್ಥೆಯೆಂದು ಹೇಳುವರು.

ತೈಜಸಃ ಕಂಠದೇಶಾಚ್ಚ ವಿಶ್ವೇನ ಸಹಲೀಲಯಾ ।
ತತ್ಪ್ರಕಾಶಂ ಸಮಾದಾಯ ಪ್ರಾಜ್ಞೇನಾಶ್ಲಿಷ್ಯತೇ ಹೃದಿ ॥ ೫೧ ॥

ಕಂಠಸ್ಥಾನದ ದೆಸೆಯಿಂದ ಆ ತೈಜಸನು ವಿಶ್ವನಿಂದ ಸಹಿತನಾದ ಅನಾಯಾಸದಿಂದ ಆ ಜೀವಪ್ರಕಾಶವನ್ನು ತೆಗೆದುಕೊಂಡು ಪ್ರಾಜ್ಞನೊಡನೆ ಸ್ಥೂಲ ಹೃದಯಸ್ಥಾನದಲ್ಲಿ ಸೇರುವನು.

ತದಾತು ಹೃದ್ಗತಂ ಪ್ರಾಣಂ ಗಿಲಿತ್ವಾ ಜೀವಮಿಂದಿರಾ ।
ವಿಶೇತ್ತ ಮುದರೀಕೃತ್ಯ ಪ್ರಾಜ್ಞ ಮಾಲಿಂಗತೇ ರಮಾ ॥ ೫೨ ॥

ಆಗ ಆ ಹೃದಯದಲ್ಲಿರುವ ಪ್ರಾಣಸಹಿತನಾದ ಜೀವನನ್ನು ಇಂದಿರಾ ದೇವಿಯು ನುಂಗಿ ಉದರದಲ್ಲಿಟ್ಟುಕೊಂಡು ಆ ರಮಾದೇವಿಯು ಪ್ರಾಜ್ಞನನ್ನು ಆಲಿಂಗನೆ ಮಾಡಿಕೊಳ್ಳುವಳು.

ಆವಿಷ್ಕರೋತಿ ಜೀವಸ್ಯ ಪ್ರಾಜ್ಞ ಸ್ವಾನಂದವಿಪ್ರುಷಂ ।
ತಮೋಯೋಗ್ಯಸ್ಯ ಜೀವಸ್ಯ ಅನಿತ್ಯಂ ಸೃಜತೇ ಸುಖಮ್ ॥ ೫೩ ॥

ಆಗ ಮುಕ್ತಿಯೋಗ್ಯನಾದ ಜೀವನಿಗೆ, ಆ ಪ್ರಾಜ್ಞನು, ಮುಕ್ತಿಯಲ್ಲಿ ಆಗುವ ಆನಂದಾನುಭವವನ್ನು ಹೊಂದಿಸುವನು; ಆದರೆ ತಮೋಯೋಗ್ಯ ಜೀವನಿಗೆ ಅನಿತ್ಯಸುಖವನ್ನು ಸೃಷ್ಟಿಮಾಡಿ ತೋರಿಸುವನು.

ಏವಂ ಜೀವಃ ಸುಷುಪ್ತೋಂತರ್ನ ಬಾಹ್ಯಂ ವೇತ್ತಿ ಕಿಂಚನ ।
ತದಾ ಜಾಗರ್ತಿವೈಕಾಮಂ ರಮಮಾಣಪರೋ ಹರಿಃ ॥ ೫೪ ॥

ಹೀಗೆ ಸುಷುಪ್ತ್ಯವಸ್ಥೆಯಲ್ಲಿ (ಸುಖನಿದ್ರೆಯಲ್ಲಿ) ಒಳಗಿನ ಮತ್ತು ಹೊರಗಿನ ಯಾವ ವಿಷಯದ ಜ್ಞಾನವೂ ಜೀವನಿಗೆ ಇರುವುದಿಲ್ಲ; ಆಗ ಶ್ರೀಹರಿಯು ತನ್ನ ಸ್ವೇಚ್ಛೆಯಿಂದ ಶ್ರೀದೇವಿಯೊಡನೆ ವಿಹರಿಸುವನು.

ಸ ಏವ ಸುಪ್ತಜೀವಾನಾಂ
ಹೃದಯೇಷು ವ್ಯವಸ್ಥಿತಃ ।
ಜ್ಞಾನೈಶ್ವರ್ಯ ಪ್ರದಾತೃತ್ವಾ
ದ್ಭೂತಿನಾಮಾ ಪರೋ ಹರಿಃ ॥ ೫೫ ॥

ಈತನೇ ನಿದ್ರೆಯಲ್ಲಿರುವ ಜೀವರ ಸ್ವರೂಪ ಹೃದಯದಲ್ಲಿರುವ ಹರಿಯು; ಜ್ಞಾನ ಮತ್ತು ಐಶ್ವರ್ಯದಾಯಕನಾದುದರಿಂದ 'ಭೂತಿ' ಎಂದು ಹೇಳಲ್ಪಡುವನು.

ಏವಂ ಸುಪ್ತೇತು ಸಜ್ಜೀವೇ ವಾಯ್ವಾದ್ಯಾಭೂತಿನಾಮಕಮ್ ।
ಭೂರಿತಿ ಶ್ವಾಸರೂಪೇಣ ಪ್ರಶಂಸಂತಿ ನಿರಂತರಮ್ ॥ ೫೬ ॥

ಅಭೂರಿತಿಚ ದುರ್ಜೀವೇ ಭೂಶಬ್ದೋ ಭೂತಿವಾಚಕಃ ।

ಹೀಗೆ ಸುಜೀವನು ಸುಖನಿದ್ರೆಯಲ್ಲಿರುವಾಗ ವಾಯುವೇ ಮೊದಲಾದ ಸಕಲ ತತ್ವಾಭಿಮಾನಿ ದೇವತೆಗಳೂ ಈ ಭೂತಿ ಎಂಬ ಶ್ರೀಹರಿಯನ್ನು 'ಭೂಃ' ಎಂದು ಶ್ವಾಸಾದಿರೂಪದಿಂದ ಹೊಗಳುವರು; ದುರ್ಜೀವರಲ್ಲಿ ಈ ದೇವತೆಗಳು 'ಅಭೂಃ' ಎಂದು ಹೇಳುವರು. ಭೂ ಎಂಬ ಪದವು ಜ್ಞಾನೈಶ್ವರ್ಯ ಆನಂದ ಮೊದಲಾದ ಪುರುಷಾರ್ಥದಾಯಕವಾದುದು; 'ಅಭೂಃ' ಎಂಬ ಪದವು ತದ್ವಿರುದ್ಧಾರ್ಥವುಳ್ಳದ್ದು. ಇದನ್ನನುಸರಿಸಿ ನಿದ್ರೆಯ ಕಾಲದಲ್ಲಿ ಮುಕ್ತಿಯೋಗ್ಯಜೀವನು 'ಭೂ' ಎಂದೂ ಮತ್ತು ತಮೋಯೋಗ್ಯಜೀವನು 'ಅಭೂ' ಎಂದೂ ಗೊರಕೆ ಹೊಡೆಯುವರು. ಇದರ ಸಹಾಯದಿಂದ ಜೀವರ ಸ್ವರೂಪವನ್ನು ನಿರ್ಣಯಿಸಲು ಅನುಕೂಲವಾಗುವುದು.

ಯೋ ವೇದ ಭೂತಿನಾಮಾನಮಚಿರಾದ್ಭೂತಿ ಮಾಪ್ನುಯಾತ್। ೫೭ ।

ಯಾರು ಈ ಭೂತಿ ಎಂಬ ಶ್ರೀನಾರಾಯಣನನ್ನು ಇಂತಹ ಮಹಿಮೆಯುಳ್ಳವನೆಂದು ತಿಳಿಯುವರೋ ಅವರು ಅತಿ ಶೀಘ್ರವಾಗಿಯೇ ಜ್ಞಾನ, ಐಶ್ವರ್ಯ, ಆನಂದಾದಿ ಸಂಪತ್ತುಗಳನ್ನು ಹೊಂದುವರು.

ಪುನರ್ವಿಶ್ವಸ್ತೈಜಸೇನ ಸಾರ್ಧಂ ಜೀವಕಲಾವೃತಃ ।
ಕಂಠಂ ಸಮಾಗತೇ ಸ್ವಪ್ನಃ ಪುನರ್ಭವತಿ ತತ್ರಹಿ ॥ ೫೮ ॥

ಹೀಗೆಯೇ ಹಿಂದಕ್ಕೆ ತಿರುಗುವಾಗ ವಿಶ್ವನು ತೈಜಸನಿಂದ ಸಹಿತನಾಗಿ ಜೀವಪ್ರಕಾಶವನ್ನು ತೆಗೆದುಕೊಂಡು ಕಂಠದೇಶಕ್ಕೆ ಬರಲು ಮತ್ತು ಸ್ವಪ್ನವಾಗುವುದು.

ವಿಹಾಯ ತೈಜಸಂ ವಿಶ್ವೇ ಪುನಃ ಚಕ್ಷುಃ ಸಮಾಗತೇ ।
ತದಾ ಜಾಗ್ರದವಸ್ಥಾಸ್ಯಾದೇವಂ ವಿಜ್ಞೇಯಮಂಜಸಾ ॥ ೫೯ ॥

ತೈಜಸನನ್ನು ಅಲ್ಲಿಯೇ ನಿಲ್ಲಿಸಿ ವಿಶ್ವನು ಕಣ್ಣಿಗೆ ಬರಲು ಆಗ ಜಾಗ್ರದವಸ್ಥೆಯುಂಟಾಗುವುದು; ದೇಹಿಯು ಎಚ್ಚರಹೊಂದುವನು; ಹೀಗೆ ಎಲ್ಲವನ್ನೂ ಚೆನ್ನಾಗಿ ತಿಳಿಯುವುದು.

ವಾಸುದೇವಸ್ತುರೀಯಾಖ್ಯಃ ಶೀರ್ಷೋಪರಿ ಸಮಾಸ್ಥಿತಃ ।
ಬ್ರಹ್ಮರಂಧ್ರಸ್ಥಿತಬ್ರಹ್ಮನಾಡ್ಯಾಂ ನಾರಾಯಣಃ ಸ್ಥಿತಃ ॥ ೬೦ ॥

ವಾಸುದೇವನೆಂಬ ತುರೀಯನು ತಲೆಯಮೇಲಿರುವನು; ಬ್ರಹ್ಮರಂಧ್ರದಲ್ಲಿರುವ ಬ್ರಹ್ಮನಾಡಿಯಲ್ಲಿ ಶ್ರೀನಾರಾಯಣನಿರುವನು.

ಆದಿತ್ಯನಾಮಕಶ್ಚಾಯು
ಮಾದಾನಾತ್ಪುರುಷಾಯುಷಾಮ್ ।
ವಾಸುದೇವೋ ಹಿ ಭಗವಾನ್
ದಕ್ಷಿಣಾಕ್ಷಿ ಸ್ಥಿತೋ ನೃಣಾಮ್ ॥ ೬೧ ॥

ಈತನೇ ಜೀವರ ಆಯುಷ್ಯವನ್ನು ಅಳೆಯುವವನಾದುದರಿಂದ ಆದಿತ್ಯನೆಂದು ಪ್ರಸಿದ್ಧನಾಗಿರುವನು; ಮನುಜರ ಬಲಗಣ್ಣಿನಲ್ಲಿ ಐಶ್ವರ್ಯಾದಿ ಷಡ್ಗುಣಪೂರ್ಣನಾದ ಶ್ರೀ ವಾಸುದೇವನಿರುವನು.

ವಾಸುದೇವೋ ಹಿ ಯಚ್ಚಕ್ಷುರ್ಮಂಡಲಾದುತ್ಕ್ರಮಿಷ್ಯತಿ ।
ತದಾ ಪಶ್ಯತಿ ವೈ ಜೀವೋ ಮಂಡಲಂ ತು ವಿರಶ್ಮಿಕಮ್ ॥ ೬೨ ॥

ಯಾವಾಗ ಶ್ರೀವಾಸುದೇವನು ಈ ದೇಹಿಯ ನೇತ್ರಮಂಡಲದ ದೆಸೆಯಿಂದ ಹೊರಟು ಹೋಗುವನೋ ಆಗ ಈತನು ಸೂರ್ಯ ಅಥವಾ ಚಂದ್ರ ಮಂಡಲವನ್ನು ಕಿರಣವಿಲ್ಲದಿರುವಂತೆ ನೋಡುವನು.

ನರಃ ಪ್ರಾಯಃ ಸಪ್ತರಾತ್ರಾದಧಿಕಂ ನಹಿ ಜೀವತಿ ।
ಚಕ್ಷುರಂತಸ್ಥಿತೋ ಯಸ್ಮಾದ್ವಾಮನಃ ಸಂಗಮೋಜ್ಝಿತಃ ॥ ೬೩ ॥

ಯಾವಾಗ ಮೇಲೆ ಹೇಳಿದಂತೆ ಸೂರ್ಯ ಅಥವಾ ಚಂದ್ರಮಂಡಲವನ್ನು ಕಿರಣಗಳಿಲ್ಲದ ಹಾಗೆ ನೋಡುವವನು ಆ ದಿನದಿಂದ ಏಳು ದಿನಗಳ ಮೇಲೆ ಬದುಕುವುದಿಲ್ಲ; ನೇತ್ರದೊಳಗಿರುವ ಶ್ರೀವಾಮನನು ಸಂಗರಹಿತನು.

ವಸ್ತ್ವಸಂಗಮಭೂಚ್ಚಕ್ಷುಸ್ತಸ್ಮಾದ್ವೇದ್ಯಃ ಸ ವಾಮನಃ ।
ನಾಸಾಭಿಮಾನಿನೌ ಜ್ಞೇಯಾವಶ್ವಿನೌ ಸ್ವರ್ಭಿಷಗ್ವರೌ ।। ೧೪ ।।

ನೇತ್ರಗಳಿಂದ ನೋಡಿದರೂ ಯಾವುದೊಂದು ಪದಾರ್ಥದ ಅಥವಾ ಮನುಷ್ಯರ ಸ್ತ್ರೀಯರ ರೂಪು ಗ್ರಹಣಮಾಡಿದರೂ ತನ್ನಲ್ಲಿಯೇ ಯಾವಾಗಲೂ ಇಟ್ಟುಕೊಳ್ಳದಿರುವದೇ ಅಸಂಗವು; ಆದುದರಿಂದಲೇ ಅಲ್ಲಿರುವ ವಾಮನನು ಸಂಗರಹಿತನೆಂದೂ ಹಾಗೆ ಸಂಗವಿಲ್ಲದಿರುವುದರಿಂದಲೇ ವಾಮನನೆಂದೂ ಹೇಳುವರು. ಮೂಗಿಗೆ ದೇವತೆಗಳ ವೈದ್ಯಶ್ರೇಷ್ಠರಾದ ನಾಸತ್ಯದಸ್ರರೆಂಬ ಅಶ್ವಿನೀದೇವತೆಗಳು ಅಭಿಮಾನಿಗಳು.

ತಯೋ ರ್ಧನ್ವಂತರಿ ಶ್ಚಿಂತ್ಯಃ ಸರ್ವವ್ಯಾಧಿ ನಿವಾರಕಃ ।
ಋತಂಭರಶ್ಚ ಋೂಘಶ್ಚ ನಾಸಿಕಾಪುಟಯೋಃ ಸ್ಥಿತಃ ।। ೧೫ ।।

ಈ ಅಶ್ವನೀ ದೇವತೆಗಳಲ್ಲಿ ಸಕಲ ರೋಗಪರಿಹಾರಕನಾದ ಧನ್ವಂತರಿ ನಾಮಕ ಹರಿಯನ್ನು ತಿಳಿಯುವುದು; ಮೂಗಿನ ರಂಧ್ರಗಳಲ್ಲಿ ಋತಂಭರ ಮತ್ತು ಋೂಘರೆಂಬ ಎರಡು ಭಗವದ್ರೂಪಗಳಿರುವುವು.

ನಾಸಿಕಾಯಾಂ ನತಸ್ಥಾನೇ ಸೂರ್ಯಲೋಕಃ ಪ್ರತಿಷ್ಠಿತಃ ।
ತತ್ರತ್ಯಾದಿತ್ಯಗೋವಿಷ್ಣುರಿರಾಮಯ ಇತೀರಿತಃ ।। ೧೬ ।।

ಮೂಗಿನ ಮೇಲೆ ಹುಬ್ಬುಗಳ ನಡುವೆ ಹಳ್ಳವಾಗಿರುವ ಜಾಗದಲ್ಲಿ ಸೂರ್ಯಲೋಕವಿರುವುದು; ಅಲ್ಲಿರುವ ಆದಿತ್ಯನಲ್ಲಿ ವಿಷ್ಣುವು ಇರಾಮಯನೆಂಬ ನಾಮದಿಂದಿರುವನು.

ಇಚ್ಛಾನುರೂಪಂ ಹಿ ಸುಖಂ ಈರೇತಿ ಪರಿಕೀರ್ತಿತಮ್ ।
ಇಚ್ಛಾನಂದ ಸ್ವರೂಪತ್ವಾತ್ಸ ಏವೋಕ್ತೋ ಹಿರಣ್ಮಯಃ ।। ೧೭ ।।

ತನ್ನ ಅಪೇಕ್ಷೆಗೆ (desire) ಅನುಗುಣವಾದ ಸುಖವು 'ಈರ' ಎಂದು ಹೇಳಲ್ಪಡುವುದು; ಇಚ್ಛೆ ಮತ್ತು ತದನುಸಾರಿಯಾದ ಆನಂದವೇ ಸ್ವರೂಪಭಾವವುಳ್ಳವನಾದುದರ ದೆಸೆಯಿಂದಲೇ ಆತನು ಹಿರಣ್ಮಯನೆಂದು ಹೇಳಲ್ಪಡುವನು.

ಹಿರಿಕ್ಸುಖಂ ಹಿರಣ್ಯಂ
ಸ್ಯಾದಿತಿಸ್ವರ್ಣಮಯೋ ಹರಿಃ ।
ಉಚ್ಛ್ವಾಸೇ ಭಾರತೀ ಜ್ಞೇಯಾ
ಶ್ವಾಸೇ ಪ್ರಾಣಂ ವಿಚಿಂತಯೇತ್ ।। ೧೮ ।।

ನಿರ್ದೋಷವಾದ ಸುಖವು ಹಿರಣ್ಯವೆಂದು ಹೇಳಲ್ಪಡುವುದು; ಆದುದರಿಂದಲೇ ಸ್ವರ್ಣಮಯನು ಶ್ರೀಹರಿಯು; ಹೊರಗೆ ಬರುವ ಘಾಳಿಯಲ್ಲಿ ಪ್ರಾಣನನ್ನು ಧ್ಯಾನಮಾಡುವುದು.

ಪ್ರಾಣಶ್ಚ ಹಂಸನಾಮಾಸೌ ಉಪಾಸ್ತೇ ಹಂಸನಾಮಕಮ್ ।
ಸೂರ್ಯಶ್ಚ ದಕ್ಷಿಣಶ್ವಾಸೆ ವಾಮೆ ಸೋಮ ಉದಾಹೃತಃ ।। ೧೯ ।।

ಈ ಪ್ರಾಣನನ್ನು ಹಂಸನೆಂದು ಹೇಳುವರು; ಈತನು ಹಂಸನೆಂಬ ಹರಿಯನ್ನು ಉಪಾಸನೆ ಮಾಡುವನು; ಮೂಗಿನ ಬಲರಂಧ್ರದಿಂದ ಹೋಗುವ ವಾಯುವಿನಲ್ಲಿ ಸೂರ್ಯನೂ, ಎಡರಂಧ್ರದಲ್ಲಿ ಚಂದ್ರನೂ ಇರುವರು.

ಶ್ವಾಸಶ್ಚ ಹಂಸದೈವತ್ಯೋ ಹಂಸಃ ಪ್ರಾಣೇಸ್ಥಿತೋ ಹರಿಃ ।
ಸರ್ವದೋಷವಿಹೀನತ್ವಾತ್ಸರ್ವಸಾರತ್ವತೋ ಪಿಚ ।। ೨೦ ।।

ಹಂಸ ಇತ್ಯುಚ್ಯತೇ ಸೋಽಪಿ
ಪ್ರಾಣಸ್ಥಃ ಶುಚಿಷತ್ಸ್ಮೃತಃ ।
ತಸ್ಮಾದೇತತ್ಪೂರಕಾದ್ಯೈಃ
ಪ್ರಾಣಾಯಾಮೋಽಘಶೋಷಣಃ ।। ೨೧ ।।

ಈ ಶ್ವಾಸವು ಶ್ರೀ ಹಂಸ ದೇವತಾಕವಾದುದು; ಈ ಹಂಸರೂಪೀ ನಾರಾಯಣನು ಮುಖ್ಯಪ್ರಾಣನಲ್ಲಿರುವನು; ಸಕಲ ದೋಷರಹಿತ ನಾದುದರಿಂದಲೂ ಸರ್ವಸಾರ ಸ್ವಭಾವವುಳ್ಳವನಾದುದರಿಂದಲೂ ಹಂಸನೆಂದು ಆತನ ಪ್ರಸಿದ್ಧಿಯು. ಆತನು ಪ್ರಾಣ (ವಾಯು)ನಲ್ಲಿರುವಾಗ 'ಶುಚಿಷತ್' ಎಂದು ಹೇಳಲ್ಪಡುವನು; ಆದುದರಿಂದ, ಪೂರಕ, ರೇಚಕ ಮತ್ತು ಕುಂಭಕರೂಪವಾದ ಪ್ರಾಣಾಯಾಮ ಮಾಡಿದರೆ ಸಕಲ ಪಾಪಗಳೂ ಒಣಗಿ ಹೋಗುವುವು.

ಪೂರಕವೆಂದರೆ ಎಡಗಡೆಯ ಮೂಗಿನ ರಂಧ್ರದಿಂದ ಗಾಳಿಯನ್ನು ಒಳಗೆ ತೆಗೆದುಕೊಳ್ಳುವುದು; ರೇಚಕವೆಂದರೆ ಗಾಳಿಯನ್ನು ಮೂಗಿನ ಬಲರಂಧ್ರದಿಂದ ಹೊರಗೆ ಬಿಡುವುದು; ಮತ್ತು ಕುಂಭಕವೆಂದರೆ ಒಳಗೆ ತೆಗೆದು ಕೊಂಡ ಗಾಳಿಯನ್ನು ಕೆಲವು ಹೊತ್ತು ಹೃದಯದಲ್ಲಿ ತಡೆದು ನಿಲ್ಲಿಸಿರುವುದು.

ಲೃಶಲೃಜೀಚ ವಿಜ್ಞೇಯೌ ಗಂಡಯೋರೋಷ್ಠಯೋಃ ಸ್ಥಿತೌ ।
ಏಕಾತ್ಮೈರೌ ದಂತಪಙ್ತ್ಯೋಸ್ಥಿತಾವೋಜೋಭೃತೌರಸೌ ।। ೨೨ ।।

ಲೃಶ ಮತ್ತು ಲೃಜಿ ಎಂಬ ಎರಡು ಭಗವದ್ರೂಪಗಳು ಬಲ ಮತ್ತು ಎಡ ಕಪೋಲಗಳಲ್ಲಿಯೂ, ಏಕಾತ್ಮ ಮತ್ತು ಐರರೆಂಬ ಎರಡು ರೂಪಗಳು, ಎರಡು

ತುಟಿಗಳಲ್ಲಿಯೂ, ಎರಡು ಹಲ್ಲುಗಳ ಸಾಲಿನಲ್ಲಿಯೂ ಓಜೋಭೃತ ಮತ್ತು ಔರಸ ಎಂಬ ಎರಡು ಭಗವದ್ರೂಪಗಳೂ ಇರುವುವು.

ಜಿಹ್ವಾಭಿಮಾನೀ ವರುಣೋ ಮತ್ಸ್ಯಸ್ತಸ್ಯ ನಿಯಾಮಕಃ ।
ವಾಗಿಂದ್ರಿಯ ಸ್ಥಿತೋವಹ್ನಿಸ್ತಸ್ಮಿನ್ವೇದ್ಯೋ ವಿಶಾಸಹಿಃ ॥ ೭೩ ॥

ರುಚಿಗ್ರಹಣಮಾಡುವ ನಾಲಿಗೆಗೆ ವರುಣನು ಅಭಿಮಾನಿಯು ಅವನಲ್ಲಿ ಮತ್ಸ್ಯರೂಪೀ ಹರಿಯು ನಿಯಾಮಕನು; ಮಾತನಾಡುವ ಶಕ್ತಿಯುಳ್ಳ ವಾಗೀಂದ್ರಿಯದಲ್ಲಿ ಅಗ್ನಿಯು ಅಭಿಮಾನಿಯು; ತನ್ನಿಯಾಮಕನು ವಿಷಾಸಹಿ ಎಂಬ ಪರಶುರಾಮರೂಪೀ ಹರಿಯು.

ತಥಾ ನಾರಾಯಣೀರೂಪಂ
ರಾತ್ರಿಸೂಕ್ತಾಧಿದೈವತಾಮ್ ।
ವಾಚ್ಯರ್ಥಗರ್ಭೋ ವಿಜ್ಞೇಯೋ
ವಾಗ್ಗತಾಹಿ ಸರಸ್ವರತೀ ॥ ೭೪ ॥

ಹಾಗೆಯೇ ರಾತ್ರಿಸೂಕ್ತದ ಅಧಿದೇವತೆಯಾದ ನಾರಾಯಣೀ ಎಂಬ ಶ್ರೀ ಹರಿಯ ಸ್ತ್ರೀರೂಪವನ್ನು 'ವಾಚಿ'ಯಲ್ಲಿ, ವಾಕ್ಕಿನಲ್ಲಿ ಸರಸ್ವತೀ ದೇವಿಯನ್ನೂ ಅಲ್ಲಿ ನಿಯಾಮಕನಾದ ಅರ್ಥಗರ್ಭನಾಮಕನಾದ ಶ್ರೀಹರಿಯನ್ನೂ ತಿಳಿಯುವುದು.

ತತ್ರ ವಾಗೀಶ್ವರಃ ಸರ್ವಪಾಲನಾದಪಿ ಸರ್ವತಃ ।
ವಿಶಿಷ್ಟತ್ವಾತ್ಪವಿಃ ಪ್ರೋಕ್ತಃ ಪ್ರಲೀನಾಖಿಲ ಕುತ್ಸಿತಃ ॥ ೭೫ ॥

ಕುಲೀತ್ಯುಕ್ತೋಹರಿಃ ಸಾಕ್ಷಾಸ್ತ್ರೀರೂಪೋ ಹಯಶೀರ್ಷಕಃ ।
ಯೋ ಹಯಾಸ್ಯಮುಪಾಸೀತ ತಸ್ಯ ವಿದ್ಯಾ ಫಲಿಷ್ಯತಿ ॥ ೭೬ ॥

ಅಲ್ಲಿ ವಾಕ್ಕಿಗೆಲ್ಲ ಪ್ರಭುವಾಗಿ ಸಕಲ ಕಡೆಗಳಿಂದಲೂ ಸರ್ವರನ್ನೂ ಪಾಲನೆ ಮಾಡೋಣದರಿಂದಲೂ, ಸರ್ವೋತ್ತಮನಾದುದರಿಂದಲೂ 'ಪವಿಃ' ಎಂದು ಹೇಳಲ್ಪಡುವವನು; ಸಕಲ ನೀಚ ವ್ಯಾಪಾರದ ದೆಸೆಯಿಂದ ರಹಿತ ನಾಗಿರೋಣದ್ದರಿಂದ 'ಕುಲೀ' ಎಂದು ಆತನ ನಾಮವು; ಇದು ಸ್ತ್ರ್ಯಾತ್ಮಕವಾದ ಹಯಗ್ರೀವ ರೂಪವು; ಈ ಹಯಮುಖನನ್ನು ಉಪಾಸನೆ ಮಾಡುವವರಿಗೆ ಸಕಲ ಮಂತ್ರಸಿದ್ಧಿಯೂ ಮತ್ತು ಸಕಲ ವಿದ್ಯೆಯ ಪ್ರಾಪ್ತಿಯೂ ಆಗುವುದು.

(ಇದು ಗಾಯತ್ರೀ ಪ್ರತಿಪಾದ್ಯರೂಪವು; ಗಾಯತ್ರಿಯು ವೇದ ಮಾತೆಯು; ಆದುದರಿಂದ ಗಾಯತ್ರೀ ಸಿದ್ಧಿಯುಳ್ಳವರಿಗೆ ಇತರ ಸಕಲ ಮಂತ್ರಗಳ ಸಿದ್ಧಿಯಾಗುವುದು ಎಂದು ನಿಶ್ಚಯವು).

ಪಾಣಿದ್ವಯಾಭಿಮಾನೀ ಚ ಜ್ಞೇಯೋ ದಕ್ಷಃ ಪ್ರಜಾಪತಿಃ ।
ಮಧುಘ್ನೋ ದಕ್ಷಿಣೆ ಹಸ್ತೇ ಕಪಿಲಾದ್ಯಾಶ್ಚ ಸಂಧಿಷು ॥ ೭೭ ॥

ಎರಡು ಕೈಗಳಿಗೂ ದಕ್ಷಪ್ರಜಾಪತಿಯು ಅಭಿಮಾನಿಯು; ಬಲದ ಹಸ್ತದಲ್ಲಿ ಮಧುಸೂದನನೂ ಸಂಧಿಗಳಲ್ಲಿ ಕಪಿಲ, ಖಪತಿ, ಗರುಡಾಸನ, ಘರ್ಮ ಮತ್ತು ಜಸಾರ ಎಂಬ ಐದು ಮೂರ್ತಿಗಳಿರುವರು.

ಮೂರ್ತಯಃ ಪಂಚವಿಜ್ಞೇಯಾ
ಮಾತೃಕಾವರ್ಣದೇವತಾಃ ।
ದಕ್ಷಿಣಾಂಗುಷ್ಠ ಮೂಲೇತು
ತೀರ್ಥಂ ಬ್ರಾಹ್ಮಮುದಾಹೃತಮ್ ॥ ೭೮ ॥

ಹಿಂದೆ ಹೇಳಿದ ಐದುಮೂರ್ತಿಗಳು ಮಾತೃಕಾವರ್ಣನಿಯಾಮಕ ಮತ್ತು ಪ್ರತಿಪಾದ್ಯ ಮೂರ್ತಿಗಳು; (ಕ ವರ್ಗದ ಐದು ಅಕ್ಷರಗಳು) ಬಲಗೈನ ಹೆಬ್ಬೆಟ್ಟಿನ ಮೂಲಭಾಗವು ಬ್ರಾಹ್ಮ (ಬ್ರಹ್ಮ ಸಂಬಂಧಿ) ತೀರ್ಥವೆಂದು ನಿಶ್ಚಯವು.

ಕನಿಷ್ಠಾಮೂಲಗಂ ಯತ್ತತ್ಪ್ರಾಜಾ-
ಪತ್ಯಂ ತದಾರ್ಷಕಮ್ ।
ತರ್ಜನೀ ಮೂಲದೇಶೇತು
ಪೈತೃಕಂ ತೀರ್ಥಮುತ್ತಮಮ್ ॥ ೭೯ ॥

ಕಿರುಬೆರಳಿನ ಮೂಲದಲ್ಲಿ ಪ್ರಾಜಾಪತ್ಯವೆಂಬ ಋಷಿತೀರ್ಥವಿರುವುದು ತರ್ಜನಿಯ (ಹೆಬ್ಬೆರಳಿನಿಂದ ಎರಡನೆಯದು) ಬೆರಳಿನ ಬುಡದಲ್ಲಿ ಪಿತೃತೀರ್ಥವಿರುವುದು.

ಅಂಗುಲ್ಯಗ್ರೇ ದೇವತೀರ್ಥ-
ಮಾಗ್ನೇಯಂ ಕರಮಧ್ಯಗಮ್ ।
ಜ್ಞಾತ್ವೈವಂ ಪಂಚತೀರ್ಥಾನಿ
ತದ್ದ್ವಾರಾ ಕೃತಮಕ್ಷಯಮ್ ॥ ೮೦ ॥

ಬೆರಳುಗಳ ತುದಿಯಲ್ಲಿ ದೇವತೀರ್ಥವು ಅಂಗೈಮಧ್ಯದಲ್ಲಿ ಅಗ್ನಿತೀರ್ಥ ಇರುವುವು; ಹೀಗೆ ಐದು ತೀರ್ಥಗಳನ್ನು ತಿಳಿದು ಮಾಡಿದ ಸಕಲ ಸತ್ಕರ್ಮವು ನಾಶರಹಿತವಾದ ಫಲಕ್ಕೆ ಕಾರಣವಾಗುವುದು.

ಶ್ರೀಧರೋ ವಾಮಹಸ್ತಸ್ಥ ಶ್ಚಾರ್ವಂಗಾದ್ಯಾಶ್ಚ ಸಂಧಿಗಾಃ ।
ವೇದ್ಯಸ್ತುಂದೇ ಮನುರ್ದೇವಃ ಪರೋ ದಕ್ಷಿಣಪಾರ್ಶ್ವಕೇ ॥ ೮೧ ॥

ಶ್ರೀಧರನು ಎಡದ ಹಸ್ತದ ನಿಯಾಮಕನು; ಚಾರ್ವಂಗ ಛಂದೋಗಮ್ಯ, ಜನಾರ್ದನ, ಝಾಟತಾರಿ ಮತ್ತು ಇಾಮ ಈ ಐದು ಭಗವದ್ರೂಪಗಳೂ ಎಡಗಡೆಯ ಬಾಹುಸಂಧಿಗಳಲ್ಲಿರುವವರು; ತುದಿಯಲ್ಲಿ ವೃಷಣಕ್ಕೂ ಆಸನಕ್ಕೂ ಮಧ್ಯದಲ್ಲಿರುವ ಗಡ್ಡೆಮನುವೂ, ಮತ್ತು ದೇಹದ ಬಲಪಕ್ಕೆಯಲ್ಲಿ ಪರನೂ ಇರುವರು.

ವಾಮೇ ಜ್ಞೇಯಃ ಫಲೀ ಯಜ್ಞೋ
ಹೃದಿ ಪೃಷ್ಠೆ ಸ್ಥಿತೋ ಬಲೀ ।
ಕಟಿದೇಶೇಽನಿರುದ್ಧಶ್ಚ ಗುಹ್ಯೇ
ಸ್ವಾಯಂಭುವೋ ಮನುಃ ॥ ೮೨ ॥

ಎಡಪಕ್ಕೆಯಲ್ಲಿ ಫಲಿಯೂ, ಯಜ್ಞನು ಹೃದಯದಲ್ಲಿಯೂ ಹಿಂಭಾಗದಲ್ಲಿ (ಬೆನ್ನು) ಬಲಿಯೂ, ಪಿರ್ರೆಗಳಲ್ಲಿ ಅನಿರುದ್ಧನೂ ಇರುವರು; ಗುಹ್ಯೇಂದ್ರಿಯದಲ್ಲಿ ಸ್ವಾಯಂಭುವ ಮನುವು ಅಭಿಮಾನಿಯು.

ತಸ್ಮಿನ್ ಭಗೋ ಹರಿಶ್ಚಿಂತ್ಯಃಪ್ರಜಾಪತಿರಿತೀರಿತಃ ।
ರೇತೋಭಿಮಾನೀ ಚಾದಿತ್ಯಸ್ತಸ್ಮಾನ್ನಾದಿತ್ಯನಾಮಕಃ ॥ ೮೩ ॥

ಅಲ್ಲಿ ಭಗನೆಂಬ ಹರಿಯನ್ನು ತಿಳಿಯುವುದು; ಅವನನ್ನು 'ಪ್ರಜಾಪತಿ' ಎಂದು ಹೇಳುವರು; ರೇತಸ್ಸಿಗೆ ಅಭಿಮಾನಿಯು ಆದಿತ್ಯನು (ಸೂರ್ಯನು); ಆತನಲ್ಲಿ ಆದಿತ್ಯನೆಂಬ ಹರಿ ಇರುವನು.

ಪುಂರೂಪೇ ಭಗವಾನ್ವಿಷ್ಣುಃ ರೇತಸ್ಯಪಿ ಪುಮಾತ್ಮಕಃ ।
ತಸ್ಮಾಚ್ಛುಕ್ಲಾನ್ನಭೀಭತ್ಸೇ ತ್ಭಾರ್ಯಾ ಭರ್ತೃಗತಾದೃಶಮ್ ॥ ೮೪ ॥

ಪುರುಷನಲ್ಲಿಯೂ ಆತನ ರೇತಸ್ಸಿನಲ್ಲಿಯೂ ಹರಿಯು ಪುರುಷರೂಪದಿಂದಲೇ ಇರುವನು; ಆದುದರಿಂದ, ಗಂಡನಾದ ಪುರುಷನಲ್ಲಿರುವ, ರೇತಸ್ಸನ್ನು ಪತ್ನಿಯು ನಿರಾಕರಿಸಬಾರದು ಮತ್ತು ಅಸಹ್ಯಪಡಬಾರದು.

ಏವಂ ಸ್ತ್ರೀಲೋಹಿತೇ
ಪ್ಯಗ್ನಿಸ್ತದ್ಗತೋಽಪ್ಯಗ್ನಿನಾಮಕಃ ।
ಸ್ತ್ರೀರೂಪೀ ಸಂಸ್ಥಿತಂ ತಸ್ಮಾನ್ನ
ಭೀಭತ್ಸೇತ ಲೋಹಿತಮ್ ॥ ೮೫ ॥

ಹೀಗೆಯೇ ಹೆಂಗಸಿನ ಯೋನಿದ್ವಾರದಿಂದ ಬರುವ ರಕ್ತದಲ್ಲಿ ಅಗ್ನಿಯು ಅಭಿಮಾನಿಯು; ಅಲ್ಲಿ ಹೆಂಗಸಿನ ರೂಪದಿಂದಲೇ ಅಗ್ನಿ ಎಂಬ ಶ್ರೀಹರಿಯು ಇರುವನು; ಆದುದರಿಂದ ಅದನ್ನು ತಿರಸ್ಕರಿಸಬಾರದು.

ಪುಂಸ್ತ್ರೀ ರೂಪಾಭಿಯೋಗೇನ ಪಿತೃಸ್ಥಃ ಪುತ್ರತಾಮಿಯಾತ್ ।
ಅಂಶಾಂಶಿತ್ವೇಚ್ಛಯಾ ವಿಷ್ಣುರ್ನಚೇದಿಚ್ಛಾ ನ ಸಂತತಿಃ ॥ ೮೬ ॥

ಪುರುಷ ಮತ್ತು ಸ್ತ್ರೀಸಂಗಮದಿಂದ ಪುರುಷನಲ್ಲಿರುವ (ತಂದೆ) ವಿಷ್ಣುವು ಅಂಶಾಂಶಿಯಾಗಬೇಕೆಂಬ ಆಶೆಯಿಂದ ಪುತ್ರಭಾವವನ್ನು ಹೊಂದುವನು; ಹಾಗೆ ಶ್ರೀಹರಿಯ ಇಚ್ಚೆಯೇ ಇಲ್ಲದಿದ್ದರೆ ಮಕ್ಕಳಾಗುವುದಿಲ್ಲ.

ಶುಕ್ಲಾಧಿಕೇ ಪುಮಾನೇವ
ಕನ್ಯಾಸ್ಯಾ ಚ್ಛೋಣಿತೇಧಿಕೇ ।
ತಯೋಃ ಸಮೇತು ಷಂಢಃ
ಸ್ಯಾದೇತನ್ನ್ಯೂನಾಧಿಕಾಧಿಕಮ್ ॥ ೮೭ ॥

ಶುಕ್ಲವು ಹೆಚ್ಚಾಗಿದ್ದರೆ ಗಂಡೂ, ಶೋಣಿತವು ಅಧಿಕವಾದರೆ ಹೆಣ್ಣೂ ಎರಡೂ ಸಮವಾದರೆ ನಪುಂಸಕನೂ ಹುಟ್ಟುವರು; ಇದೇ ನಿರ್ಣಯವು.

ಆದಿತ್ಯಾಗ್ನಿ ನಿಯೋಗೇನ
ಭವೇತ್ಕರ್ಮ ಸ್ವಭಾವತಃ ।
ಆನಂದಾಖ್ಯೋರಮೇತ್ ಸ್ತ್ರೀ
ಪುಂಸ್ಥಿತಃ ಪುರುಷೋತ್ತಮಃ ॥ ೮೮ ॥

ಕರ್ಮಗಳ ಸ್ವಭಾವದ ದೆಸೆಯಿಂದ ಆದಿತ್ಯ ಮತ್ತು ಅಗ್ನಿಯು ಪರಸ್ಪರ ಸಂಬಂಧದಿಂದ ಆನಂದನೆಂಬ ಪುರುಷ ಮತ್ತು ಸ್ತ್ರೀಯರಲ್ಲಿರುವ ಶ್ರೀನಾರಾಯಣನು (ಪುರುಷೋತ್ತಮನು) ಇಬ್ಬರಿಗೂ ತನ್ನ ವಿಹಾರದಿಂದ ಆನಂದವನ್ನುಂಟುಮಾಡುವನು.

ದಂಪತ್ಯೋಃ ಪ್ರೀತಿಮುತ್ಪಾದ್ಯ
ಸ್ವೇಚ್ಛಯೈವ ನ ಚಾನ್ಯಥಾ ।
ತಯೋಶ್ಚ ಮಿಥುನೀಭಾವಂ
ಯಥೋ ನಯತಿ ಯದ್ಧರಿಃ ॥ ೮೯ ॥

ಗಂಡ ಹೆಂಡರಿಬ್ಬರಿಗೂ ಪರಸ್ಪರ ಪ್ರೀತಿಯನ್ನು ಹುಟ್ಟಿಸಿ ತನ್ನ ಇಚ್ಛೆಯಿಂದಲೇ ಅವರಿಬ್ಬರಿಗೂ ಒಂದೇ ಜಾಗದಲ್ಲಿದ್ದು ವಿಹರಿಸುವ ಭಾವವನ್ನು ಹೇಗೆ ಮಾಡುವನೋ ಅದನ್ನು ಹೇಳುವರು.

ತತ ಸ್ಸಮಿಥುನೋನಾಮ ಪಂಚಧಾತ್ರ ವ್ಯವಸ್ಥಿತಃ ।
ಕರೋತಿ ಋತುಸಂಕೇತಂ ತಸ್ಯಾಂ ಹಿಂಕಾರ ನಾಮಕಃ ॥ ೯೦ ॥

ಸುಖಂ ಚಾನುಭವತ್ಯೇಷಃ ತಸ್ಮಿನ್ ಪ್ರಸ್ತಾವನಾಮಕಃ ।
ಸಃಸ್ತ್ರೀಗತಯಾ ಶೇತೆ ರಮಯೇ ದುದ್ಗೀಥ ನಾಮಕಃ ॥ ೯೧ ॥

ಪ್ರತಿಃ ಸ್ತ್ರೀಸಹಿತಃ ಶೇತೆ ಪ್ರತಿಹಾರಾ ಭಿಧೋ ಹರಿಃ ।
ಕಾಲೋ ಗಚ್ಛತಿ ಯಃ ಪಾರಂ ತಸ್ಮಿನ್ಸಃ ನಿಧನಾಭಿಧಃ ॥ ೯೨ ॥

ಆ ಮಿಥುನೀಭಾವವು ಐದು ವಿಭಾಗವಾಗಿರುವುವು; ಋತುಕಾಲವುಂಟಾಗುವುದು; ಆಗ ಸ್ತ್ರೀಯರಲ್ಲಿ ಹಿಂಕಾರನಾಮಕನಾದ ಹರಿ ಇರುವನು; ಪುರುಷನು ಸುಖಾನುಭವ ಮಾಡುವನು; ಆಗ ಅಲ್ಲಿ ಪ್ರಸ್ತಾವ ನಾಮಕನು; ದಂಪತಿಗಳು ಒಂದೇ ಹಾಸಿಗೆಯಲ್ಲಿದ್ದು ವಿಹರಿಸುವರು; ಆಗ ಉದ್ಗೀಥ ನಾಮಕನು; ಆ ಸ್ತ್ರೀಯೊಡನೆ ಹಾಗೆಯೇ ಬಹುಕಾಲ ಇರುವಾಗ ಅಲ್ಲಿ ಪ್ರತಿಹಾರನು; ರೇತಸ್ಸಿನ ಸ್ಖಲನಾನಂತರ ನಿಧನನಾಮಕನು. ಹೀಗೆ ಐದು ಸಾಮಗಳು. ಹೀಗೆ ಈ ಐದು ಕಾಲಗಳಲ್ಲಿಯೂ ಪುರುಷರಲ್ಲಿ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನಾಂತರ್ಗತ ಶ್ರೀ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣನೆಂಬ ಪಂಚರೂಪದಿಂದಲೂ ಹಾಗೆಯೇ ಸ್ತ್ರೀಯರಲ್ಲಿ ಭಾರತೀ ಮತ್ತು ಲಕ್ಷ್ಮೀ ದೇವಿಯ ಅಂತರ್ಗತ ಐದುಸ್ತ್ರೀರೂಪದಿಂದಲೂ ಇರುವನು. ಆ ಸ್ತ್ರೀಪುರುಷರಿಂದ ಅನುಭವಿಸಲ್ಪಡುವ ಸುಖಾನುಭವವನ್ನು ತಾನೇ ಪೂರ್ಣವಾಗಿ ಹೊಂದಿ ಇತರರಿಗೆ ಅವರವರ ಯೋಗ್ಯತಾನುಸಾರವಾಗಿ ಉಂಟುಮಾಡುತ್ತಾನೆ.

ಜ್ಞಾತ್ವೈವಂ ಪಂಚರೂಪಾಣಿ
ಮಿಥುನಸ್ಥಾನಿ ವೈ ಹರೇಃ ।
ಸ್ವಸ್ತ್ರೀ ಸಂಸರ್ಗತೋ ಯಾತಿ
ವಾಮದೇವಾಧ್ವರಂ ಫಲಮ್ ॥ ೯೩ ॥

ಹೀಗೆ ಮೈಥುನ ಕಾಲದಲ್ಲಿ ಶ್ರೀಹರಿಯ ಈ ರೂಪಗಳನ್ನು ತಿಳಿದು ತನ್ನ ನಿಜಭಾರ್ಯೆಯ ಸಮಾಗಮವನ್ನು ಮಾಡಿದರೆ ವಾಮದೇವ ಎಂಬ ಯಜ್ಞ ಮಾಡಿದ ಫಲ ಬರುವುದು.

ತಸ್ಮಾದನೇಕಪತ್ನೀಕಃ ಪತ್ನೀಷ್ವೇಕಾಂ
ನ ಚ ತ್ಯಜೇತ್ ।

ಪತೀನಾಂ ತದ್ವ್ರತಂ ನೋ
ಚೇದ್ಭ್ರೂಣಹತ್ಯಾಂ ಚ ವಿಂದತಿ ॥ ೯೪ ॥

ಆದುದರಿಂದ ಅನೇಕ ಪತ್ನಿಯರುಳ್ಳ ಒಬ್ಬ ಪುರುಷನು ಋತುಕಾಲದಲ್ಲಿ ಒಬ್ಬಳನ್ನಾದರೂ ನಿರಾಕರಿಸಬಾರದು; ಪತಿಯ ನಿಯಮವು ಒಂದು ವೇಳೆ ತಪ್ಪಿದರೆ ಶಿಶುಹತ್ಯ ಪಾಪ ಬರುವುದು.

ವಾಸುದೇವಾಭಿಧೋ ವಿಷ್ಣುಃ
ಯೋನೇಃ ಪ್ರಸವಶಕ್ತಿದಃ ।
ತಸ್ಯಾಂ ಗರ್ಭವಿಘಾತಾದಿ
ದೋಷಾನ್ ಸಂಶೋಧಯಿಷ್ಯತಿ ॥ ೯೫ ॥

ಶ್ರೀ ವಾಸುದೇವನೆಂಬ ವಿಷ್ಣುವು ಯೋನಿಗೆ ಪ್ರಸವ (ಹಡೆಯುವ ಶಕ್ತಿಯನ್ನೂ ಮತ್ತು ಅವಕಾಶವನ್ನೂ ಕೊಡುವನು; ಆಕೆಯಲ್ಲಿ ಗರ್ಭವಿಘ್ನವುಂಟುಮಾಡುವ ದೋಷಗಳನ್ನು ಕಳೆಯುವನು.

ಸಂಕರ್ಷಣಾಭಿಧಸ್ತ್ವಷ್ಟಾ ಗರ್ಭರೂಪ ವಿಧಾಯಕಃ ।
ರೇತಃ ಸೇಚಯತಿ ತಸ್ಯಾಂ ಪ್ರದ್ಯುಮ್ನಾಖ್ಯಃ ಪ್ರಜಾಪತಿಃ ॥ ೯೬ ॥

ಗರ್ಭಗತರೂಪದ ವಿಧಾನಮಾಡುವವನು ಸಂಕರ್ಷಣನೆಂಬ ಬಡಗಿಯ ರೂಪಿಯಾದ ಶ್ರೀಹರಿಯು; ಪ್ರದ್ಯುಮ್ನನೆಂಬ ಪ್ರಜಾಪತಿಯು ಆ ಯೋಗಿಯಲ್ಲಿ ಪುರುಷನ ರೇತಸ್ಸನ್ನು ಹಾಕುವನು.

ಅನಿರುದ್ಧಾಭಿಧೋ ಧಾತಾ ಗರ್ಭಾಧಾರಸ್ತದಾಜನಿಃ ।
ಶ್ವಾಸೋಚ್ಛ್ವಾಸನಿರುದ್ಧೋತ್ಥಕ್ಲೇಶನಾಶೋ ಭವತ್ಯತಃ ॥ ೯೭ ॥

ಅನಿರುದ್ಧನೆಂಬ ಧಾತೃವು ಗರ್ಭಾಧಾರಕನು; ನಂತರ ಜನನವು ; ಶ್ವಾಸೋಚ್ಛ್ವಾಸ ನಿರೋಧದಿಂದ ಆಗುವ ದುಃಖವನ್ನೂ ಅನಿರುದ್ಧನೆಂಬ ಶ್ರೀಹರಿಯು ಪರಿಹರಿಸುವನು.

ಅನಿರುದ್ಧ ಇತಿ ಪ್ರೋಕ್ತಃ ಸ ಗರ್ಭಂ ಧಾರಯಿಷ್ಯತಿ ।
ಸಂಗಕಾಲೇ ದ್ಯುಪರ್ಜನ್ಯ ಧರಾ ಪುಂಸ್ತ್ರೀ ಸ್ಥಿತಾನಿ ಚ ॥ ೯೮ ॥

ನಾರಾಯಣಾದಿ ರೂಪಾಣಿ ಧ್ಯಾಯನ್ ಸ್ವಸ್ತ್ರಿಯಮಶ್ನುತೇ ।
ತಸ್ಯ ಸ್ತ್ರೀ ಸಂಗದೋಷೋಽಪಿ ಲಿಪ್ಯತೇ ನ ಕದಾಚನ ॥ ೯೯ ॥

ಗರ್ಭವನ್ನು ಧಾರಣೆಮಾಡುವದರಿಂದ ಅನಿರುದ್ಧನೆಂಬ ನಾಮವು; ಸ್ತ್ರೀರಮಣಕಾಲದಲ್ಲಿ ಆಕಾಶ, ಪರ್ಜನ್ಯ (ಮೇಘ ಮತ್ತು ತದಭಿಮಾನಿವತಾ) ಭೂಮಿ, ಪುರುಷ ಮತ್ತು ಸ್ತ್ರೀ ಈ ಐದು ಸ್ಥಳಗಳಲ್ಲಿರುವ (5+(5x5)25=30) ಶ್ರೀನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ಪಂಚಾತ್ಮಕ ವ್ಯೂಹದ ಮೂವತ್ತು ರೂಪಗಳನ್ನು ತಿಳಿದು ಕ್ರೀಡಿಸಿದರೆ ಸ್ತ್ರೀಸಂಗದೋಷವೇ ಬರುವುದಿಲ್ಲ. ಅದಕ್ಕೆ ಪಂಚಮಹಾಯಜ್ಞವೆಂದು ಪ್ರಸಿದ್ಧಿಯು. ಈ ವಿಷಯವು ಛಾಂದೋಗ್ಯೋಪನಿಷತ್ತಿನಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿದೆ. ಇದನ್ನು ತಿಳಿದು ಇದರಂತೆ ಆಚರಿಸೋಣದರಿಂದ, ಪ್ರತಿಯೊಬ್ಬರೂ ಮೇಲೆ ಹೇಳಿದ ಐದು ಸ್ಥಳಗಳಲ್ಲಿದ್ದು ಜಗತ್ತಿಗೆ ಬಂದಿರುವದರಿಂದ, ತನ್ನಿಮಿತ್ತವಾದ ಋಣಗಳ ಪರಿಹಾರವಾಗುವುದು.

ಮಿತ್ರಾಪಾನೌ ವಾಯುಸಂಸ್ಥೌ
ಪ್ರದ್ಯುಮ್ನಸ್ತತ್ರ ಸಂಸ್ಥಿತಃ ।
ದಕ್ಷೋರುಸಂಧಿಷು ಜ್ಞೇಯಂ
ಟಂಕ್ಯಾದೀನಾಂ ಚ ಪಂಚಕಮ್ ॥ ೧೦೦ ॥

ಮಿತ್ರನೆಂಬ ಸೂರ್ಯನು ಮತ್ತು ಅಪಾನನೆಂಬ ವಾಯುವು ಗುದದಲ್ಲಿರುವರು; ಅವರ ನಿಯಾಮಕನು ಪ್ರದ್ಯುಮ್ನನು; ಬಲದ ತೊಡೆಯಿಂದ ಕಾಲಿನವರಿಗಲಿನ ಐದು ಸಂದುಗಳಲ್ಲಿ ಟಂಕಿ, ಠಲಕ, ಡರಕ, ಢರಿಣ ಮತ್ತು ಣಾತ್ಮ ಎಂಬ ಐದು ಮೂರ್ತಿಗಳನ್ನು ತಿಳಿಯುವುದು.

ವಾಮೋರು ಸಂಧಿಷುಜ್ಞೇಯಾ
ಸ್ತಾರಾದ್ಯಾ ಪಂಚಮೂರ್ತಯಃ ।
ಜಯಂತಃ ಪಾದಯೋ ಸ್ತಸ್ಮಿನ್
ಯಜ್ಞೋ ನಾರಾಯಣಃ ಸ್ಥಿತಃ ॥ ೧೦೧ ॥

ಎಡಗಾಲಿನ ಐದುಸಂದುಗಳಲ್ಲಿ ತಾರ, ಥಬ, ದಂಡಿ, ಧನ್ವಿ ಮತ್ತು ನಮ್ಯ ಎಂಬ ಐದು ಮೂರ್ತಿಗಳಿರುವರು; ಹೆಜ್ಜೆಗಳೆರಡರಲ್ಲಿಯೂ ಜಯಂತನೂ, ತನ್ನಿಯಾಮಕನಾಗಿ, ಯಜ್ಞನೆಂಬ ನಾರಾಯಣನೂ ಇರುವರು.

ದಕ್ಷಿಣಾಂಗುಷ್ಠ ದೇಶೇತು ವಾಯ್ವಧಿಷ್ಠಾನಸಂಸ್ಥಿತಃ ।
ನಾರಾಯಣಸ್ತೀರ್ಥಪದೊ ದೇಹಾಧಾರತಯಾ ಸ್ಥಿತಃ ॥ ೧೦೨ ॥

ಬಲದ ಕಾಲಿನ ಹೆಬ್ಬೆರಳಿನಲ್ಲಿ ವಾಯುವನ್ನು ಅಧಿಷ್ಠಾನಮಾಡಿಕೊಂಡು ತೀರ್ಥನೆಂಬ ನಾರಾಯಣನು ದೇಹಕ್ಕೆ ಆಧಾರನಾಗಿ ಇರುವನು.

ತತ್ರಸರ್ವಾಣಿ ತೀರ್ಥಾನಿ ತಿಷ್ಠತ್ಯರಿಧರಾಜ್ಞಯಾ ।
ತಸ್ಮಾತ್ಸುಪಾವನಂ ವಿಪ್ರಪಾದಪ್ರಕ್ಷಾಲನೋದಕಮ್ ॥ ೧೦೩ ॥

ಅಲ್ಲಿ ಚಕ್ರಧಾರಿಯಾದ ಶ್ರೀನಾರಾಯಣನ ಆಜ್ಞೆಯಿಂದ ಸಕಲ ತೀರ್ಥಗಳೂ ಇರುವುವು; ಬ್ರಾಹ್ಮಣನ ಪಾದಗಳನ್ನು ತೊಳೆದ ನೀರು ಅತ್ಯಧಿಕ ಪವಿತ್ರವಾದುದು.

ವಾಕ್ಪಾಣಿಪಾದಶ್ರೋತ್ರ
ಮನೋ ಹೃದಯಸ್ಥಾನೇಷು ಚ ।
ಆಕಾಶಾಖ್ಯರಮಾರೂಪೇಷ್ವೇವಂ
ರೂಪಾಣಿ ಚಿಂತಯೇತ್ ॥ ೧೦೪ ॥

ವಾಕ್, ಕೈ, ಕಾಲು, ಕಿವಿ, ಮನಸ್ಸು, ಹೃದಯ ಈ ಸ್ಥಳಗಳಲ್ಲಿ ಆಕಾಶವಿರುವುದು; ಅಲ್ಲಿ ಶ್ರೀರಮಾದೇವಿಯ ರೂಪಗಳಿರುವುವು; ಅಲ್ಲಿ ಮುಂದೆ ಹೇಳುವ ಶ್ರೀಹರಿರೂಪಗಳನ್ನು ತಿಳಿಯುವುದು.

ವಿಷ್ಣೋಃ ಪ್ರಜ್ಞಾ ಪ್ರಿಯಾ ಸತ್ಯಾಽ ನಂತಾ ನಂದಾ ಸ್ಥಿತಿಃ ಕ್ರಮಾತ್ ।
ಏತಚ್ಛಡ್ರೂಪವಿಜ್ಞಾನೀ ಷಡರೀನ್ಸಜಯಿಷ್ಯತಿ ॥ ೧೦೫ ॥

ಶ್ರೀವಿಷ್ಣುವಿನ, ಪ್ರಜ್ಞಾ, ಪ್ರಿಯಾ, ಸತ್ಯಾ, ಅನಂತಾ, ನಂದಾ ಮತ್ತು ಸ್ಥಿತಿ ಎಂಬ ಆರು ರೂಪಗಳು ಕ್ರಮದಿಂದ ಇರುವುವು; ಇವುಗಳನ್ನು ಚೆನ್ನಾಗಿ ತಿಳಿದವನು ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯಗಳೆಂಬ ಆರು ಶತ್ರುಗಳನ್ನು ಗೆಲ್ಲುವನು.

ವ್ಯಾಪ್ತಶ್ಚ ಹೃದಯಾಕಾಶೇ ಪುರುಷಾಖ್ಯೋಽನಿರುದ್ಧಕಃ ।
ಪ್ರದ್ಯುಮ್ನಸ್ತಾಲುದೇಶಸ್ಥೋ ಇಂದ್ರಯೋನಿರಿತಿ ಸ್ಮೃತಃ॥ ೧೦೬ ॥

ಹೃದಯದ ಅವಕಾಶದಲ್ಲಿ ಪುರುಷನೆಂಬ ಅನಿರುದ್ಧನು ತುಂಬಿರುವನು; ದವಡೆಗಳಲ್ಲಿ ಪ್ರದ್ಯುಮ್ನನು ಇಂದ್ರಯೋನಿ ಎಂದು ಹೇಳಲ್ಪಡುವನು.

ಶೀರ್ಷಾಂತಃ ಕೇಶಮೂಲೇ ತು
ವೀತಃ ಸಂಕರ್ಷಣಃ ಸ್ಥಿತಃ ।
ಧ್ಯೇಯಃ ಶೀರ್ಷಕಪಾಲೋರ್ಧ್ವಂ
ವಾಸುದೇವೋಽವ್ಯಯೋ ಹರಿಃ॥ ೧೦೭ ॥

ತಲೆಯ ಮೇಲೆ ಕೂದಲುಗಳ ಮೂಲದಲ್ಲಿ ವೀತಿ ಎಂಬ ಸಂಕರ್ಷಣನಿರುವನು; ತಲೆಯ ಕಪಾಲಗಳ ಮೇಲೆ ನಾಶರಹಿತನಾದ ಹರಿಯ ವಾಸುದೇವರೂಪವನ್ನು ತಿಳಿಯುವುದು.

ಹೃದಯಾಂತಃ ಸ್ತಿತೋ ವಿಷ್ಣುರ್ವಿಜ್ಞೇಯೋ ವಾಮನಾಭಿಧಃ ।
ಉಪಾಸ್ಯಃ ಸರ್ವದೇವೈಶ್ಚ ಪ್ರಾಣಾಪಾನಾದಿ ಚೇಷ್ಟಕಃ ॥ ೧೦೮ ॥

ಹೃದಯದಲ್ಲಿ ವಾಮನರೂಪಿಯಾದ ವಿಷ್ಣುವಿರುವನು; ಈತನು ಸಕಲ ದೇವತೆಗಳಿಂದ ಉಪಾಸಿಸಲ್ಪಡುವನು; ಮತ್ತು ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನರೆಂಬ ಐದು ಮಂದಿ ವಾಯುಗಳನ್ನು ಅವರವರ ಕಾರ್ಯದಲ್ಲಿ ನಿಯಮನಮಾಡುವನು.

ಹೃತ್ಪದ್ಮಸಂಸ್ಥಿತೋಪಾಸ್ಯಾ
ಗಾಯತ್ರೀ ಬ್ರಹ್ಮಸಂಮಿತಾ ।
ಗಾಯತ್ರ್ಯಂತಸ್ಥಿತೋ ವಿಷ್ಣು
ರ್ಗಾಯತಿ ತ್ರಾಯತೇಯತಃ ॥ ೧೦೯ ॥

ಹೃದಯಕಮಲದಲ್ಲಿ ವೇದಸಾರವೆನಿಸಿದ (ವೇದಮಾತೆಯಾದ) ಗಾಯತ್ರಿಯನ್ನು ಉಪಾಸನೆಮಾಡಬೇಕು; ಆ ಗಾಯತ್ರಿಯಲ್ಲಿ ತನ್ನನ್ನು ಸ್ತುತಿಸುವವರನ್ನು ಸಂರಕ್ಷಿಸುವವನು ಎಂಬ ಕಾರಣದಿಂದ ಗಾಯತ್ರೀ ಎಂಬ ಹೆಸರಿನಿಂದಲೇ ಶ್ರೀಹರಿಯು ಇರುವನು.

ಗಾಯತ್ರೀ ನಾಮಕೋ ವಿಷ್ಣುಃ
ಸ ಪ್ರಾಣಃ ಸ ಉದಾಹೃತಃ ।
ಪ್ರಾಣಾರ್ಕದ್ವಾರಪೋಪಾಸ್ಯಃ
ಪ್ರಾಣಾಗ್ನಾವೇವ ಮೇವಹಿ ॥ ೧೧೦ ॥

ಈ ಗಾಯತ್ರೀ ಎಂಬ ವಿಷ್ಣುವು ಪ್ರಾಣನಿಂದ ಸಹಿತನಾಗಿದ್ದು ಪ್ರಾಣಾರ್ಕನೆಂಬ ದ್ವಾರಪಾಲಕನಿಂದ ಪ್ರಾಣಾಗ್ನಿ ಹೋತ್ರವೆಂಬ ಭೋಜನದಲ್ಲಿ ಉಪಾಸಿಸಲ್ಪಡುವನು.

ಮುಖಸ್ಥಾಹವನೀಯಾಗ್ನೌ ಹೋತಾ ಪ್ರಾಣೋ ಹೃದಿಸ್ಥಿತಃ ।
ಪ್ರಾಣಾಗ್ನಿಸ್ಥಹರೇಃ ಪೂರ್ವದ್ವಾರಪಃ ಪ್ರಾಣಭಾಸ್ಕರಃ ॥ ೧೧೧ ॥

ಮುಖದಲ್ಲಿ (ಬಾಯಿ) ಆಹವನೀಯವೆಂಬ ಅಗ್ನಿಯು ಅಲ್ಲಿ ಹೃದಯದಲ್ಲಿರುವ ಪ್ರಾಣನು ಹೋತೃವು; ಈ ಪ್ರಾಣಾಗ್ನಿಯಲ್ಲಿರುವ ಶ್ರೀಹರಿಯ ಪೂರ್ವದ (ಮುಂದುಗಡೆಯ) ದ್ವಾರಪಾಲಕನು ಪ್ರಾಣನೆಂಬ ಸೂರ್ಯನು.

ಜ್ಞಾತ್ವಾ ಪ್ರಾಣಾದ್ಯಧಿಷ್ಠಾನಂ ಕ್ರಮೇಣಾಹುತಿ ದಾನತಃ ।
ಪ್ರಾಣನಾಮಾನಿರುದ್ಧಾತ್ಮಾ ತೃಪ್ತೋ ವೈಶ್ವಾನರೋ ಹರಿಃ ॥ ೧೧೨ ॥

ಪ್ರಾಣ, ಅಪಾನರೇ ಮುಂತಾದ ಐದು ಪ್ರಾಣರು ಇರುವ ಸ್ಥಾನವನ್ನು ತಿಳಿದು ಕ್ರಮದಿಂದ ಆಹುತಿಗಳನ್ನು ಕೊಡುವುದರಿಂದ ಪ್ರಾಣನಾಮಕ ಅನಿರುದ್ಧನು ತೃಪ್ತನಾಗುವನು; ಆತನೇ ವೈಶ್ವಾನರನೆಂಬ ಹರಿಯು.

ನಾಭಿಸ್ಥ ದಕ್ಷಿಣಾಗ್ನೌತು ಬ್ರಹ್ಮವ್ಯಾನಃ ಶರೀರಗಃ ।
ಅಗ್ನ್ಯಂತಸ್ಥ ಹರೇರ್ದಕ್ಷ ದ್ವಾಸ್ಥೋವ್ಯಾನನಿಶಾಕರಃ ॥ ೧೧೩ ॥

ನಾಭಿಯಲ್ಲಿ ದಕ್ಷಿಣಾಗ್ನಿಯು, ಅಲ್ಲಿ ಬ್ರಹ್ಮನ ಸ್ಥಾನದಲ್ಲಿ ಸರ್ವಶರೀರಗತನಾದ ವ್ಯಾನನೆಂಬ ವಾಯುವಿರುವನು; ಅಗ್ನಿಯಲ್ಲಿರುವ ಶ್ರೀಹರಿಯ ದಕ್ಷಿಣ ದ್ವಾರಪಾಲಕನು ವ್ಯಾನಚಂದ್ರರು.

ವ್ಯಾನನಾಮೇಂದ್ವಧಿಷ್ಠಾನ
ಕ್ರಮೇಣಾಹುತಿ ದಾನತಃ ।
ಪ್ರದ್ಯುಮ್ನಾತ್ಮಾ ವ್ಯಾನನಾಮಾ
ತೃಪ್ತೋ ವೈಶ್ವಾನರೋ ಹರಿಃ ॥ ೧೧೪ ॥

ವ್ಯಾನನೆಂಬ ಚಂದ್ರನಲ್ಲಿರುವ ಶ್ರೀನಾರಾಯಣನಿಗೆ – ಕ್ರಮದಿಂದ ಆಹುತಿಯನ್ನು ಕೊಟ್ಟರೆ ವ್ಯಾನನೆಂಬ ಪ್ರದ್ಯುಮ್ನನು ತೃಪ್ತನಾಗುವನು. ಈತನೂ ವೈಶ್ವಾನರನೆಂಬ ಹರಿಯೇ.

ತತೋ ಹೃದಿಸ್ಥಿತೇ ವಹ್ನೌ
ಗಾರ್ಹಸ್ಪತ್ಯಾಭಿಧೇದೇ ಶುಭೌ ।
ಭವೇದಪಾನಶ್ಚೋದ್ಗಾತಾ
ಪಾಯುಸ್ಥೋಽಗ್ನಿ ಗತಸ್ಯ ಚ ॥ ೧೧೫ ॥

ಪ್ರತ್ಯಕ್ ದ್ವಾಸ್ಥೋ ಹ್ಯಪಾನಾಗ್ನಿ
ಸ್ತ ದ್ವಾರಾಹುತಿ ದಾನತಃ ।

ಸಂಕರ್ಷಣ ಸ್ತ್ವಪಾನಾಖ್ಯೋ
ತೃಪ್ತೋ ವೈಶ್ವಾನರೋ ಹರಿಃ ॥ ೧೧೬ ॥

ನಂತರ ಹೃದಯದಲ್ಲಿ ಗಾರ್ಹಸ್ಪತ್ಯನೆಂಬ ಅಗ್ನಿಯನ್ನು ತಿಳಿಯುವುದು; ಪಾಯುವೆಂಬ ಅಗ್ನಿಯಲ್ಲಿರುವ ಅಪಾನನೆಂಬ ವಾಯುವು ಉದ್ಗಾತನು; ಈ ಅಪಾನಾಗ್ನಿಯು ಪಶ್ಚಿಮ ದ್ವಾರಪಾಲಕನು; ಇವನ ಮುಖದಿಂದ ಆಹುತಿಯನ್ನು ಕೊಡೋಣದ್ದರಿಂದ ಅಪಾನನಲ್ಲಿರುವ ಅದೇ ಶಬ್ದವಾಚ್ಯನಾದ ಸಂಕರ್ಷಣನು ಸಂತುಷ್ಟನಾಗುವನು.

ನಾಭ್ಯುತ್ತರಸ್ಥಿತೇ ವಹ್ನಾವವ ಸಥ್ಯಾಭಿಧಃ ಸ್ಮೃತಃ ।
ಯಜಮಾನೊ ನಾಭಿಸಂಸ್ಥೋ ಸಮಾನಾಗ್ನಿ ಗತಸ್ಯ ಚ ॥ ೧೧೭ ॥

ಉದಗ್ದ್ವಾಸ್ಥಃ ಸಮಾನೇಂದ್ರಸ್ತತ್ಕ್ರಮಾಹುತಿ ದಾನತಃ ।
ವಾಸುದೇವಃ ಸಮಾನಾಖ್ಯ ಸ್ತೃಪ್ತೊ ವೈಶ್ವಾನರೋ ಹರಿಃ॥ ೧೧೮ ॥

ಹೊಕ್ಕಳಿನ ಎಡಗಡೆಯಲ್ಲಿ ಅವಸಥ್ಯವೆಂಬ ಅಗ್ನಿ ಇರುವುದು; ಅಲ್ಲಿ ಯಜಮಾನನಾಗಿ ನಾಭಿಯಲ್ಲಿಯೇ ಸಮಾನನೆಂಬ ವಾಯುವಿರುವನು; ಆ ಅಗ್ನಿಯಲ್ಲಿರುವ ಈತನು ಉತ್ತರ ದ್ವಾರಪಾಲಕನು ಸಮಾನನೆಂಬ ಇಂದ್ರನು; ಈತನ ಕಡೆಯಿಂದ ಕ್ರಮವಾಗಿ ಆಹುತಿಯನ್ನು ಕೊಟ್ಟರೆ ಸಮಾನನೆಂಬ ವಾಸುದೇವನು ತೃಪ್ತನಾಗುವನು.

ನಾಭಿದಕ್ಷಸ್ಥ ಸಭ್ಯಾಗ್ನಾವ-
ಧ್ವರ್ಯುಃ ಕಂಠಗೋಽನಿಲಃ ।
ರಮಾವಿಷ್ಠಾಕಾಶನಾಮ
ಕೋದಾನೋ ವಾಯುರೂರ್ಧ್ವಗಃ ॥ ೧೧೯ ॥

ಉದಾನ ವಾಯ್ವಧಿಷ್ಠಾನ
ಕ್ರಮೇಣಾಹುತಿ ದಾನತಃ ।
ನಾರಾಯಣೋ ಉದಾನಾಖ್ಯ-
ಸ್ತೃಪ್ತೋವೈಶ್ವಾನರೋ ಹರಿಃ ॥ ೧೨೦ ॥

ನಾಭಿಯ ಬಲಗಡೆಯಲ್ಲಿ ಸಭ್ಯವೆಂಬ ಅಗ್ನಿಯು; ಅಲ್ಲಿ ಕಂಠಗತನಾದ ಸಮಾನನೆಂಬ ವಾಯುವು ಅಧ್ವರ್ಯುವಾಗಿ ಇರುವನು; ಅವನು ಊರ್ಧ್ವ ಗಮನವುಳ್ಳವನು; ರಮಾದೇವಿಯ ಅಧಿಷ್ಠಾನನಾದ ಆಕಾಶನೆಂಬ

ಉದಾನವಾಯುವು; ಇದನ್ನು ತಿಳಿದು ಆಹುತಿ ಕೊಡೋಣದ್ದರಿಂದ ನಾರಾಯಣನೆಂಬ ಉದಾನನು ತೃಪ್ತನಾಗುವನು.

ವಿಶ್ವೈರ್ಗುಣೈರುಪೇತತ್ವಾದ್ವೈಶ್ವೋ ನಂತತ್ವತೋ ನರಃ ।
ವೈಶ್ವಾನರ ಇತಿಪ್ರೋಕ್ತೋ ಸೋಗ್ರ್ಯ ಇತ್ಯಗ್ನಿ ರೀರಿತಃ ॥ ೧೨೧ ॥

ಅಸಂಖ್ಯ ಗುಣಗಳಿಂದ ಸಮೇತನಾದುದರಿಂದ 'ವೈಶ್ವ'ನೆಂದೂ ನಾಶ ರಹಿತನಾದುದರಿಂದ 'ನರ'ನೆಂದೂ ಎರಡು ಪದಗಳನ್ನು ಸೇರಿಸಿದ್ದರಿಂದ 'ವೈಶ್ವಾನರ'ನೆಂದೂ ಎಲ್ಲರಿಗೂ ಶ್ರೇಷ್ಠನಾದುದರಿಂದ ಅಗ್ನಿಯೆಂದೂ ಹೇಳಲ್ಪಡುವನು.

ಪಂಚಪ್ರಾಣಾತ್ಮಕೋ ವಾಯು
ರ್ಯಜ್ಞೇಸ್ಮಿನ್ ಸಂಪ್ರತಿಷ್ಠಿತಃ ।
ಅತೋ ವಾಯುರ್ಯಜ್ಞ
ನಾಮಾ ಯಜತ್ಯಗ್ನಿಗತಂ ಹರಿಮ್ ॥ ೧೨೨ ॥

ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನನೆಂಬ ವಾಯುವು ಐದು ರೂಪದಿಂದ ಈ ಪ್ರಾಣಾಗ್ನಿಹೋತ್ರವೆಂಬ ಯಜ್ಞದಲ್ಲಿ ಚೆನ್ನಾಗಿ ಪ್ರಸಿದ್ಧನಾಗಿರುವನು; ಆದುದರಿಂದ ಈ ಯಜ್ಞನಾಮಕ ವಾಯುವು ಅಗ್ನಿಯಲ್ಲಿ ಸನ್ನಿಹಿತನಾಗಿರುವ ಶ್ರೀಹರಿಯನ್ನು ಆರಾಧಿಸುವನು.

ತಸ್ಮಾತ್ಪ್ರಾಣಾದಿಸಂಯುಕ್ತೊ
ಜೀವದತ್ತಾನ್ನಮುತ್ತಮಮ್ ।
ಪಚತ್ಯೇಷಃ ಶುಭಂ ಸಾರಂ
ಸ್ವೀಕರೋತಿ ನ ಚಾಪರಮ್ ॥ ೧೨೩ ॥

ಆದುದರಿಂದ ಪ್ರಾಣಾದಿಗಳಿಂದ ಸಹಿತನಾಗಿ ಜೀವನಿಂದ ಕೊಡಲ್ಪಡುವ ಅನ್ನವನ್ನು ಜೀರ್ಣಮಾಡುವನು; ಶುಭಸಾರವನ್ನು ಸ್ವೀಕರಿಸುವನು; ಅಶುಭ ಅಸಾರವನ್ನು ಬಿಟ್ಟು ಬಿಡುವನು.

ತಸ್ಮಾದ್ವೈಶ್ವಾನರಸ್ತೃಪ್ತಃ ತೃಪ್ತಾಶ್ಚದ್ವಾರದೇವತಾಃ ।
ಏತದ್ವಿದ್ಯಾ ಸಾಧಕಸ್ಯ ಪ್ರಯಚ್ಛತ್ಯಕ್ಷಯಂ ಪದಮ್ ॥ ೧೨೪ ॥

ಆದುದರಿಂದ ಈ ವೈಶ್ವಾನರನು ತೃಪ್ತನಾದರೆ ದ್ವಾರದಲ್ಲಿರುವ ಸಕಲ ದೇವತೆಗಳೂ ತೃಪ್ತರಾಗುವರು; ಈ ವಿದ್ಯೆಯನ್ನು ಸಾಧಿಸುವವನಿಗೆ ನಾಶವಿಲ್ಲದ ಮುಕ್ತಿಯು ಸಿಗುವುದು.

ಕೇಚಿತ್ಪ್ರಾಣಾಗ್ನಿ ಖಂಡೋಕ್ತಾ
ಪ್ರಾಣಾಪಾನಾದ್ಯನುಕ್ರಮಾತ್ ।
ವ್ಯವಸ್ಥಾ ಭೇದಮಾಶ್ರಿತ್ಯ
ಜಯಂತಿ ಪ್ರಾಣಪಂಚಕಮ್ ॥ ೧೨೫ ॥

ಕೆಲವರು ಈ ಪ್ರಾಣಾಗ್ನಿ ಖಂಡದಲ್ಲಿ ಹೇಳಿದ ಕ್ರಮದಿಂದ ಪ್ರಾಣಾಪಾನಾದಿ ಪಂಚವಾಯುಗಳನ್ನು ವ್ಯವಸ್ಥೆಯ ಭೇದಭಾವವನ್ನು ಆಶ್ರಯಿಸಿ ಆ ವಾಯುಗಳನ್ನು ಭಕ್ತಿಯಿಂದ ಗೆಲ್ಲುವರು.

ಜಠರಾಗ್ನಿ ಸ್ಥಿತಂಚಾಗ್ನಿ
ದೇವಂ ವೈಶ್ವಾನರಂ ಹರಿಮ್ ।
ಪಂಚಾತ್ಮಕೋ ಹರಿಃ
ಸಾಕ್ಷಾದ್ಭೋಕ್ತೄಣಾಂ ಹೃದಯೇ ಸ್ಥಿತಃ ॥ ೧೨೬ ॥

ಹಾಗೆಯೇ ಜಠರಾಗ್ನಿಯಲ್ಲಿರುವ ಅಗ್ನಿಯ ಚೇಷ್ಟಕನಾದ ವೈಶ್ವಾನರನೆಂಬ ಹರಿಯನ್ನು ಭಕ್ತಿಯಿಂದ ವಶಮಾಡಿಕೊಳ್ಳುವರು; ಅನಿರುದ್ಧಾದಿ ಐದು ರೂಪಿಯಾದ ಹರಿಯು ಭೋಜನಮಾಡುವ ಸಕಲರ ಹೃದಯದಲ್ಲಿರುವನು.

ಸಂಕರ್ಷಣಶ್ಚ ಪ್ರದ್ಯುಮ್ನೋ
ಭೋಕ್ತುರ್ಭೋಜನಶಕ್ತಿದೌ ।
ಭೋಕ್ತಾರೌ ಚ ವಿಶೇಷೇಣ
ವಾಸುದೇವೋಽವಕಾಶದಃ ॥ ೧೨೭ ॥

ನಾರಾಯಣಾನಿರುದ್ಧೌತು
ಭೋಜ್ಯವಸ್ತುಷು ಸಂಸ್ಥಿತೌ ।
ಏವಂ ಪಂಚಾತ್ಮಕಂ ಜ್ಞಾ ತ್ವಾ
ಸ ಭವೇದಮೃತಾಶನಃ ॥ ೧೨೮ ॥

ಶ್ರೀ ಸಂಕರ್ಷಣ ಮತ್ತು ಪ್ರದ್ಯುಮ್ನನು ಭೋಜನಮಾಡುವವರಿಗೆ ಆ ಶಕ್ತಿಯನ್ನು ಕೊಡುವವರು ಮತ್ತು ಭೋಜನ ಮಾಡುವವರು; ವಾಸುದೇವನು ಅವಕಾಶವನ್ನು ಕೊಡುವವನು; ನಾರಾಯಣ ಮತ್ತು ಅನಿರುದ್ಧ ಈ ಈರ್ವರೂ ಭುಂಜಿಸುವ ಪದಾರ್ಥಗಳಲ್ಲಿರುವವರು; ಊಟಮಾಡುವಾಗ ಈ ಐದು ರೂಪಗಳನ್ನು ತಿಳಿದವರು ಅಮೃತವನ್ನೇ ಭುಂಜಿಸುವರು.

ಆತ್ಮಾಂತರಾತ್ಮಾ ಜ್ಞಾತ್ಮಾ ಚ ದ್ವಿಧಾ ಭೂತ್ವಾ ಹೃದಿ ಸ್ಥಿತಃ ।
ಜೀವಸತ್ಕರ್ಮಜನಿತಂ ರಸಮಶ್ನಾತಿ ನಿತ್ಯಶಃ ॥ ೧೨೯ ॥

ಸರ್ವಜ್ಞನಾದ ಶ್ರೀಹರಿಯು ಆತ್ಮ ಮತ್ತು ಅಂತರಾತ್ಮನೆಂಬ ಎರಡು ರೂಪದಿಂದ ಹೃದಯದಲ್ಲಿದ್ದು ಜೀವರ ಸತ್ಕರ್ಮದಿಂದ ಬರುವ ಶುಭಫಲವನ್ನು ನಿತ್ಯದಲ್ಲಿಯೂ ಚೆನ್ನಾಗಿ ಭುಂಜಿಸುವನು.

ವಾಯುಃ ಪ್ರಸ್ತೌತಿ ವಿಚ್ಛಿನ್ನ
ಘೋಷರೂಪೇಣ ಸರ್ವದಾ ।
ಕರ್ಣೌಪಿಧಾಯ ಸಾ ಸರ್ವೈಃ
ಶ್ರೂಯತೇ ಲೋಕಮಂಗಳಾ ॥ ೧೩೦ ॥

ವಾಯುವು ಯಾವಾಗಲೂ ಅವಿಚ್ಛಿನ್ನ ಧ್ವನಿರೂಪದಿಂದ ಸ್ತುತಿಸುತ್ತಲಿರುವನು; ಕಿವಿಗಳೆರಡನ್ನೂ ಮುಚ್ಚಿದರೆ ಆ ಲೋಕ ಮಂಗಳಧ್ವನಿಯು ಸಕಲರಿಂದಲೂ ಕೇಳಲ್ಪಡುವುದು.

ಘೋಷರೂಪಾಸ್ತುತಿರ್ನೈವಶ್ರೂಯತೇ ಯೇನಜಂತುನಾ ।
ಅಚಿರೇಣೈವ ಕಾಲೇನ ಸ ದೇಹಾದುತ್ಕ್ರಮಿಷ್ಯತಿ ॥ ೧೩೧ ॥

ಈ ಸ್ತುತಿರೂಪ ಧ್ವನಿಯು ಯಾವಾಗ ಯಾವನೊಬ್ಬ ಜೀವನಿಂದ ಕೇಳಲ್ಪಡುವುದಿಲ್ಲವೋ ಅವನು ಸ್ವಲ್ಪ ಕಾಲದಲ್ಲಿಯೇ ಆ ದೇಹವನ್ನು ಬಿಡುತ್ತಾನೆಂದು ನಿಶ್ಚಯವು.

ಯ ಏವಂ ವೇದ ತೇನೈವ ಸ್ತುತ ಏವ ಭವೇದ್ಧರಿಃ ॥ ೧೩೨ ॥

ಹೀಗೆ ತಿಳಿಯುವ ಮಾತ್ರದಿಂದಲೇ ಶ್ರೀಹರಿಯನ್ನು ಸ್ತುತಿಸಿದಂತಾಗುವುದು.

ಅವ:- ಈಗ ದೇಹವೆಂಬುದು ವಿಷ್ಣುರಥವೆಂದು ಹೇಳುತ್ತಾ ತತ್ಕ್ರಮವನ್ನು ತಿಳಿಸುತ್ತಾರೆ:-

ವಿಷ್ಣೋರಾಯತನಂ ದಿವ್ಯಂ
ದೇಹಾಖ್ಯಂ ವೈಷ್ಣವಂ ರಥಮ್ ।
ಸೂರ್ಯಶ್ಚ ಸೂರ್ಯಭಾರ್ಯಾ
ಚ ಚಕ್ಷುರ್ದ್ವಯಸಮಾಶ್ರಿತೌ ॥ ೧೩೩ ॥

ಶ್ರೀ ವಿಷ್ಣುವು ವಾಸವಾಗಿರುವ ಆ ದಿವ್ಯದೇಹವು ವೈಷ್ಣವ ರಥವು; ಸೂರ್ಯನು ಮತ್ತು ತತ್ಪತ್ನಿಯಾದ ಸಂಜ್ಞಾದೇವಿಯು ಎರಡು ಕಣ್ಣುಗಳಲ್ಲಿ ಕುದುರೆಗಳ ಆಕಾರದಿಂದಿರುವರು.

ವಾಜಿರೂಪೌ ತಥಾ ಸೋಮಸ್ತತ್ಪತ್ನೀ ಚ ಶ್ರುತಿಸ್ಥಿತೌ ।
ಹಯಾಕಾರಾವಹಂತ್ಯೇತೇ ತದ್ಬಂಧಪ್ರಗ್ರಹಾತ್ಮಿಕಾ ॥ ೧೩೪ ॥

ಉಮಾ ವಾಚಿ ಸ್ಥಿತಾ ಜ್ಞೇಯಾ ತತ್ಪತಿ ರ್ಮನಸಿ ಸ್ಥಿತಃ ।
ಸಂಪ್ರೋಕ್ತಸ್ಸಾರಥಿಸ್ತಸ್ಮಿನ್ ರಥೇ ಪ್ರಾಣಃ ಪ್ರತಿಷ್ಠಿತಃ ॥ ೧೩೫ ॥

ಹಾಗೆಯೇ ಕುದುರೆಯ ಆಕಾರದಿಂದಲೇ ಚಂದ್ರನು, ತತ್ಪತ್ನಿಯಾದ ರೋಹಿಣೀ ದೇವಿಯು ಕಿವಿಗಳೆರಡರಲ್ಲಿರುವರು; ಈ ನಾಲ್ಕು ಮಂದಿಗಳೂ ಈ ರಥವನ್ನು ಸೆಳೆಯುವ ಕುದುರೆಗಳು; ಇವುಗಳನ್ನು ಬಂಧಿಸುವ ಹಗ್ಗದಂತೆ ಉಮಾದೇವಿಯರು ವಾಕ್ಕಿನಲ್ಲಿರುವರು; ಈ ಹಗ್ಗವನ್ನು ಹಿಡಿದು ರಥದ ಸಾರಥಿ (ನಡೆಸುವವ)ಯಾಗಿ ಉಮಾಪತಿಯಾದ ಮಹಾರುದ್ರ ದೇವರು ಮನಸ್ಸಿನಲ್ಲಿರುತ್ತಾರೆ. ಈ ರಥದಲ್ಲಿ ಮುಖ್ಯಪ್ರಾಣದೇವನೇ ರಥಿಕನು.

ಪ್ರಕೃಷ್ಟಜ್ಞಾನರೂಪತ್ವಾತ್ಪ್ರಾಣೋ ವೈ ವಿಷ್ವನಾಮಕಃ ।
ಅಧಿತಿಷ್ಠತಿ ವೈ ವಿಷ್ಣುಸ್ತಸ್ಮಾದ್ದೇಹಮಲಂಚರೇತ್ ॥ ೧೩೬ ॥

ನಿರ್ದೋಷವಾದ ಉತ್ತಮ ಜ್ಞಾನಸ್ವರೂಪಿಯಾದ ವಿಶ್ವನೆಂಬ ಹೆಸರಿನಿಂದ ಪ್ರಾಣನಲ್ಲಿ ಶ್ರೀ ವಿಷ್ಣುವೂ ಇರುವನು; ಆದುದರಿಂದ ಈ ದೇಹವನ್ನು ಆಭರಣ ವಸ್ತ್ರಾದಿಗಳಿಂದ ಅಲಂಕಾರಮಾಡಿಕೊಳ್ಳುವುದು.

ಏತಾದೃಶಸ್ಯ ದೇಹಸ್ಯ
ವೃಷಣಾಸನಯೋರಪಿ ।
ಮಧ್ಯೇ ಕಂದಂ ವಿಜಾನೀಯಾ
ದ್ವರ್ತುಲಂ ದ್ವ್ಯಂಗುಲೋಚ್ಛ್ರಿತಮ್ ॥ ೧೩೭ ॥

ಚತುರಂಗುಲವಿಸ್ತಾರಂ
ದೇಹಾಧಾರಂ ಮಹತ್ತರಮ್ ।
ಆಸ್ಥಾನಂ ಸರ್ವನಾಡೀನಾಂ
ಮೂಲಾಧಾರಂ ತದುಚ್ಯತೇ ॥ ೧೩೮ ॥

ಇಂತಹ ದೇಹದ ವೃಷಣ ಮತ್ತು ಆಸನಗಳ ಮಧ್ಯದಲ್ಲಿ ವರ್ತುಲಾಕಾರವಾದ ಎರಡಂಗುಲ ಎತ್ತರವಾದ ಮತ್ತು ಸಕಲ ನಾಡಿಗಳಿಗೆ ಆಶ್ರಯವಾದ ಒಂದು ಗಡ್ಡೆ ಇರುವುದು; ಅದನ್ನು ಮೂಲಾಧಾರವೆನ್ನುವರು.

ತನ್ಮಧ್ಯದೇಶಮಾರಭ್ಯ
ಆಮೂರ್ಧಾನಮೃಜುಸ್ಥಿತಾ ।

ಸೂಕ್ಷ್ಮಾ ಸುಷುಮ್ನಾ ವಿಜ್ಞೇಯಾ
ವೇಣುವದ್ವಿವರಾನ್ವಿತಾ ॥ ೧೩೯ ॥

ಅದರ ಮಧ್ಯದೇಶವನ್ನಾರಂಭಿಸಿ ಶಿರಸ್ಸಿನ ಬ್ರಹ್ಮರಂಧ್ರದವರೆವಿಗೂ ನೆಟ್ಟಗೆ ಅತಿಸೂಕ್ಷ್ಮವಾಗಿ ಬಿದುರಿನ ಕೊಳವಿಯಂತೆ ಒಂದು ನಾಡಿ ಇರುವುದು; ಇದನ್ನು ಸುಷುಮ್ನಾ ಎಂದು ಹೇಳುವರು.

ಸೈವ ಪಂಚವಿಶೇಷಾಂಶ್ಚ
ವಜ್ರಿಕಾಯಾರ್ಪ್ರಕಾಶಿನೀ ।
ವೈದ್ಯುತಾ ಬ್ರಹ್ಮನಾಡೀತಿ
ವಿಜ್ಞೇಯಾ ಸಾಯಕಾದಿವತ್ ॥ ೧೪೦ ॥

ವಜ್ರಿಕಾ, ಆರ್ಯಕಾ, ಪ್ರಕಾಶಿನೀ, ವೈದ್ಯುತಾ ಮತ್ತು ಸುಷುಮ್ನಾ ಎಂದು ಐದು ಶಾಖೆಗಳುಳ್ಳದ್ದೆಂದು ತಿಳಿಯುವುದು; ಇದಕ್ಕೆ ಬ್ರಹ್ಮನಾಡಿ ಎಂದು ಪ್ರಸಿದ್ಧಿಯು.

ಸುಷುಮ್ನಾ ಮೂಲಮಾರಭ್ಯ
ವಜ್ರಿಕಾದ್ಯಂಶಕೇಶುಚ ।
ಪಂಚಪಂಚಾರವಿಂದಾನಿ
ಹ್ಯಾಮೂರ್ಧಾನಂತು ಯೋಜಯೇತ್ ॥ ೧೪೧ ॥

ಸುಷುಮ್ನಾ ನಾಡಿಯ ಬುಡವನ್ನು ಆರಂಭಿಸಿ ವಜ್ರಿಕಾದಿ ಅಂಶ ನಾಡಿಗಳಲ್ಲಿ ಐದೈದು ಕಮಲಗಳನ್ನು ಶಿರಸ್ಸಿನವರೆವಿಗೂ ಯೋಜಿಸಬೇಕು.

ಪೃಷ್ಠಾಂಶ ವಜ್ರಿಕಾಸಂಸ್ಥಃ
ಪ್ರದ್ಯುಮ್ನಶ್ಚ ಹರಿತ್ಪ್ರಭಃ ।
ವಾಮಾಂಶಾರ್ಯಾ ಗತಶ್ಚಿಂತ್ಯೋ
ನೀಲವರ್ಣೋಽನಿರುದ್ಧಕಃ ॥ ೧೪೨ ॥

ತತ್ಪುರೋಂಶ ಪ್ರಕಾಶಿನ್ಯಾಂ
ವಾಸುದೇವಃ ಸಿತಪ್ರಭಃ ।
ದಕ್ಷಾಂಶಬ್ರಹ್ಮನಾಡ್ಯಾಂತು
ಧ್ಯೇಯೋ ನಾರಾಯಣೋಽರುಣಃ ॥ ೧೪೩ ॥

ಪೃಷ್ಠ (ಹಿಂದಿನ) ಭಾಗದಲ್ಲಿರುವ ವಜ್ರಿಕಾನಾಡಿಯಲ್ಲಿ ಹಳದೀ ಬಣ್ಣದಿಂದ ಪ್ರದ್ಯುಮ್ನನೂ, ಎಡಗಡೆಯ ಆರ್ಯಕಾನಾಡಿಯಲ್ಲಿ ನೀಲಬಣ್ಣದಿಂದ

ಅನಿರುದ್ಧನೂ, ಮುಂಭಾಗದ ಪ್ರಕಾಶಿನೀ ನಾಡಿಯಲ್ಲಿ ಬಿಳಿಯ ಬಣ್ಣದಿಂದ ವಾಸುದೇವನೂ, ಬಲಗಡೆಯ ವೈದ್ಯುತಾನಾಡಿಯಲ್ಲಿ ಪಿಂಗಳ (ಕಪಿಲ) ವರ್ಣದಿಂದ ಸಂಕರ್ಷಣನೂ ಮತ್ತು ಮಧ್ಯದ ಬ್ರಹ್ಮನಾಡಿಯಲ್ಲಿ ಕೆಂಪುಬಣ್ಣದಿಂದಿರುವ ನಾರಾಯಣನೂ ಧ್ಯಾನಿಸಲ್ಪಡುವರು.

ಸುಷುಮ್ನಾ ಮೂಲದೇಶಸ್ಯ ಚತುರ್ದಿಕ್ಷು ಚ ಮಧ್ಯತಃ ।
ಚತುಷ್ಪತ್ರಾರುಣಾನಾಂ ಪಂಚಕಂ ತೇಷ್ವನುಕ್ರಮಾತ್ ॥ ೧೪೪ ॥

ಚಿಂತಯೇ ದನಿರುದ್ಧಾದಿ ಪಂಚರೂಪಾಣಿ ಸಾಧಕಃ ।

ಸುಷುಮ್ನಾ ನಾಡಿಯ ನಾಲ್ಕು ದಿಕ್ಕುಗಳಲ್ಲಿಯೂ ಮತ್ತು ಮಧ್ಯದಲ್ಲಿಯೂ ನಾಲ್ಕು ದಳಗಳಿಂದ ಕೂಡಿ ಕೆಂಪುವರ್ಣದ ಐದು ಕಮಲಗಳನ್ನೊಳಗೊಂಡ ಅನಿರುದ್ಧ-ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣರೆಂಬ ಐದು ರೂಪಗಳನ್ನು ತಿಳಿಯುವುದು.

ತತಃ ಸುಷುಮ್ನಾಸಂಸಕ್ತ ನಾಭಿಸಂಸ್ಥೇಷು ಪಂಚಸು ।
ಷಡ್ದಲಾರುಣಪದ್ಮೇಷು ಹ್ಯನಿರುದ್ಧಾದಿಕಾನ್ ಸ್ಮರೇತ್ ॥ ೧೪೫ ॥

ನಂತರ ಸುಷುಮ್ನಾ ನಾಡಿಯಲ್ಲಿ ಸೇರಿದ ಹೊಕ್ಕಳಿನಲ್ಲಿರುವ ಐದು ನಾಡಿಗಳಲ್ಲಿ ಕೆಂಪುವರ್ಣದ ಆರು ದಳಾತ್ಮಕವಾದ ಐದು ಕಮಲಗಳನ್ನೂ ಅವುಗಳಲ್ಲಿ ಅನಿರುದ್ಧಾದಿ ಐದುರೂಪಗಳನ್ನೂ ಸ್ಮರಿಸಬೇಕು.

ಸುಷುಮ್ನಾ ಮಧ್ಯದೇಶಸ್ಥಂ
ಹೃತ್ಪದ್ಮಂ ಚಾಷ್ಟಪತ್ರಕಮ್ ।
ದ್ವಾತ್ರಿಂಶತ್ಕೇಸರೋಪೇತ
ಮಮಲಾರುಣ ಕಾಂತಿಮತ್ ॥ ೧೪೬ ॥

ಆ ಸುಷುಮ್ನಾ ನಾಡಿಯ ಮಧ್ಯದಲ್ಲಿ ಎಂಟು ದಳಾತ್ಮಕವಾದ ಅದರೊಳಗಡೆಯಲ್ಲಿ ಮೂವತ್ತೆರಡು ಕೇಸರಗಳಿಂದ ಕೂಡಿದ ನಿರ್ಮಲವಾದ ಕೆಂಪಿನಂತೆ ಪ್ರಕಾಶಿಸುವ ಹೃದಯಕಮಲವಿರುವುದು.

ಅಂತಃ ಕುಂಚಿತ ಪತ್ರತ್ವಾ
ದಧೋಮುಖಮಿತಿ ಸ್ಮೃತಮ್ ।
ತನ್ನಾಡ್ಯುದ್ಗತ ನಾಲತ್ವಾ
ದೂರ್ಧ್ವನಾಲ ಮಿತೀರಿತಮ್ ॥ ೧೪೭ ॥

ಅದರ ದಳಗಳೆಲ್ಲವೂ ಮುದುರಿಕೊಂಡಿರುವದರಿಂದ ಅಧೋಮುಖ ವಾಗಿರುವುದೆಂದೂ ಆ ನಾಡಿಯು ಮೇಲಕ್ಕೆ ಹೋಗಿರುವುದರಿಂದ ಊರ್ಧ್ವ ನಾಲವೆಂದು ಹೇಳಲ್ಪಡುವುದು.

ಏತತ್ಪದ್ಮೋದರಂ ದಿವ್ಯಂ
ಸಂಪುಟಂ ತತ್ಪ್ರಚಕ್ಷತೇ ।
ತತ್ಕರ್ಣಿಕಾಸ್ಥಿತಂ ಬಿಂಬಂ
ಧ್ಯಾಯೇನ್ನಾರಾಯಣಾಭಿಧಮ್ ॥ ೧೪೮ ॥

ಈ ಕಮಲದ ಮಧ್ಯ (ಹೊಟ್ಟೆಯ) ಭಾಗವು ಸಂಪುಟವೆಂದು ಹೇಳಲ್ಪಡುವುದು; ಅದರ ಕರ್ಣಿಕೆಯಲ್ಲಿ ನಾರಾಯಣನೆಂಬ ಬಿಂಬನನ್ನು ಧ್ಯಾನ ಮಾಡಬೇಕು.

ತಚ್ಚತುಷ್ಪಾರ್ಶ್ವಗೇಷ್ವಷ್ಟಪತ್ರಾಬ್ಜೇಷ್ವಪಿ ಚಿಂತಯೇತ್ ।
ಅನಿರುದ್ಧಾದಿ ಚತ್ವಾರಿ ರೂಪಾಣೀತ್ಯಬ್ಜಪಂಚಕಮ್ ॥ ೧೪೯ ॥

ಅದರ ನಾಲ್ಕು ದಿಕ್ಕುಗಳಲ್ಲಿಯೂ ಇರುವ ನಾಲ್ಕು, ಎಂಟು ದಳಾತ್ಮಕ, ಕಮಲಗಳಲ್ಲಿಯೂ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂಬ ನಾಲ್ಕು ರೂಪಗಳನ್ನು ಧ್ಯಾನಿಸಬೇಕು. ಹೀಗೆಯೇ ಇಲ್ಲಿಯೂ ಕಮಲಗಳು ಐದು.

ಹೃದಯೋರ್ಧ್ವಪ್ರದೇಶೇಽಪಿ
ದ್ವಿಷಟ್ಪತ್ರಾರುಣಾಂಬುಜಮ್ ।
ತಸ್ಮಿನ್ ಪಂಚಾತ್ಮಕೋ
ವಿಷ್ಣುರ್ಧ್ಯೇಯಃ ಸಿದ್ಧಿಮಭೀಪ್ಸಿತಾ ॥ ೧೫೦ ॥

ಹೃದಯದ ಮೇಲೆ ಉರಸ್ಸು ಎಂಬಲ್ಲಿ ಹನ್ನೆರಡು ದಳಾತ್ಮಕವಾದ ಕೆಂಪುವರ್ಣದ ಐದು ಕಮಲಗಳಿರುವುವು; ಸಿದ್ಧಿಯನ್ನು ಆಶಿಸುವವನು ಅಲ್ಲಿಯೂ ಅನಿರುದ್ಧಾದಿ ವಿಷ್ಣುವಿನ ಐದು ರೂಪಗಳನ್ನು ಧ್ಯಾನಮಾಡಬೇಕು.

ಕಂಠೇ ಸುಷುಮ್ನಾಸಂಸಕ್ತಾ ತಾಲುಮಧ್ಯೇಚ ದಿಕ್ಷ್ವಪಿ ।
ದ್ವಿದಲಃ ಶ್ವೇತಪತ್ರಾಬ್ಜೇಷ್ವನಿರುದ್ಧಾದಿಕಾನ್ ಸ್ಮರೇತ್ ॥ ೧೫೧ ॥

ಗಂಟಲಿನಲ್ಲಿ ಸುಷುಮ್ನಾ ನಾಡಿಗೆ ಸೇರಿದಂತೆ ದವಡೆಗಳಲ್ಲಿಯೂ ಮಧ್ಯದಲ್ಲಿಯೂ ಬಿಳಿಯ ಬಣ್ಣದ ಎರಡು ದಳಗಳುಳ್ಳ ಐದು ಕಮಲಗಳನ್ನೂ ಅವುಗಳಲ್ಲಿ ಅನಿರುದ್ಧಾದಿ ಪಂಚರೂಪಗಳನ್ನೂ ಧ್ಯಾನಮಾಡುವುದು.

ಭ್ರುವೋರಂತಃ ಸುಷುಮ್ನಾಯಾಃ ಪಾರ್ಶ್ವಮಧ್ಯಸ್ಥಿತೇಷು ಚ ।
ಚತುರ್ದಲಸಿತಾಬ್ಜೇಷು ಹ್ಯನಿರುದ್ಧಾದಿ ಪಂಚಕಮ್ ॥ ೧೫೨ ॥

ಹುಬ್ಬುಗಳ ಮಧ್ಯದಲ್ಲಿ ಸುಷುಮ್ನಾನಾಡಿಯೂ ಅದರ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ದಳಾತ್ಮಕವಾದ ಬಿಳಿಯಬಣ್ಣದ ಐದುಕಮಲಗಳಿರುವುವು; ಅವುಗಳಲ್ಲಿ ಅನಿರುದ್ಧಾದಿ ಐದು ರೂಪಗಳನ್ನು ಧ್ಯಾನಿಸಬೇಕು.

ಮೂರ್ಧ್ನ್ಯಂತಸ್ಥ ಸುಷುಮ್ನಾಯಾಶ್ಚತುರ್ಪಾರ್ಶ್ವಗತೇಷು ಚ ।
ದ್ವಾದಶಶ್ವೇತಪತ್ರಾಬ್ಜಪಂಚಕೇಷು ಯಥಾಕ್ರಮಮ್ ॥ ೧೫೩ ॥
ಚಿಂತಯೇದನಿರುದ್ಧಾದಿ ಪಂಚರೂಪಾಣಿ ವೈ ಹರೇಃ ।

ಶಿರಸ್ಸಿನ ಮಧ್ಯದಲ್ಲಿರುವ ಸುಷುಮ್ನಾ ನಾಡಿಯ ನಾಲ್ಕು ಪಕ್ಕಗಳಲ್ಲಿಯೂ ಮತ್ತು ಮಧ್ಯದಲ್ಲಿಯ ಹನ್ನೆರಡು ದಳಗಳುಳ್ಳ ಬಿಳಿಯ ಐದು ಕಮಲಗಳನ್ನೂ ಅವುಗಳಲ್ಲಿ ಅನಿರುದ್ಧಾದಿ ಐದು ರೂಪಗಳನ್ನೂ ಧ್ಯಾನಿಸಬೇಕು.

ಏತನ್ಮೂರ್ಧಾನಮಾರಭ್ಯ
ದ್ವಾದಶಾಂಗುಲಿಕೋಽಪರಿ ।
ಸ ಛತ್ರವದ್ದ್ವಿಷಟ್‌ಶ್ವೇತ
ಪತ್ರಾಬ್ಜಂ ತತ್ರ ಚಿಂತಯೇತ್ ॥ ೧೫೪ ॥

ಈ ಮೂರ್ಧನಿಸ್ಥಾನ (ನಡುನೆತ್ತಿ) ವನ್ನು ಪ್ರಾರಂಭಿಸಿಕೊಂಡು ಹನ್ನೆರಡಂಗುಲಗಳ ಮೇಲೆ ಛತ್ರಿಯಂತೆ ಬೆಳ್ಳಗಿರುವ ಹನ್ನೆರಡು ದಳದ ಕಮಲವನ್ನು ಧ್ಯಾನಮಾಡುವುದು.

ತುರೀಯಾಖ್ಯಂ ವಾಸುದೇವಂ
ಮೋಕ್ಷದಂ ಕರ್ಮಸಾಕ್ಷಿಗಮ್ ।
ಏವಂ ದ್ವಾತ್ರಿಂಶದಬ್ಜಸ್ಥ
ಮಚ್ಯುತಂ ಚಿಂತಯೇದ್ಧರಿಮ್ ॥ ೧೫೫ ॥

ಅಲ್ಲಿ ತುರೀಯನೆಂಬ ಮುಕ್ತಿದಾಯಕನಾದ ಮತ್ತು ಕರ್ಮಸಾಕ್ಷಿಯಾದ ಶ್ರೀವಾಸುದೇವನನ್ನು ತಿಳಿಯುವುದು; ಹೀಗೆ ಮೂವತ್ತೆರಡು ಕಮಲಗಳಲ್ಲಿ ಚ್ಯುತಿರಹಿತನಾದ ಶ್ರೀಹರಿಯನ್ನು ಧ್ಯಾನಮಾಡುವುದು.

ತದ್ ಜ್ಞಾನಧ್ಯಾನಸಾಮರ್ಥ್ಯಾದ್ಭವ-
ಬಂಧಾದ್ವಿಮುಚ್ಯತೇ ॥ ೧೫೫ ॥

ಹೀಗೆ ತಿಳಿದು ಧ್ಯಾನಮಾಡುವದರ ದೆಸೆಯಿಂದ ಸಂಸಾರ ಬಂಧನದಿಂದ ಬಿಡುಗಡೆಯಾಗುವುದು.

ಸುಷುಮ್ನಾಯಾ ಶ್ಚತುರ್ದಿಕ್ಷು
ಜ್ಞೇಯಾಃ ಪೂರ್ವಾದಿಷು ಕ್ರಮಾತ್ ।
ಧಾರಿಣೀ ಪಿಂಗಲಾ ಚೈವ
ವಜ್ರಿ ಕೇಲೇತಿ ನಾಡಿಕಾಃ ॥ ೧೫೬ ॥

ಈ ಸುಷುಮ್ನಾನಾಡಿಯ ಪೂರ್ವದಲ್ಲಿ ಧಾರಿಣೀ ನಾಡಿಯೂ, ದಕ್ಷಿಣದಲ್ಲಿ ಪಿಂಗಳಾ ನಾಡಿಯೂ, ಪಶ್ಚಿಮದಲ್ಲಿ ವಜ್ರಿಕಾ ನಾಡಿಯೂ ಮತ್ತು ಉತ್ತರದಲ್ಲಿ ಇಲಾ ನಾಡಿಯೂ ಇರುವುವು.

ಸುಷುಮ್ನಾ ಬ್ರಹ್ಮದೈವತ್ಯಾ
ಪಿಂಗಳಾ ಸೂರ್ಯದೈವಿಕಾ ।
ಇಲಾವೈ ಚಂದ್ರ ದೈವತ್ಯಾ
ವಿಜ್ಞೇಯಾಸ್ತಾ ಯಥಾಕ್ರಮಮ್ ॥ ೧೫೭ ॥

ಸುಷುಮ್ನಾನಾಡಿಯ ಅಭಿಮಾನಿಯು ಬ್ರಹ್ಮದೇವನು; ಪಿಂಗಳಾ ನಾಡಿಗೆ ಸೂರ್ಯದೇವನೂ, ಇಲಾನಾಡಿಗೆ ಚಂದ್ರದೇವನೂ ಅಭಿಮಾನಿಗಳೆಂದು ಕ್ರಮವಾಗಿ ತಿಳಿಯುವುದು.

ಧಾರಿಣ್ಯಾಂ ವಾಸುದೇವಾಖ್ಯ
ಸ್ಫಟಿಕಾಮಲಕಾಂತಿಮಾನ್ ।
ಪಿಂಗಳಾಯಾಂ ಪಿಂಗಳಾಭ
ಶ್ಚಿಂತ್ಯಃ ಸಂಕರ್ಷಣಾಭಿಧಃ ॥ ೧೫೮ ॥

ವಜ್ರಿಕಾಯಾಂ ಪೀತವರ್ಣೋ
ವೇದ್ಯಃ ಪ್ರದ್ಯುಮ್ನನಾಮಕಃ ।
ಇಲಾಯಾಮನಿರುದ್ಧಾಖ್ಯ
ಶ್ಚಿಂತ್ಯಃಶಾಮಲದೀಪ್ತಿಮಾನ್ ॥ ೧೫೯ ॥

ಸ್ಫಟಿಕದಂತೆ ನಿರ್ಮಲವಾದ ವಾಸುದೇವನನ್ನು ಧಾರಿಣೀ ಎಂಬ ಕಪಿಲವರ್ಣದ ಸಂಕರ್ಷಣನನ್ನು ಪಿಂಗಳಾ ನಾಡಿಯಲ್ಲಿಯೂ ವಜ್ರಿಕಾನಾಡಿಯಲ್ಲಿ ಹೊಂಬಣ್ಣದ ಪ್ರದ್ಯುಮ್ನನನ್ನೂ ಮತ್ತು ಇಲಾನಾಡಿಯಲ್ಲಿ ನೀಲ ವರ್ಣದ ಅನಿರುದ್ಧನನ್ನೂ ತಿಳಿಯುವುದು.

ಚತುರ್ವ್ಯಾಹೃತಿ ವಾಚ್ಯಾಸ್ತೇ
ಚತುರ್ನಾಡೀ ನಿಯಾಮಕಾಃ ।
ಮಧ್ಯೇ ನಾರಾಯಣೋ
ಧ್ಯೇಯಸ್ತರುಣಾರುಣಭಾಸ್ವರಃ ॥ ೧೬೦ ॥

ಭೂಃ, ಭುವಃ, ಸ್ವಃ, ಭೂರ್ಭುವಸ್ಸ್ವಃ ಎಂಬ ನಾಲ್ಕು ವ್ಯಾಹೃತಿಮಂತ್ರ ನಿಯಾಮಕರು ಮೇಲೆ ಹೇಳಿದ ಅನಿರುದ್ಧಾದಿ ನಾಲ್ಕು ರೂಪಗಳು; ಮಧ್ಯದಲ್ಲಿ ತರುಣನಾದ ಅರುಣನಂತೆ ಪ್ರಕಾಶಿಸುವ ನಾರಾಯಣನನ್ನು ಧ್ಯಾನಮಾಡುವುದು.

ಏತಾನ್ಯೇವ ಸ್ವರೂಪಾಣಿ
ಸೂರ್ಯಮಂಡಲಗಾನ್ಯಪಿ ।
ಪ್ರಾಚ್ಯಾಂ ದ್ವಿಶತ ರಕ್ತಾಂಶು
ಸಂಸ್ಥಿತೋ ಮಧುನಾಮಕಃ ॥ ೧೬೧ ॥

ಈ ಐದು ಭಗವದ್ರೂಪಗಳು ಸೂರ್ಯಮಂಡಲದಲ್ಲಿಯೂ ಇರುವ ಸ್ವರೂಪಗಳು; ಪೂರ್ವದಿಕ್ಕಿನಲ್ಲಿ ಇನ್ನೂರು ರಕ್ತ (ಕೆಂಪು) ಕಿರಣಗಳಲ್ಲಿರುವ 'ಮಧು' ಎಂಬ

ಋಗ್ವಾಚ್ಯೋ ವಾಸುದೇವೋಗ್ನಿದ್ಯುತಿರ್ವಸ್ವಗ್ನ್ಯುಪಾಸಿತಃ ।
ದಕ್ಷ ದ್ವಿಶತಗೌರಾಂಶು ಸಂಸ್ಥಿತೋ ಮಧುನಾಮಕಃ ॥ ೧೬೨ ॥

ಶುಕ್ಲವರ್ಣೋ ಯಜುರ್ವೇದ ವಾಚ್ಯಃ ಸಂಕರ್ಷಣಃ ಸ್ಮೃತಃ ।
ಮಧುವಿದ್ಯೋದಿತ್ಯೈಃ ಸೇವ್ಯೋರುದ್ರೈರ್ವಾಯುಪುರಸ್ಸರೈಃ॥ ೧೬೩ ॥

ಋಗ್ವೇದದಿಂದ ಹೇಳಲ್ಪಡುವ, ವಸ್ತುಗಳಲ್ಲಿರುವ ಅಗ್ನಿಯಿಂದ ಉಪಾಸಿತನಾದ ಅಗ್ನಿಯಂತೆ ಪ್ರಕಾಶಿಸುವ ವಾಸುದೇವನಿರುವನು; ಹಾಗೆಯೇ ದಕ್ಷಿಣದಿಕ್ಕಿನಲ್ಲಿ ಇನ್ನೂರು ಗೌರಬಣ್ಣದ ಕಿರಣಗಳಲ್ಲಿ ಮಧುವೆಂಬ ಯಜುರ್ವೇದದಿಂದ ಪ್ರತಿಪಾದಿಸಲ್ಪಡುವ ಶ್ವೇತವರ್ಣದ ಸಂಕರ್ಷಣನಿರುವನು; ಈತನು ಮಧುವಿದ್ಯೆಯಲ್ಲಿ (ಮಂತ್ರಗಳಲ್ಲಿ) ಹೇಳಿರುವ ಕ್ರಮಗಳಿಂದ, ರುದ್ರ, ವಾಯು ಮುಂತಾದ ದೇವತೆಗಳಿಂದ ಉಪಾಸಿಸಲ್ಪಡುವನು.

ಪ್ರತ್ಯಕ್ಛತದ್ವಯಶ್ಯಾಮ
ರಶ್ಮಿಸ್ಥ ಶ್ಯಾಮವರ್ಣಕಃ ।
ಸಾಮವೇದಾದಿ ಸಂವಾಚ್ಯಃ
ಪ್ರದ್ಯುಮ್ನೋ ಮಧುನಾಮಕಃ ॥ ೧೬೪ ॥

ಪಶ್ಚಿಮ ದಿಕ್ಕಿನ ಕರಿಯಬಣ್ಣದ ಇನ್ನೂರು ಕಿರಣಗಳಲ್ಲಿ ಶ್ಯಾಮ ವರ್ಣದ ಸಾಮವೇದ ಮೊದಲಾದವುಗಳಿಂದ ವಾಚ್ಯನಾದ, ಮಧು ಎಂಬ ಪ್ರದ್ಯುಮ್ನನು ಸಾಮವೇದಾಭಿಮಾನಿಗಳಾದ ಸಾಮವೆಂಬ ಹೆಸರಿನ ಸೂರ್ಯರಿಂದ ಉಪಾಸಿಸಲ್ಪಡುವನು.

ಸಾಮಾಭಿಮಾನಿಭಿಃ ಸೂರ್ಯೈರುಪಾಸ್ಯಃ ಸಾಮನಾಮಕೈಃ ।
ಉದಗ್ದ್ವಿಶತನೀಲಾಂಶುಸಂಸ್ಥಿತೋ ನೀಲವರ್ಣಕಃ ॥ ೧೬೫ ॥

ಅಥರ್ವವೇದೇತಿಹಾಸಪುರಾಣಪ್ರತಿಪಾದಿತಃ ।
ಮಧುನಾಮಾನಿರುದ್ಧಶ್ಚ ಮರುದ್ಭಿಃ ಸೋಮಪೂರ್ವಕೈಃ ॥ ೧೬೬ ॥

ಉತ್ತರ ದಿಕ್ಕಿನ ನೀಲವರ್ಣದ ಇನ್ನೂರು ಕಿರಣಗಳಲ್ಲಿರುವ ಅಥರ್ವ ವೇದ, ಇತಿಹಾಸ ಮತ್ತು ಪುರಾಣಗಳಿಂದ ಪ್ರತಿಪಾದಿಸಲ್ಪಡುವ ನೀಲಿಬಣ್ಣದ ಮಧು ಎಂಬ ಅನಿರುದ್ಧದೇವನು ಚಂದ್ರ ಮತ್ತು ಮರುದ್ಗಣಗಳಿಂದ ಉಪಾಸಿಸಲ್ಪಡುವನು.

ಉಪಾಸ್ಯಃ ಸೂರ್ಯಮಧ್ಯಸ್ಥ
ಪೀತೋರ್ಧ್ವ ದ್ವಿಶತಾಂಶುಗಃ ।
ಅನಂತವೇದವೇದ್ಯೋಽಸ
ಉಪಾಸ್ಯೋ ಮಧುನಾಮಕಃ ॥ ೧೬೭ ॥

ನಾರಾಯಣಃ ಪ್ರೋದ್ಯದರ್ಕದ್ಯುತಿರ್ವೇದಾಭಿಮಾನಿಭಿಃ ।
ಬ್ರಹ್ಮವಾಗ್ವಾರುಣೀಶೇಷಸೌಪರ್ಣೀಗರುಡಾದಿಭಿಃ ॥ ೧೬೮ ॥

ಸರ್ವದೋಪಾಸ್ಯತೇ ಸೂರ್ಯೇ ಪಂಚಧಾವಸ್ಥಿತೋ ಹರಿಃ ।

ಅನಂತ ವೇದವೇದ್ಯನಾದ ಮಧು ಎಂಬ ಉದಯಿಸುತ್ತಲಿರುವ ಸೂರ್ಯನಂತೆ ಪ್ರಕಾಶಿಸುವ ನಾರಾಯಣನು ಸೂರ್ಯನ ಮಧ್ಯದಲ್ಲಿರುವ ಹಳದೀಬಣ್ಣದ ಇನ್ನೂರು ಕಿರಣಗಳಲ್ಲಿ ವೇದಾಭಿಮಾನಿಗಳಾದ, ಬ್ರಹ್ಮ ವಾಗ್ದೇವಿ (ಸರಸ್ವತಿ), ವಾರುಣೀ, ಸೌಪರ್ಣೀ, ಶೇಷ ಮತ್ತು ಗರುಡ ಮೊದಲಾದವರಿಂದ, ಸೂರ್ಯನಲ್ಲಿ ಹೀಗೆ ಐದು ರೂಪದಿಂದಿರುವ ಶ್ರೀಹರಿಯು ಉಪಾಸಿಸಲ್ಪಡುವನು.

ಪಿಂಗಳಾ ದಕ್ಷಿಣಾನಾಡೀ ಇಲಾ ವಾಮಾ ಪ್ರಚೋದಿತಾ ।
ಪಿಂಗಳಾಂಶಾಃ ಪಂಚಶತನಾಡ್ಯೋ ವೈ ದಕ್ಷಿಣಾಯನಃ ॥ ೧೬೯ ॥

ಪಿಂಗಳಾ ನಾಡಿಯು ಬಲಗಡೆಯಲ್ಲಿಯೂ, ಇಲಾನಾಡಿಯು ಎಡಭಾಗದಲ್ಲಿಯೂ ಇರುವುವು; ಈ ಪಿಂಗಳಾ ನಾಡಿಯಲ್ಲಿ ಐನೂರು ನಾಡಿಗಳು ಕಿರಣಗಳಂತೆ ಇರುವುವು; ಇವು ದಕ್ಷಿಣಾಯನವು.

ಏತಾಶ್ಚ ದಕ್ಷಿಣಾನಾಡ್ಯಃ ತಿರ್ಯಗ್ವಾಮೇ ಪ್ರಸಾರಿತಾಃ ।
ಆತತಾಶ್ಚಾಸು ಸೂರ್ಯಸ್ಯ ದಕ್ಷಿಣಾಯನರಶ್ಮಯಃ ॥ ೧೭೦ ॥

ಈ ಬಲಗಡೆಯ ನಾಡಿಗಳು (ಪುರುಷರಲ್ಲಿ) ಎಡಭಾಗಕ್ಕೆ ಬಂದಿರುತ್ತವೆ. ಇವುಗಳಲ್ಲಿ ಸೂರ್ಯನ ದಕ್ಷಿಣಾಯನದ ಕಿರಣಗಳು ತುಂಬಿರುವುವು.

ದಕ್ಷಿಣಾಯನಮಾರ್ಗೋಽಯಂ ಧೂಮಾದಿರಿತಿವಿಶ್ರುತಃ ।
ಪಿತೃಯಾನಂ ತಮೇವಾಹುಃ ಸ್ಮೃತಿಸ್ಥಾನಂ ವಿಧೀಯತೇ॥ ೧೭೧ ॥

ಧೂಮಾದಿ ಮಾರ್ಗವೆಂದು ಪ್ರಸಿದ್ಧವಾದ ದಕ್ಷಿಣಾಯನದ ಪಿತೃಯಾನವೆಂದು ಹೇಳುವರು; ಈ ಹಾದಿಯಲ್ಲಿ ಹೋದವರು ಮತ್ತೆ ಭೂಮಿಯಲ್ಲಿ ಜನಿಸುವರು.

ಇಲಾಂಶಾಶ್ಚ ಶತಂ ಪಂಚ ನಾಡ್ಯಶ್ಚೈವೋತ್ತರಾಯಣಃ ।
ಉತ್ತರಾಯಣ ನಾಡ್ಯಸ್ತುತಿರ್ಯಗ್ದಕ್ಷಿಣಸಂಸ್ಥಿತಾಃ ॥ ೧೭೨ ॥

ತಾಸ್ವಾತತಾಶ್ಚ ಸೂರ್ಯಸ್ಯ
ರಶ್ಮಯ ಶ್ಚೋತ್ತರಾಯಣಃ ।
ಉತ್ತರಾಯಣ ಮಾರ್ಗೋಽಯ-
ಮರ್ಚಿರಾದಿರಿತಿ ಸ್ಮೃತಃ ॥ ೧೭೩ ॥

ದೇವಯಾನಂ ಬ್ರಹ್ಮಯಾನಂ ತಮೇವಾಹುರ್ಮನೀಷಿಣಃ ।

ಇಲಾನಾಡಿಯ ಶಾಖೆಗಳಾದ ಐನೂರು ನಾಡಿಗಳು ಎಡಭಾಗದಿಂದ ಹೊರಟು ಬಲಕ್ಕೆ ಬಂದಿರುವುವು; ಇವು ಉತ್ತರಾಯಣ ನಾಡಿಗಳು; ಇವುಗಳಲ್ಲಿ ಸೂರ್ಯನ ಉತ್ತರಾಯಣ ಕಿರಣಗಳು ಐನೂರು ತುಂಬಿರುವುವು; ಈ ಹಾದಿಯಲ್ಲಿ ಹೋಗುವುದು ಉತ್ತರಾಯಣ ಮಾರ್ಗವು; ಇದನ್ನು ಬ್ರಹ್ಮ ಲೋಕಕ್ಕೆ ಹೋಗುವ ದೇವಯಾನವೆಂದು ಜ್ಞಾನಿಗಳು ಹೇಳುವರು; ಇದಕ್ಕೆ ಅರ್ಚಿರಾದಿ ಮಾರ್ಗವೆಂದು ಪ್ರಸಿದ್ಧಿಯು.

ಯೇ ಚ ಧೂಮಾದಿಮಾರ್ಗಸ್ಥಾಃ
ಯಾವದ್ದೇಹಸ್ಥಿತಾಂಶುಭಿಃ ।

ನಿರ್ಯಾಂತಿ ವಾಮಕರ್ಣಾಂತೇ
ತಮೋಗಾಃ ಪಿತೃಯಾನಗಾಃ ॥ ೧೭೪ ॥

ಯಾರಾದರೆ ಧೂಮಾದಿ ಮಾರ್ಗದಲ್ಲಿರುವ ದೇಹದಲ್ಲಿನ ನಾಡಿಯ ಶಾಖೆಗಳಿಂದ ಹೊರಟು ಈ ದೇಹವನ್ನು ಬಿಟ್ಟು ಕಿವಿಯ ಮೂಲಕ ಹೋಗುವರೋ, ಅವರು ನರಕಾದಿಗಳನ್ನು ಕುರಿತು ಹೋಗುವ ಪಿತೃಯಾನದವರು ಎಂದು ತಿಳಿಯುವುದು.

ಯೇಚಾರ್ಚಿರಾದಿಮಾರ್ಗಸ್ಥಾಃ
ಮುಕ್ತಿಯೋಗ್ಯಾಶ್ಚಮಾನುಷಾಃ ।
ತೇ ಯಾಂತಿ ದಕ್ಷಿಣಾತ್ಕರ್ಣಾ
ದ್ರಶ್ಮಿಭಿರ್ದೇವಯಾನಗಾಃ ॥ ೧೭೫ ॥

ಮುಕ್ತಿಯೋಗ್ಯರಾದ ಮನುಜರು, ಅರ್ಚಿರಾದಿ ಮಾರ್ಗದಲ್ಲಿದ್ದವರು, ಬಲಗಿವಿಯ ದೆಸೆಯಿಂದ, ಕಿರಣಗಳಿಂದ, ದೇವಯಾನದಲ್ಲಿ ಹೋಗುವರು.

ಯೇತು ಸಾಧನಸಂಪನ್ನಾಃ ಪಕ್ವಾ ಪ್ರಾರಬ್ಧಭೋಗಿನಃ ।
ಅನಾದಿಲಿಂಗ ದೇಹಸ್ಯ ಭಂಗಕಾಲ ಉಪಸ್ಥಿತೇ ॥ ೧೭೬ ॥

ಯೋಗಪ್ರಭಾವಾದ್ದಿವ್ಯಸ್ಯ ಸ್ವಮನಃ ಪರಮಾತ್ಮನಿ ।
ಪೃಥಿವ್ಯಾದಿಕ್ರಮೇಣೈವಹ್ಯವ್ಯಕ್ತಾಂತಂ ನಿಯೋಜ್ಯ ಚ ॥ ೧೭೭ ॥

ತತ್ವಾಭಿಮಾನಿನೋ ದೇವಾನ್ ಕ್ರಮಾತ್ಸಂ ಯೋಜ್ಯ ತೈ ಸಹ ।
ಸ್ವಾಂತಸ್ಥ ಹರಿಣಾಸಾಕಂ ಜೀವಸ್ತೆ ಬ್ರಹ್ಮಯಾನಗಾಃ ॥ ೧೭೮ ॥

ಮುಕ್ತಿಗೆ ಹೋಗಲು ತಮ್ಮ ಸಾಧನಪೂರ್ಣರಾದವರು ಮತ್ತು ಪ್ರಾರಬ್ಧ ಕರ್ಮವನ್ನು ಅನುಭವಿಸಿ ಪಕ್ವಸ್ಥಿತಿಗೆ ಬಂದಿರುವವರು ಅನಾದಿಯಾದ ಲಿಂಗ ದೇಹದ ಬಿಡುಗಡೆಯ ಕಾಲವು ಸಿದ್ಧವಾಗಲು ಶ್ರೀಹರಿಯ ಉತ್ತಮ ಅನುಗ್ರದಿಂದ ದೊರೆತ ಯೋಗದ ಮಹಿಮೆಯ ದೆಸೆಯಿಂದ ತಮ್ಮ ಮನಸ್ಸನ್ನು ಶ್ರೀಹರಿಯಲ್ಲಿ, ಪೃಥ್ವೀ, ಅಪ್ಪು ಮೊದಲು ಮಾಡಿ ಅವ್ಯಕ್ತತತ್ವದವರೆಗೆ ಒಂದರೊಳಗೊಂದರ ಪ್ರವೇಶವನ್ನು ತಿಳಿದು, ತತ್ವಗಳಿಗೆ ಅಭಿಮಾನಿಗಳಾದ ದೇವತೆಗಳನ್ನು ತಾರತಮ್ಯಕ್ರಮದಿಂದ ಒಬ್ಬರೊಳಗೆ ಮತ್ತೊಬ್ಬರ ಪ್ರವೇಶವನ್ನು ತಿಳಿದು ಅವರೊಡನೆ ತಮ್ಮ ಹೃದಯದಲ್ಲಿರುವ ಶ್ರೀಹರಿಯಿಂದ ಸಹಿತರಾಗಿ ಆ ಜೀವರು ಬ್ರಹ್ಮಯಾನದಲ್ಲಿ ಹೋಗುವರು.

ಸುಷುಮ್ನಾಮಾರ್ಗತೋ
ಬ್ರಹ್ಮರಂಧ್ರಾದುತ್ಕ್ರಮ್ಯ ವಾಯುನಾ ।
ಸಾರ್ಧಂ ಬ್ರಹ್ಮಪದಂ ಪ್ರಾಪ್ಯ
ತೇನ ಯಾಂತಿ ಪರಂ ಪದಮ್ ॥ ೧೭೯ ॥

ಏತನ್ಮಾರ್ಗತ್ರಯಂ ಜ್ಞಾತ್ವಾ ಸಮ್ಯಕ್ ಮುಕ್ತಿಪಥಂ ವಿಶೇತ್ ।

ಸುಷುಮ್ನಾ ನಾಡಿಯಿಂದ ಹೊರಟು ಬ್ರಹ್ಮರಂಧ್ರದ ದೆಸೆಯಿಂದ ವಾಯುದೇವರಿಂದ ಸಹಿತವಾಗಿ ಹೊರಹೊರಟು ಬ್ರಹ್ಮಲೋಕವನ್ನು ಕುರಿತು ಹೋಗಿ ಆತನಿಂದ ಸಹಿತರಾಗಿ ಪರಮಪದವಿ ಎಂಬ ಮುಕ್ತಸ್ಥಾನವನ್ನು ಹೊಂದುವರು; ಹೀಗೆ ಅರ್ಚಿರಾದಿ, ಧೂಮಾದಿ ಮತ್ತು ಬ್ರಹ್ಮಮಾರ್ಗವೆಂಬ ಮೂರು ಹಾದಿಗಳನ್ನು ಚೆನ್ನಾಗಿ ತಿಳಿದುಕೊಂಡು ಅವುಗಳೊಳಗೆ ಮುಕ್ತಿಯ ಹಾದಿಯನ್ನು ಸಜ್ಜನರು ಆಶ್ರಯಿಸಬೇಕು.

ದೇವಾನಾಂ ಲಯಮಾರ್ಗೌ ದ್ವೌ
ಪ್ರೋಕ್ತೌ ಶೇಷಗಾರುಡೌ ॥ ೧೮೦ ॥

ದೇವತೆಗಳು ಮುಕ್ತಿಗಾಗಿ ಶ್ರೀಹರಿಯನ್ನು ಕುರಿತು ಹೋಗಲು ಶೇಷ ಮತ್ತು ಗರುಡ ಎಂಬ ಎರಡು ಮಾರ್ಗಗಳಿರುವುವು.

ಗಂಧರ್ವ ಪ್ರಮುಖಾಃ ಸರ್ವೇ ಯೇ ಚ ದೇವಾನುಗಾಶ್ಚತೇ ।
ಪ್ರವಿಶಂತಿ ಕುಬೇರಂ ವೈ ಕುಬೇರೋಽಪ್ರತಿನಾ ಸಹ ॥ ೧೮೧ ॥

ಸೋಮಂ ವಿಶತಿ ವೈ ಸೋಮೋ ವಿಶ್ವಕ್ಸೇನಾದಿಕೈಃ ಸಹ ।
ಪಾರ್ಷದೈರನಿರುದ್ಧಂ ಚ ಹ್ಯನಿರುದ್ಧೋಽಪಿ ಯೋಗಿಭಿಃ ॥ ೧೮೨ ॥

ಸನಕಾದ್ಯೈಸ್ತತಃ ಕಾಮಂ ಕಾಮದೇವಸ್ತು ವಾರುಣೀಮ್ ।
ವಾರುಣೀ ಸ್ವಪತಿಂ ಶೇಷಂ ಶೇಷದೇವಃ ಸರಸ್ವತೀಮ್॥ ೧೮೩ ॥

ಪ್ರವಿಶ್ಯತ್ಯಬ್ಜಜಂ ವಾಣೀ ಬ್ರಹ್ಮಾ ತೇಜೋಽಭಿಧಾಂ ಶ್ರಿಯಮ್ ।
ಶ್ರೀದೇವೀ ವಿಷ್ಣುಸಾಮೀಪ್ಯಲಕ್ಷಣಂ ಸಂಗಮೇಷ್ಯತಿ ॥ ೧೮೪ ॥

ಶೇಷಮಾರ್ಗೋಽಯ ಮುದ್ದಿಷ್ಟಃ.............. ॥

ಗಂಧರ್ವರೇ ಮೊದಲಾದ ಸಕಲ ದೇವತಾನುಚರರು ಕುಬೇರನನ್ನು ಹೊಂದುವರು; ಆತನು ಇವರಿಂದ ಸಹಿತನಾಗಿ ಚಂದ್ರದೇವನನ್ನೂ ಪ್ರವೇಶಿಸುವರು; ಆತನು ವಿಶ್ವಕ್ಸೇನನೇ ಮೊದಲಾದ ಶ್ರೀವಿಷ್ಣುವಿನ

ಸಾಕ್ಷಾತ್ಸೇವಕರಿಂದ ಸಮೇತನಾಗಿ ಅನಿರುದ್ಧನೆಂಬಾ (ಕಾಮನಪುತ್ರ, ಶಂಖಾಭಿಮಾನಿ ದೇವತಾ) ತನನ್ನೂ, ಆತನು ಸನಕ, ಸನಂದನಾದಿ ಯೋಗಿಗಳಿಂದ ಸಹಿತನಾಗಿ ಮನ್ಮಥನನ್ನೂ ಪ್ರವೇಶಿಸುವನು; ಆತನು ವಾರುಣೀದೇವಿಯನ್ನೂ ಆಕೆಯು ತನ್ನ ಪತಿಯಾದ ಶೇಷದೇವರನ್ನೂ, ಆತನು ಸರಸ್ವತೀದೇವಿಯವರನ್ನೂ, ಆಕೆಯು ತನ್ನ ಪತಿಯಾದ ಚತುರ್ಮುಖ ಬ್ರಹ್ಮದೇವನನ್ನೂ, ಆತನು ತೇಜಶ್ಯಬ್ದವಾಚ್ಯಳಾದ ಶ್ರೀಲಕ್ಷ್ಮೀದೇವಿಯನ್ನೂ ಆಕೆಯು ಶ್ರೀವಿಷ್ಣು ಸಾಮೀಪ್ಯ ಲಕ್ಷಣವಾದ ಸಂಗವನ್ನು ಹೊಂದುವಳು; ಇದು ಶೇಷ ಮಾರ್ಗವು.

...........ತದತೋ ಗಾರುಡ ಉಚ್ಯತೇ ।
ವರ್ಣಾಶ್ರಮಾಚರಾ ರತಾಯೇ
ಪ್ರೋಕ್ತಾ ಮಾನುಷೋತ್ತಮಾಃ ॥ ೧೮೫ ॥

ನಿರಋತಿಃ ಪಿತರಃ ಸರ್ವೇ ತಥಾ ವೈವಸ್ವತಾದಯಃ ।
ಮನವಶ್ಚ ಪೃಥ್ವಾದ್ಯಾಽಯೇ ಪ್ರೋಕ್ತಾ ರಾಜಸತ್ತಮಾಃ ॥ ೧೮೬ ॥

ಧರ್ಮಂ ವಿಶಂತಿ ತೇ ಸರ್ವೇ
ಧರ್ಮಃ ಸ್ವಾಯಂಭುವಂ ಮನುಮ್ ।
ಸ್ವಾಯಂಭುವಮನುಃ ಶಕ್ರಂ
ಸಮಾವಿಶತಿ ವೈ ತಥಾ ॥ ೧೮೭ ॥

ಶಕ್ರಮೇವ ವಿಶಂತ್ಯೇತೇ ಪ್ರವಹಾದ್ಯಾಮರುದ್ಗಣಾಃ ।
ವಿನಾಯಕಾ ಸಾಧ್ಯಗಮಾಶ್ಚಾಕಾಶಂ ಪ್ರವಿಶಂತಿ ತೇ ॥ ೧೮೮ ॥

ಮೃತ್ಯವೋ ಋಭವಃ ಸರ್ವೇ ವಿಶಂತಿ ಪೃಥಿವೀಂ ಕ್ರಮಾತ್ ।
ಅಗ್ನಿಪುತ್ರಾಶ್ಚ ಸರ್ವೇಽಪಿ ದೇವಾಶ್ಚೋಕ್ತೇತರೇ ಚ ಯೇ ॥ ೧೮೯ ॥

ತೇ ಸರ್ವೇ ಪ್ರವಿಶಂತ್ಯಗ್ನಿಮಗ್ನಿ
ರಾದಿತ್ಯಮಾವಿಶೇತ್ ।
ಸಚಾಕಾಶಃ ಸಾ ಚ ಪೃಥ್ವೀ ಸ
ಚಾ ದಿತ್ಯೋ ಗುರುಂ ವಿಶೇತ್॥ ೧೯೦ ॥

ಗುರುರ್ವಿಶತಿ ವೈ ಶಕ್ರಮಪಿ
ದೇವರ್ಷಿರ್ನಾರದಃ ।

ಭೃಗುರ್ವಿಧಿ ಸುತಾಃ ಸರ್ವೇ
ವಸಿಷ್ಠಾತ್ರಿ ಪುರೋಗಮಾಃ ॥ ೧೯೧ ॥

ದಕ್ಷಂ ವಿಶತಿ ದಕ್ಷೋಪಿ
ಶಕ್ರಂ ಪ್ರವಿಶತಿ ಪ್ರಭುಮ್ ।
ಶಕ್ರೋ ವಿಶತಿ ಸೌಪರ್ಣೀಂ
ಸೌಪರ್ಣೀ ಸ್ವಪತಿಂ ಖಗಮ್ ॥ ೧೯೨ ॥

ಗರುತ್ಮಾನ್ ಪ್ರವಿಶೇದ್ವಾಣೀಂ
ವಾಣೀಬ್ರಹ್ಮಾಣಮೀಶ್ವರಮ್ ।
ಬ್ರಹ್ಮಾ ತೇಜೋಽಭಿಧಾಂ ಲಕ್ಷ್ಮೀಂ
ಸಮಾಯಾತಿ ಸ್ವಮಾತರಮ್ ॥ ೧೯೩ ॥

ರಮಾ ಯಾತ್ಯತಿ ಸಾಮೀಪ್ಯಂ
ವಿಷ್ಣೋರ್ನಿತ್ಯಾನಪಾಯಿನೀ ।
ಇತ್ಯುಕ್ತೋ ಗಾರುಡೋ ಮಾರ್ಗೋ
ಮುಕ್ತ್ಯರ್ಥಂ ಚ ದಿವೌಕಸಾಮ್॥ ೧೯೪ ॥

ತದನಂತರ ಗಾರುಡಮಾರ್ಗವು ಹೇಳಲ್ಪಡುವುದು; ವರ್ಣಾಶ್ರಮ ಧರ್ಮನಿರತರಾದ ಮುಕ್ತಿಯೋಗ್ಯರಾದ ಮಾನುಷೋತ್ತಮರು, ನಿರಋತಿಯು ಪಿತೃಗಳು, ವೈವಸ್ವತ (ಶ್ರಾದ್ಧದೇವ)ನೇ ಮೊದಲಾದ ೧೧ ಮನುಗಳು, ಪೃಥು, ಜನಕ, ಭರತ ಮೊದಲಾದ ಶ್ರೇಷ್ಠ ರಾಜರು ಧರ್ಮನೆಂಬ ಪ್ರಜಾಪತಿಯನ್ನು ಪ್ರವೇಶಿಸುವರು; ಈತನು ಸ್ವಾಯಂಭುವ ಮನುವನ್ನೂ, ಈತನು ಪುರಂದರನೆಂಬ ದೇವೇಂದ್ರನನ್ನೂ ಪ್ರವೇಶಿಸುವರು; ಪ್ರವಹ, ವಿವಹ ಮೊದಲಾದ ನಲ್ವತ್ತೊಂಭತ್ತು ಮರುದ್ಗಣಗಳು ದೇವೇಂದ್ರನಲ್ಲಿಯೇ ಪ್ರವೇಶಿಸುತ್ತಾರೆ; ವಿನಾಯಕನು, ಸಾಧ್ಯಗಣದವರು ಆಕಾಶವನ್ನು ಪ್ರವೇಶಿಸುವರು; ಮೃತ್ಯುದೇವತೆಗಳು ಮತ್ತು ಋಭುದೇವತೆಗಳು ಸಕಲರೂ ಕ್ರಮದಿಂದ ಪೃಥ್ವಿಯನ್ನು ಪ್ರವೇಶಿಸುವರು; ಸರ್ವ ಅಗ್ನಿತನಯರೂ, ಇಲ್ಲಿ ಹೇಳದಿರುವ ದೇವತೆಗಳೂ, ಅಗ್ನಿಯನ್ನು ಪ್ರವೇಶಿಸುವರು; ಅಗ್ನಿಯು ಸೂರ್ಯನಲ್ಲಿ ಪ್ರವೇಶಿಸುತ್ತಾನೆ; ಆಕಾಶ, ಪೃಥ್ವೀ ಮತ್ತು ಸೂರ್ಯ ತಮ್ಮವರಿಂದ ಸಹಿತವಾಗಿ ಬೃಹಸ್ಪತಿಯನ್ನು ಪ್ರವೇಶಿಸುವರು; ಆತನು ದೇವೇಂದ್ರನನ್ನು ಪ್ರವೇಶಿಸುವನು; ಆ ಇಂದ್ರನು ಸೌಪರ್ಣೀ ದೇವಿಯನ್ನೂ ಆಕೆಯು ತನ್ನ ಪತಿಯಾದ ಗರುಡದೇವನನ್ನೂ, ಆತನು ವಾಣೀ ಎಂಬ

ಸರಸ್ವತೀ ದೇವಿಯನ್ನೂ, ಆಕೆಯು ತನ್ನ ಪತಿಯಾದ ಚತುರ್ಮುಖ ಬ್ರಹ್ಮನನ್ನೂ ಪ್ರವೇಶಿಸುವಳು; ಇವರೆಲ್ಲರೊಡನೆ ಆ ಬ್ರಹ್ಮದೇವನು ತನ್ನ ತಾಯಿಯಾದ ತೇಜೋ ನಾಮಕಳಾದ ಲಕ್ಷ್ಮೀದೇವಿಯನ್ನೂ ಪ್ರವೇಶಿಸುವನು; ಯಾವಾಗಲೂ ಪತಿಯನ್ನು ಬಿಟ್ಟು ಆಗಲದಿರುವ ಆ ರಮಾದೇವಿಯು ಶ್ರೀವಿಷ್ಣುವಿನ ಅತಿ ಸಾಮೀಪ್ಯವನ್ನು ಹೊಂದುವಳು. ಇದೇ ಗಾರುಡ ಮಾರ್ಗವು. ಇದನ್ನು ದೇವತೆಗಳು ಮುಕ್ತಿಗೆ ಹೋಗುವ ಹಾದಿಯೆಂದು ತಿಳಿಯುವುದು.

ನೈತನ್ಮಾರ್ಗದ್ವಯಜ್ಞಾನೀ ಯಾಮಿನೀಂ ಪದವೀಂ
ವ್ರಜೇತ್॥ ೧೯೫ ॥

ಈ ಶೇಷ ಗರುಡಮಾರ್ಗಗಳೆರಡನ್ನೂ ತಿಳಿದವರು ನರಕ ದುಃಖಾತ್ಮಕವಾದ ಯಮಲೋಕಕ್ಕೆ ಹೋಗುವುದಿಲ್ಲ.

ಈ ಎರಡು ಮಾರ್ಗಗಳನ್ನೂ ಕಡೆಯಲ್ಲಿ ತೋರಿಸಿರುವ ಪಟದಿಂದ ಚೆನ್ನಾಗಿ ತಿಳಿಯಬಹುದು.

ಅವ :- ನಾಡಿಗಳ ವಿಷಯವನ್ನು ಹೇಳುವರು :-

ಇತಃ ಪರಂ ಸುಷುಮ್ನಾದಿನಾಡೀ ದಕ್ಷಿಣಪಾರ್ಶ್ವಕೇ ।
ಸ ಷಟ್ತ್ರಿಶತಿ ಸಾಹಸ್ರ ನಾಡ್ಯಃ ಸಂತಿ ಹಿ ತಾಸು ಚ ॥ ೧೯೬ ॥

ಇಲ್ಲಿಂದ ಮುಂದೆ ಸುಷುಮ್ನಾದಿ ನಾಡಿಗಳ ಬಲಭಾಗದಲ್ಲಿ (೩೬,೦೦೦) ಮೂವತ್ತಾರು ಸಾವಿರ ಶಾಖಾನಾಡಿಗಳಿರುವುವು.

ಷಟ್ತ್ರಿಂಶ ತ್ಸಹಸ್ರಾಣಿ ಪುಂರೂಪಾಣಿ ವಿಚಿಂತಯೇತ್ ।
ಏತಾನಿ ಪುರುಷಾಯುಷ್ಯ ದಿನಾಹ್ನಾಂ ದೈವತಾನಿ ಚ ॥ ೧೯೭ ॥

ಮೂವತ್ತಾರು ಸಾವಿರ ಪರಮಾತ್ಮನ ಪುರುಷರೂಪಗಳನ್ನು ಇವುಗಳಲ್ಲಿ ತಿಳಿಯುವುದು; ಈ ರೂಪಗಳು ಜೀವರ ಆಯುಷ್ಯಕಾಲವಾದ ೧೦೦ (ನೂರು) ವರ್ಷಗಳಿಗೆ ಆಗುವ ಹಗಲುಗಳಿಗೆ ನಿಯಾಮಕವಾದವು.

ಸುಷುಮ್ನಾ ವಾಮ
ಪಾರ್ಶ್ವೇಽಪಿ ಶಟ್ತ್ರಿಂಶತಿ ಸಹಸ್ರಕಾಃ ।
ನಾಡ್ಯಃ ಸಂತ್ಯತ್ರ ತಾವಂತಿ
ಸ್ತ್ರೀರೂಪಾಣಿ ವಿಚಿಂತಯೇತ್ ॥ ೧೯೮ ॥

ಸುಷುಮ್ನಾ ನಾಡಿಯ ಎಡಭಾಗದಲ್ಲಿಯೂ ಮೂವತ್ತಾರು ಸಾವಿರ ಸ್ತ್ರೀನಾಡಿಗಳಿರುವುವು; ಅವುಗಳಲ್ಲಿ ಅಷ್ಟೇ ಪರಮಾತ್ಮನ ಸ್ತ್ರೀರೂಪಗಳಿವೆ.

ಏತಾನಿ ಮಾನುಷಾದೀನಾಂ ರಾತ್ರ್ಯಾಯುರ್ದೇವತಾನಿ ಚ ।
ಏತಾನಿ ಪುಂ ಸ್ತ್ರೀರೂಪಾಣಿ ಬೃಹತೀಸ್ತುತಿಗಾನಿ ಚ ॥ ೧೯೯ ॥

ಇವು ಮನುಜಾದಿಗಳ ಆಯುಷ್ಯಕಾಲದ ರಾತ್ರಿಗಳಿಗೆ ನಿಯಾಮಕವಾದ ರೂಪಗಳು; ಈ ಪುರುಷ ಮತ್ತು ಸ್ತ್ರೀರೂಪಗಳು ಬೃಹತೀ ಸ್ತುತಿಯಲ್ಲಿ ಹೇಳಲ್ಪಟ್ಟಿರುವುವು.

ಬೃಹತೀಸಹಸ್ರಾಖ್ಯ ಶ್ರುತೌ ಸ್ವರವ್ಯಂಜನಭೇದತಃ ।
ದ್ವಾಸಪ್ತತಿಸಹಸ್ರಾಣಿ ವರ್ಣಾನ್ಯೇವ ಭವಂತಿ ಹಿ ॥ ೨೦೦ ॥

ಬೃಹತೀ ಛಂದಸಾತ್ಮಕವಾದ ಸಾವಿರ ಋಕ್ಕುಗಳುಳ್ಳ, ಭಾಗವಿಶೇಷಕ್ಕೆ ಬೃಹತೀ ಸಹಸ್ರವೆಂದು ಪ್ರಸಿದ್ಧಿಯು; ಒಂದೊಂದು ಋಕ್ಕಿನಲ್ಲಿ ಮೂವತ್ತಾರು ಅಕ್ಷರಗಳು ಸ್ವರ ಮತ್ತು ವ್ಯಂಜನ ಮಿಶ್ರವಾಗಿರುವುವು; ಈ ಗಣನೆಯಂತೆ (೩೬ ಸ್ವರಗಳು + ೩೬ ವ್ಯಂಜನಗಳು) ೭೨ (ಎಪ್ಪತ್ತೆರಡು) ಒಂದೊಂದು ಋಕ್ಕಿನಲ್ಲಿಯೇ ಆಗುವುವು; ಹೀಗೆ - ಒಂದು ಸಾವಿರ; ಒಟ್ಟು ಎಪ್ಪತ್ತೆರಡು ಸಾವಿರವಾದವು.

ಸ್ವರಾರ್ಣ ಪ್ರತಿಪಾದ್ಯಾನಿ ಪುಂರೂಪಾಣಿ ರಮಾಪತೇಃ ।
ಷಟ್ತ್ರಿಂಶತಿ ಸಹಸ್ರಾಣಿ ವ್ಯಂಜನಾರ್ಣೋದಿತಾನಿ ಚ ॥ ೨೦೧ ॥

ಷಟ್ತ್ರಿಂಶತಿ ಸಹಸ್ರಾಣಿ
ಸ್ತ್ರೀರೂಪಾಣಿ ವಿಚಿಂತಯೇತ್ ।
ಜ್ಞಾತ್ವೈವಂ ತಾನಿ ನರೋಭಕ್ತ್ಯಾ
ಪೂರ್ಣಾಯುಶ್ಯಮವಾಪ್ನುಯಾತ್ ॥ ೨೦೨ ॥

ಸ್ವರಗಳಿಂದ ಪ್ರತಿಪಾದಿತವಾದ ಲಕ್ಷ್ಮೀಪತಿಯಾದ ನಾರಾಯಣನ ಮೂವತ್ತಾರು ಸಾವಿರ ಪುರುಷ ರೂಪಗಳನ್ನು ಮತ್ತು ವ್ಯಂಜನಾಕ್ಷರ ಪ್ರತಿಪಾದ್ಯವಾದ ಮೂವತ್ತಾರು ಸಾವಿರ ಸ್ತ್ರೀರೂಪಗಳನ್ನೂ ತಿಳಿಯುವುದು. ಈ ರೂಪಗಳನ್ನು ಭಕ್ತಿಯಿಂದ ತಿಳಿದವನು ಪೂರ್ಣಾಯುಷ್ಯವುಳ್ಳವನಾಗುವನು.

ವಿಹಿತಾ ಮೂರ್ತಯಶ್ಚಿತ್ರಾ ಯತ್ರನಾಡೀಷು ವೈ ಹರೇಃ ।
ಹಿತಾಃ ನಾಡ್ಯಃ ಸಮುದ್ದಿಷ್ಟಾ ಸ್ತನ್ನಿವಿಷ್ಟೋ ರಮಾಪತಿಃ ॥ ೨೦೩ ॥

ಈ ನಾಡಿಗಳಲ್ಲಿ ಶ್ರೀಹರಿಯ ವಿಚಿತ್ರವಾದ ರೂಪಗಳಿರುವುವು; ಆ ನಾಡಿಗಳು ಹಿತವಾಗಿರುವುವು; ಮತ್ತು ಅವುಗಳಲ್ಲೆಲ್ಲ ಶ್ರೀಲಕ್ಷ್ಮೀಪತಿಯಾದ ನಾರಾಯಣನೇ ಇರುವನು.

ಇಂದುನಾಮಾ ಸರ್ವನಾಡೀ ಸಾರಾನ್ಭುಂಕ್ತೇಽಖಿಲಾನ್ವಿಭುಃ ।
ಏತನ್ನಾಮಸ್ವರೂಪಾಣಿ ನಾಗಮ್ಯಾನ್ಯ ಶಕ್ಯತಃ ॥ ೨೦೪ ॥

ಇಂದು ಎಂಬ ನಾಮದಿಂದ ಶ್ರೀನಾರಾಯಣನು ಈ ನಾಡಿಗಳ ಸಕಲ ಸಾರವನ್ನು ಅನುಭವಿಸುವವನು; ಅಶಕ್ಯವಾದುದರಿಂದ ಈ ರೂಪಗಳ ನಾಮಗಳನ್ನು ಮತ್ತು ಸ್ವರೂಪ ಲಕ್ಷಣಗಳನ್ನೂ ತಿಳಿಯಲಾಗುವುದಿಲ್ಲ.

ಅವ:- ಈಗ ಮಾನಸಿಕ ಪೂಜಾವಿಧಿಯನ್ನು ಹೇಳುವರು:-

ಹೃದಯಾಖ್ಯಂ ಪರಂಬ್ರಹ್ಮಪುರಂ
ದ್ವಾರವಿರಾಜಿತಮ್ ।
ತತ್ಪ್ರಾಗ್ದ್ವಾರಾಣಿ ಚ ತ್ರೀಣಿ
ಚಿಂತಯೇತ್ಪ್ರಥಮೇ ಶ್ರಿಯಮ್ ॥ ೨೦೫ ॥

ಪ್ರತಿಯೊಬ್ಬರ ಹೃದಯವು ಬಾಗಿಲುಗಳಿಂದ ಪ್ರಕಾಶಮಾನವಾದ ಪರಬ್ರಹ್ಮನ ಪಟ್ಟಣವು; ಅಥವಾ ಆತನ ಮನೆಯು; ಅದರ ಪೂರ್ವದಿಕ್ಕಿನಲ್ಲಿ ಮೂರು ಬಾಗಿಲುಗಳಿರುವುವು; ಮೊದಲನೆಯ ಬಾಗಿಲಿನಲ್ಲಿ ಶ್ರೀದೇವಿ ಇರುವಳು.

ದ್ವಿತೀಯೇ ಚಿಂತಯೇತ್ಪ್ರಾಣಂ
ಚಕ್ಷುರಾದಿತ್ಯನಾಮಕಮ್ ।
ದ್ಯುನಾಮಿಕಾಂ ಭಾರತೀಂ ಚ
ತೃತೀಯೇ ಚ ಜಯಾದಿಕೌ ॥ ೨೦೬ ॥

ಎರಡನೆಯದರಲ್ಲಿ ಆದಿತ್ಯನೆಂಬ ನೇತ್ರಪ್ರಾಣನನ್ನೂ ದ್ಯು ಎಂಬ ಭಾರತೀ ದೇವಿಯನ್ನೂ ಮೂರನೆಯದರಲ್ಲಿ ಜಯವಿಜಯರನ್ನೂ ತಿಳಿಯುವುದು.

ದಕ್ಷದ್ವಾರಾಣ್ಯಪಿ ತ್ರೀಣಿ
ತತ್ರಾದ್ಯೇ ಚಿಂತಯೇಚ್ಛ್ರಿಯಮ್ ।
ದ್ವಿತಯೇ ಚಿಂತಯೇದ್ವ್ಯಾನಂ
ಸೋಮಂ ಶ್ರೋತ್ರಾಭಿಧಂ ತಥಾ ॥ ೨೦೭ ॥

ದಕ್ಷಿಣದಲ್ಲಿಯೂ ಮೂರು ಬಾಗಿಲುಗಳು; ಪ್ರಥಮ ದ್ವಾರದಲ್ಲಿ ಶ್ರೀದೇವಿಯೂ ಎರಡನೆಯದರಲ್ಲಿ ವ್ಯಾನನಾಮಕ ವಾಯುವು ಶ್ರೋತ್ರೇಂದ್ರಿಯ ತನ್ನಾಮಕನಾದ ಚಂದ್ರನನ್ನೂ ತಿಳಿಯುವುದು.

ದಿಜ್ಞ ನಾಮಿಕಾಂ ಭಾರತೀಂಚ
ವಾಮ ಪಾರ್ಶ್ವೇ ವಿಚಿಂತಯೇತ್।
ತೃತೀಯೇ ದ್ವಾರಿ ವಿಜ್ಞೇಯೌ
ಬಲಪ್ರಬಲನಾಮಕೌ ॥ ೨೦೮ ॥

ಎಡಭಾಗದಲ್ಲಿ ದಿಜ್ಞ ಎಂಬ ಭಾರತೀದೇವಿಯನ್ನೂ ಮೂರನೇ ಬಾಗಿಲಿನಲ್ಲಿ ಬಲ ಮತ್ತು ಪ್ರಬಲರನ್ನೂ ತಿಳಿಯುವುದು.

ಪ್ರತ್ಯಗ್ದ್ವಾರಾಣಿ ಚ ತ್ರೀಣಿ ಶ್ರಿಯಮಾದ್ಯೇ ವಿಚಿಂತಯೇತ್ ।
ದ್ವಿತೀಯೇಗ್ನಿಂ ವಾಗಪಾನ ನಾಮಕಂ ಚಿಂತಯೇತ್ತತಃ ॥ ೨೦೯ ॥

ಪಶ್ಚಿಮದಲ್ಲಿಯೂ ಮೂರು ಬಾಗಿಲುಗಳು; ಪ್ರಥಮ ದ್ವಾರದಲ್ಲಿ ಶ್ರೀದೇವಿಯನ್ನೂ ಎರಡನೆಯದರಲ್ಲಿ ಅಗ್ನಿ, ವಾಕ್ ಅಪಾನನೆಂಬ ವಾಯುವನ್ನೂ ತಿಳಿಯುವುದು.

ಪೃಥ್ವೀನಾಮ್ನೀಂ ಭಾರತೀಂಚ
ತೃತೀಯೇ ಕುಮುದಾದಿಕೌ ।
ಉದಗ್ದ್ವಾರಾಣಿ ಚ ತ್ರೀಣಿ
ಪ್ರಥಮೇ ಚ ಶ್ರಿಯಂ ಸ್ಮರೇತ್ ॥ ೨೧೦ ॥

ಪೃಥ್ವೀ ಎಂಬ ಭಾರತೀದೇವಿಯನ್ನೂ, ಮೂರನೆಯ ಬಾಗಿಲಿನಲ್ಲಿ ಕುಮುದ ಮತ್ತು ಕುಮುದೇಕ್ಷಣರನ್ನೂ ತಿಳಿಯುವುದು; ಉತ್ತರದಲ್ಲಿಯೂ ಮೂರು ಬಾಗಿಲುಗಳು; ಪ್ರಥಮ ದ್ವಾರದಲ್ಲಿ ಶ್ರೀದೇವಿಯನ್ನು ಸ್ಮರಿಸುವುದು.

ಇಂದ್ರಂ ಮನಃ ಸಮಾನಾಖ್ಯಂ
ದ್ವಿತೀಯೇ ದ್ವಾರಿ ಚಿಂತಯೇತ್ ।
ವಿದ್ಯುನ್ನಾಮ್ನೀಂ ಭಾರತೀಂ ಚ
ತೃತೀಯೇ ನಂದ ಸುನಂದನೌ ॥ ೨೧೧ ॥

ಇಂದ್ರನನ್ನೂ, ಮನಸ್ಸು, ಸಮಾನನೆಂಬ ವಾಯು ಮತ್ತು 'ವಿದ್ಯುತ್' ಎಂಬ ಭಾರತೀದೇವಿಯನ್ನೂ ಎರಡನೆಯ ಬಾಗಿಲಿನಲ್ಲಿಯೂ, ಮೂರನೆಯದರಲ್ಲಿ ನಂದ, ಸುನಂದರೆಂಬ ದ್ವಾರಪಾಲಕರನ್ನೂ ಭಾವಿಸುವುದು.

ಊರ್ಧ್ವದೇಶೇ ದ್ವಾರಮೇಕಂ
ತಸ್ಮಿನ್ನಾಕಾಶನಾಮಿಕಾಮ್ ।
ರಮಾಮುದಾನ ವಾಯುಂಚ
ವಾಙ್ನಾಮ್ನೀಂಚ ಭಾರತೀಮ್ ॥ ೨೧೨ ॥

ಏವಂ ಸಂಚಿಂತಯೇದ್ವಿದ್ವಾನ್ ದ್ವಾರೇಷೂಕ್ತ ಪ್ರಕಾರತಃ ।
ಏವಮೇವ ವಿಚಿಂತ್ಯಾಶ್ಚ ದ್ವಾರಪಾಲಾಸ್ತ್ರಿಧಾಮಸು ॥ ೨೧೩ ॥

ಮೇಲ್ಭಾಗದಲ್ಲಿ ಒಂದೇ ದ್ವಾರವಿರುವುದು; ಅಲ್ಲಿ ಆಕಾಶವೆಂಬ ರಮಾ ದೇವಿಯನ್ನೂ, ಉದಾನವಾಯುವನ್ನೂ ಮತ್ತು 'ವಾಕ್' ಎಂಬ ಭಾರತೀ ದೇವಿಯನ್ನೂ ತಿಳಿಯುವುದು; ಜ್ಞಾನಿಯು ಹೇಳಿದ ಕ್ರಮದಿಂದ, ಬಾಗಿಲುಗಳಲ್ಲಿ ದ್ವಾರಪಾಲಕರನ್ನು ತಿಳಿಯುವುದು. ಇದರಂತೆಯೇ ಅನಂತಾಸನ, ಶ್ವೇತದ್ವೀಪ, ಮತ್ತು ವೈಕುಂಠ ಎಂಬ ಮೂರು ಸ್ಥಳಗಳಲ್ಲಿಯೂ (ಹೃದಯ, ಕಂಠ ಮತ್ತು ಶಿರಸ್ಸು) ದ್ವಾರಪಾಲಕರನ್ನು ತಿಳಿಯುವುದು; ಮತ್ತು ಈ ಮೂರು ಲೋಕಗಳಲ್ಲಿಯೂ ಇರುವ ಶ್ರೀ, ಭೂ ಮತ್ತು ದುರ್ಗಾಭಾಗ ಗಳಲ್ಲಿಯೂ ತಿಳಿಯುವುದು.

ಏತಾದೃಶಪುರೀ ಮಧ್ಯೇ ಪರಂ
ಬ್ರಹ್ಮೋಪಬೃಂಹಿತಮ್ ।
ಸುಷುಮ್ನಾಖ್ಯಮಹಾರಾಜ
ರಮ್ಯಸೌಧಾಂತರಸ್ಥಿತಮ್ ॥ ೨೧೪ ॥

ಇಂತಹ ನಗರದ ಮಧ್ಯದಲ್ಲಿ ಪರಬ್ರಹ್ಮನಿಂದ ವಾಸಿಸಲ್ಪಡುವ ಸುಷುಮ್ನೆ ಎಂಬ ಮನೋಹರವಾದ ರಾಜನ ಉಪ್ಪರಿಗೆಯ ಮಧ್ಯದಲ್ಲಿರುವ;

ದಹರಾಖ್ಯಾತ್ಮ ಹೃತ್ಪದ್ಮ
ವಿಲಸತ್ಕರ್ಣಿಕಾಲಯೇ ।
ಚಿಂತಯೇಚ್ಚ ಶ್ರಿಯಂ ಪದ್ಮೇ
ಭೂದುರ್ಗೇ ನಾಲ ಕಂದಯೋಃ ॥ ೨೧೫ ॥

ದಹರವೆಂಬ ಹೃದಯ ಕಮಲದಲ್ಲಿ ಪ್ರಕಾಶಿಸುವ ಕರ್ಣಿಕೆ ಎಂಬ ಜಾಗವಿರುವುದು; ಕಮಲದಲ್ಲಿ ಶ್ರೀದೇವಿಯನ್ನು ನಾಲ ಮತ್ತು ಕಂದ (ಗಡ್ಡೆ) ದಲ್ಲಿ ಭೂ ಮತ್ತು ದುರ್ಗಾದೇವಿಯರನ್ನು ತಿಳಿಯುವುದು.

ಅಷ್ಟಪತ್ರೇಷು ಶಕ್ತ್ಯಾದ್ಯಾ ವಿಜ್ಞೇಯಾ ಹರಿಮೂರ್ತಯಃ ।
ವಿದಿಗ್ದಲೇಷು ಚೈಕೈಕಾ ದ್ವೇದ್ವೇ ವೈ ದಿಗ್ದಲೇಷ್ವಪಿ ॥ ೨೧೬ ॥

ಪದ್ಮದ ಎಂಟು ದಳಗಳಲ್ಲಿಯೂ ಶಕ್ತಿಯೇ ಮೊದಲಾದ ಶ್ರೀಹರಿಯ ಹನ್ನೆರಡು ಮೂರ್ತಿಗಳನ್ನು ತಿಳಿಯುವುದು; ಪೂರ್ವದಲ್ಲಿ ಶಕ್ತಿ, ಪ್ರತಿಷ್ಠಾ, ಆಗ್ನೇಯದಲ್ಲಿ ಸಂವಿತ್, ದಕ್ಷಿಣದಲ್ಲಿ, ಸ್ಫೂರ್ತಿ, ಪ್ರಕೃತಿ, ನೈಋತ್ಯದಲ್ಲಿ ಕಲಾ, ಪಶ್ಚಿಮದಲ್ಲಿ ವಿದ್ಯಾ, ಮತಿ, ವಾಯವ್ಯದಲ್ಲಿ ನಿಯತಿ, ಉತ್ತರದಲ್ಲಿ ಮಾಯಾ, ಕಾಲ, ಈಶಾನ್ಯದಲ್ಲಿ - ಪುರುಷ - ಹೀಗೆ ಭಾವಿಸುವುದು.

ವಸವೋಽಪ್ಯಷ್ಟಸಂಖ್ಯಾಕಾಃ ಪದ್ಮಪತ್ರಾಭಿಮಾನಿನಃ ।
ಸರಸ್ವತೀ ಭಾರತೀ ಚ ಹೃತ್ಪದ್ಮ ಸ್ವಾಭಿಮಾನಿನೀ ॥ ೨೧೭ ॥

ಆ ಕಮಲದ ಎಂಟು ದಳಗಳಿಗೆ ದ್ರೋಣ, ಪ್ರಾಣ, ಧ್ರುವ, ಅರ್ಕ, ಅಗ್ನಿ, ದೋಷ, ವಸು, ವಿಭಾವಸು ಮತ್ತು ದ್ಯು ಎಂಬ ಎಂಟು ವಸುಗಳೂ ಅಭಿಮಾನಿಗಳು; ಸರಸ್ವತೀ ಮತ್ತು ಭಾರತೀದೇವಿಯರಿಬ್ಬರೂ ಹೃದಯದಲ್ಲಿರುವ ಕಮಲದ ಅಭಿಮಾನಿಗಳು.

ಹೃತ್ಪದ್ಮಕರ್ಣಿಕಾಗ್ರಸ್ಥಃ
ಸರ್ವಾಂಗುಷ್ಠಪ್ರಮಾಣಕಃ ।
ಅಗ್ರೇಶಃ ಪ್ರಾಜ್ಞ ನಾಮಾಸೌ
ಜೀವಾನಾಂ ಚ ಸುಷುಪ್ತಿದಃ ॥ ೨೧೮ ॥

ಹೃದಯ ಕಮಲದ ಕರ್ಣಿಕೆಯ ತುದಿಯಲ್ಲಿ ಸಕಲರ ಕೈ ಹೆಬ್ಬೆರಳಿನ ಒಂದು ಪರ್ವದಷ್ಟು ಉದ್ದವಾಗಿ, ಪ್ರಾಜ್ಞನೆಂಬ ಅಗ್ರೇಶನು ಜೀವರಿಗೆ ಸುಖನಿದ್ರೆಯನ್ನುಕೊಡುವವನು.

ಸರ್ವತೋ ಹೃದಯಾಕಾಶೇ ವ್ಯಾಪ್ತಃ ಪ್ರಾದೇಶಸಂಮಿತಃ ।
ಜೀವಾಧಾರಃ ಸವಿಜ್ಞೇಯಃ ಪರಃ ಪುರುಷನಾಮಕಃ ॥ ೨೧೯ ॥

ಸಕಲ ಕಡೆಯಿಂದಲೂ ಹೃದಯದ ಅವಕಾಶದಲ್ಲಿ ಪ್ರಾದೇಶ ಪರಿಮಿತಿಯುಳ್ಳ (ಒಂದು ಚೋಟು) ಜೀವನಿಗೆ ಆಧಾರನಾದ ಪುರುಷ ನಾಮಕನಾದ ಗುಣಪೂರ್ಣನಾದ ಶ್ರೀಹರಿಯನ್ನು ತಿಳಿಯುವುದು.

ಕರ್ಣಿಕಾ ಮೂಲಗೋವಿಷ್ಣು
ರಂಗುಷ್ಠಾಗ್ರ ಪ್ರಮಾಣಕಃ ।

ಮೂಲೇಶಶ್ಚಿಂತನೀಯೋ ಯಂ
ವಿಜ್ಞಾನಾತ್ಮೇತಿ ಯಂ ವಿದುಃ ॥ ೨೨೦ ॥

ಕರ್ಣಿಕೆಯ ಮೂಲದಲ್ಲಿ ಅಂಗುಷ್ಠದ ತುದಿಯಭಾಗದಷ್ಟು ಗಾತ್ರನಾಗಿ ಮೂಲೇಶನು ಇರುವನು; ಆತನನ್ನು ವಿಜ್ಞಾನಾತ್ಮನೆಂದು ಹೇಳುವರು.

ಏತದ್ರೂಪತ್ರಯಂ ವಿಷ್ಣೋಃ
ದಹರಾಖ್ಯಂ ಪ್ರಕೀರ್ತಿತಮ್ ।
ಮೂಲೇಶಪಾದಮಾಶ್ರಿತ್ಯ
ಮುಖ್ಯಪ್ರಾಣೋಽಸ್ಯ ಸನ್ಮುಖಃ ॥ ೨೨೧ ॥

ಶ್ರೀವಿಷ್ಣುವಿನ ಈ ಮೂರು ರೂಪಗಳು ದಹರವೆಂದು ಪ್ರಸಿದ್ಧವಾಗಿರುವುದು; ಮೂಲೇಶನ ಪಾದವನ್ನು ಆಶ್ರಯಿಸಿ ಆತನಿಗೆ ಅಭಿಮುಖನಾಗಿ ಮುಖ್ಯ ಪ್ರಾಣನಿರುವನು.

ಕೃತಾಂಜಲಿಪುಟಃ ಪ್ರಾಚೀಮುಖಸ್ತಿಷ್ಠತಿ ನಿತ್ಯಶಃ ।
ತಸ್ಮಿಂಶ್ಚ ಶುಚಿಷದ್ವಿಷ್ಣುಃ ಪ್ರಾಣಶ್ಚಿಂತ್ಯಶ್ಚ ಲಾಲುಕಃ ॥ ೨೨೨ ॥

ಕೈಜೋಡಿಸಿಕೊಂಡು ಪೂರ್ವಾಭಿಮುಖನಾಗಿ ಯಾವಾಗಲೂ ಇರುವನು; ಆ ಮುಖ್ಯ ಪ್ರಾಣನಲ್ಲಿ ಶುಚಿಷತ್ ಎಂಬ ವಿಷ್ಣುವು ಇರುವನು; ಮತ್ತು ಲಾಲುಕನೆಂಬ ಪ್ರಾಣನನ್ನು ಅಲ್ಲಿ ಧ್ಯಾನಿಸಬೇಕು.

ಅಪರಾಜಿತರೂಪತ್ವಾದಪರಾಜಿತಸೇನಕಃ ।
ಇಂದ್ರೋ ವೈಕುಂಠ ಇತ್ಯೇತೇ ವಿಜ್ಞೇಯಾಸ್ತದುಪಾಸಕೈಃ॥ ೨೨೩ ॥

ಎಂದಿಗೂ ಪರಾಜಯ (unconquerable) ರಹಿತವಾದ ರೂಪವುಳ್ಳವನಾದುದರಿಂದ ಅಪರಾಜಿತರಾದ ಅನುಯಾಯಿಗಳಿಂದ ಸಹಿತನಾದವನು; ಆತನನ್ನು ಉಪಾಸಕರು ಇಂದ್ರ, ವೈಕುಂಠ ಮೊದಲಾದ ನಾಮ ಮತ್ತು ರೂಪಗಳಿಂದ ಧ್ಯಾನಿಸುವರು.

ಮುಖ್ಯಪ್ರಾಣೋ ಶ್ವಾಸರೂಪಹಂಸಮಂತ್ರಂ ಜಪೇತ್ಸದಾ ।
ಜೀವೇನ ಕಾರಯತ್ಯೇವ ತಜ್ಜಪಂ ಹರಿತುಷ್ಟಯೇ ॥ ೨೨೪ ॥

ಮುಖ್ಯ ಪ್ರಾಣನು ಶ್ವಾಸಾತ್ಮಕವಾದ, ಸರ್ವದಾ ಹಂಸಮಂತ್ರವನ್ನು ಜಪಿಸುವನು; ಜೀವನಿಂದಲೂ ಆ ಮಂತ್ರಜಪವನ್ನು ಶ್ರೀಹರಿಯ ಪ್ರಸನ್ನತೆಗಾಗಿ ಮಾಡಿಸುವನು.

ಏಕವಿಂಶತಿಸಹಸ್ರಾಣಿ
ಶ್ವಾಸನಂ ಷಟ್ಶತಾನಿ ಚ ।
ಭವಂತ್ಯೇತಚ್ಚ ವಿಜ್ಞಾಯ
ಭಕ್ತ್ಯಾ ವಿಷ್ಣೌ ಸಮರ್ಪಯೇತ್ ॥ ೨೨೫ ॥

(೨೧,೬೦೦) ಇಪ್ಪತ್ತೊಂದು ಸಾವಿರದ ಆರುನೂರು ಸಂಖ್ಯೆಯ ಮಂತ್ರ ಜಪವು ಒಂದು ದಿನದಲ್ಲಿ ಆಗುವುದು; ಇದನ್ನು ಚೆನ್ನಾಗಿ ತಿಳಿದು ಭಕ್ತಿಯಿಂದ ಶ್ರೀವಿಷ್ಣುವಿನಲ್ಲಿ ಸಮರ್ಪಿಸುವುದು.

ಸಹಸ್ರಧಾ ವಿಭಿನ್ನಂ ಬಾಲಾಗ ಮವಶಿಷ್ಯತೇ ।
ತಾವತ್ಪರಿಮಿತೋ ಜೀವಃ ಶಾಶ್ವತಃ ಸ್ವಪ್ರಕಾಶಕಃ ॥ ೨೨೬ ॥

(ಕುದುರೆಯ) ಬಾಲದ ಕೊನೆಯ ತುದಿಯನ್ನು ಒಂದು ಸಾವಿರ ಭಾಗ ಮಾಡಿದರೆ ಒಂದು ಭಾಗವೆಷ್ಟಿರುವುದೊ ಅಷ್ಟೆ ಜೀವನ ಸ್ವರೂಪದ ಪರಿಮಿತಿಯು; ಈ ಜೀವನು ನಿತ್ಯನು, ಮತ್ತು ಶ್ರೀಹರಿಯ ಅನುಗ್ರಹದಿಂದ ಜ್ಞಾನ ಪ್ರಕಾಶವುಳ್ಳವನು.

ಪ್ರಾಣೋಪಪಾದಮಾಶ್ರಿತ್ಯ ನಿತ್ಯಸ್ತಿಷ್ಠತಿ ಕರ್ಮಕೃತ್ ।
ವಿಷ್ಣೋರಂಗಾನಿ ಜೀವಾಂಗೇಷ್ವವ ಚ್ಛಿನ್ನಾನಿ ನಿತ್ಯಶಃ ॥ ೨೨೭ ॥

ಮುಖ್ಯಪ್ರಾಣನ ಪಾದದ್ವಯಗಳನ್ನು ಆಶ್ರಯಿಸಿ ಯಾವಾಗಲೂ ಈ ಜೀವನು ಕರ್ಮಮಾಡುವ ಯೋಗ್ಯತೆ ಉಳ್ಳವನಾಗಿ ಇರುತ್ತಾನೆ; ಯಾವಾಗಲೂ ಶ್ರೀವಿಷ್ಣುವಿನ ಅವಯವಗಳು ಜೀವನ ಅಂಗಾಂಗಗಳಲ್ಲಿರುವುವು.

ವಾಸುದೇವೋ ಹರೇಃ ಶೀರ್ಷಂ
ಜೀವಶೀರ್ಷೇ ವ್ಯವಸ್ಥಿತಃ ।
ನಾರಾಯಣೋ ಹರೇರ್ಮಧ್ಯಃ
ಜೀವಸಂದೋಹಸಂಸ್ಥಿತಃ ॥ ೨೨೮ ॥

ಪಂಚನಾರೀ ತುರಗ ಅಥವಾ ನವನಾರೀ ಕುಂಜರದಂತೆ ಶ್ರೀಹರಿಯ ಒಂದೊಂದು ಅವಯವಗಳೂ ಆತನ ಅನೇಕ ವಾಸುದೇವಾದಿ ರೂಪಗಳೇ ಆಗಿರುವುವು; ತತ್ಕ್ರಮವನ್ನು ಹೇಳುತ್ತಾರೆ; ವಾಸುದೇವನು ಹರಿಯ ತಲೆಯು; ಜೀವನ ಶಿರಸ್ಸಿನಲ್ಲಿರುವನು; ನಾರಾಯಣನು ಆತನ ಮಧ್ಯಪ್ರದೇಶವು; ಜೀವನ ಅದೇ ಪ್ರದೇಶದಲ್ಲಿರುವನು.

ವಿಷ್ಣೋಶ್ಚದಕ್ಷಿಣಃ ಪಕ್ಷಃ ಪ್ರದ್ಯುಮ್ನೋಜೀವಪಕ್ಷಗಃ ।
ವಾಮಪಕ್ಷೋಽನಿರುದ್ಧಶ್ಚ ಜೀವವಾಮೇ ಚ ಸಂಸ್ಥಿತಃ ॥ ೨೨೯ ॥

ವಿಷ್ಣುವಿನ ಬಲಭಾಗವು ಪ್ರದ್ಯುಮ್ನನು; ಜೀವನ ಬಲಭಾಗದಲ್ಲಿರುವನು; ಎಡಭಾಗವು ಅನಿರುದ್ಧನು; ಜೀವನ ಎಡಗಡೆಯ ಪಕ್ಕೆಯಲ್ಲಿರುವನು.

ಸಂಕರ್ಷಣೋ ಹರೇರಂಘ್ರಿ-
ರ್ಜೀವಪಾದೇ ಚ ಸಂಸ್ಥಿತಃ ।
ವಿಷ್ಣೋರ್ವಾಗ್ಭಾರ್ಗವೋರಾಮೋ
ಜೀವವಾಚಿ ಪ್ರತಿಷ್ಠಿತಃ ॥ ೨೩೦ ॥

ಸಂಕರ್ಷಣನು ಹರಿಯ ಪಾದಗಳು; ಆತನೇ ಜೀವನ ಕಾಲುಗಳಲ್ಲಿರುವನು; ವಿಷ್ಣುವಿನ ವಾಕ್ ಪರಶುರಾಮನು; ಜೀವನ ವಾಗಿಂದ್ರಿಯದಲ್ಲಿರುವನು.

ನೃಸಿಂಹಶ್ಚ ಹರೇಃ ಪ್ರಾಣಃ ಜೀವಪ್ರಾಣೇ ಚ ಸಂಸ್ಥಿತಃ ।
ಹರೇಶ್ಚಕ್ಷುಶ್ಚ ಕಪಿಲೋ ಜೀವಚಕ್ಷುಸ್ಥಿತೋ ಹರಿಃ ॥ ೨೩೧ ॥

ಹರಿಯ ಪ್ರಾಣನು ನರಸಿಂಹನು; ಜೀವನ ಪ್ರಾಣನಲ್ಲಿರುವನು; ಹರಿಯ ನೇತ್ರವು ಕಪಿಲನು; ಜೀವನ ಕಣ್ಣುಗಳಲ್ಲಿರುವನು.

ಜೀವಾಭಿಮಾನೀ ಶೇಷಶ್ಚ ತಸ್ಮಿನ್ ಸಂಕರ್ಷಣಃ ಸ್ಥಿತಃ ।
ಅನಿರುದ್ಧಾದಿಭಿಃ ಸೂಕ್ಷ್ಮ ಸೃಷ್ಟೌದೇಹಾ ವಿನಿರ್ಮಿತಾ ॥ ೨೩೨ ॥

ಜೀವರ ಅಭಿಮಾನಿಯು ಶೇಷದೇವರು; ಅವನಲ್ಲಿ ಸಂಕರ್ಷಣನಿರುವನು; ಅನಿರುದ್ಧಾದಿಗಳಿಂದ ಸೂಕ್ಷ್ಮ ಸೃಷ್ಟಿಕಾಲದಲ್ಲಿ ಜೀವನ ಸೂಕ್ಷ್ಮಾದಿ ದೇಹಗಳು ನಿರ್ಮಿಸಲ್ಪಟ್ಟವು.

ಕೋಶರೂಪಾಶ್ಚತುರ್ಷ್ವೇಷು ಹ್ಯನಿರುದ್ಧಾದಯಃ ಸ್ಥಿತಾಃ ।
ತೈರಾವೃತೋ ಲಿಂಗದೇಹ ಸ್ತ್ವಾಷೋಡಶಕಲಾತ್ಮಕಃ ॥ ೨೩೩ ॥

ಅವು, ಅನ್ನಮಯ, ಪ್ರಾಣಮಯ, ಮನೋಮಯ, ಆನಂದಮಯ ಮತ್ತು ವಿಜ್ಞಾನಮಯ ಎಂಬ ಐದು ಕೋಶರೂಪಗಳು; ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು, ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧವೆಂಬ ಪಂಚ ತನ್ಮಾತ್ರಗಳು, ಮನಸ್ಸು ಹೀಗೆ ಹದಿನಾರು ಕಲೆಗಳಿಂದ ಕೂಡಿದ ಲಿಂಗದೇಹವನ್ನು ಆ ಸೂಕ್ಷ್ಮದೇಹಗಳು ಆವರಿಸಿಕೊಂಡಿವೆ.

ಜೀವಾವರಣಭೂತೋಽಸ್ಯ ವಾಸುದೇವೋ ನಿಯಾಮಕಃ ।
ಅನಾದಿಲಿಂಗದೇಹೇಸ್ಮಿನ್ ಜೀವಸ್ತಿಷ್ಠತ್ಯಶಾಶ್ವತೇ ॥ ೨೩೪ ॥

ಜೀವನ ಆವರಣರೂಪವಾದ ಈ ಲಿಂಗದೇಹದ ನಿಯಾಮಕನು ವಾಸುದೇವನು; ಈ ಅನಾದಿಯಾದ ಆದರೆ ನಿತ್ಯವಲ್ಲದ (to be removed) ಲಿಂಗದೇಹದಲ್ಲಿ ಜೀವನು ಅಡಗಿರುವನು.

ದೇವಾನಾಮಂಶತೋ ವ್ಯಾಪ್ತಿರ್ದೇಹೇ
ನೃಣಾಂ ಪ್ರಕಾಶಿತಃ ।
ಸ್ವೇಂದ್ರಿಯೈರ್ಬಾಹ್ಯಸಂಬಂಧಾತ್
ವಿಷಯ ಜ್ಞಾನವಾನ್ ಭವೇತ್ ॥ ೨೩೫ ॥

ದೇವತೆಗಳ ಅಂಶದ ದೆಸೆಯಿಂದ ವ್ಯಾಪ್ತಿಯು ಮನುಜರ ದೇಹದಲ್ಲಿ ಪ್ರಕಾಶಮಾನವಾಗುವುದು; ಸ್ವರೂಪೇಂದ್ರಿಯಗಳಿಂದ ಸ್ಥೂಲದೇಹದ ಇಂದ್ರಿಯಗಳಿಗೆ ಸಂಬಂಧವಿರುವುದರ ದೆಸೆಯಿಂದ ಈತನು ವಿಷಯಗಳ ಜ್ಞಾನಿಯಾಗುತ್ತಾನೆ.

ಚರಾಮ್ಯಹಂ ಕರೋಮೀದಂ ಮಮೇತ್ಯಜ್ಞಾನ ಮೋಹಿತಃ ।
ಲಿಪ್ಯತೇಽತಃ ಕರ್ಮಬಂಧೈಸ್ತದಪಾಯಾದ್ವಿಮುಚ್ಯತೇ ॥ ೨೩೬ ॥

ನಾನು ಭೋಜನ ಮಾಡುವೆನು; ಇದನ್ನು ಮಾಡುವೆನು; ಇದು ನನ್ನದು; ನನ್ನ ಅಧೀನವಾದುದು; ಇಂತಹ ಅಜ್ಞಾನದಿಂದ ಭ್ರಾಂತನಾಗಿ ಪಾಪ ಪುಣ್ಯಾದಿಕರ್ಮ ಬಂಧನಕ್ಕೊಳಗಾಗುವನು; ಈ ಅಹಂಕಾರ ಮಮಕಾರಗಳೆರಡೂ ನಾಶವಾದರೆ ಮುಕ್ತನಾಗುವನು.

ಜೀವಹೃತ್ಕಮಲಂ ಶ್ವೇತಮಷ್ಟ-
ಪತ್ರಂ ಸಕರ್ಣಿಕಮ್ ।
ಧ್ಯೇಯಸ್ತತ್ಕರ್ಣಿಕಾವಿಷ್ಣೋ
ಹ್ಯಾತ್ಮಾನಾರಾಯಣಃ ಪರಃ ॥ ೨೩೭ ॥

ಜೀವ ಸ್ವರೂಪದ ಹೃದಯದಲ್ಲಿ ಬಿಳಿಯ ಬಣ್ಣದ, ಕರ್ಣಿಕೆಯಿಂದ ಸಹಿತವಾದ, ಎಂಟು ದಳದ ಕಮಲವಿರುವುದು; ಆ ಕರ್ಣಿಕೆಯಲ್ಲಿ ಆತ್ಮನೆಂಬ ಗುಣಪೂರ್ಣನೂ ಲೋಕ ಮತ್ತು ಜೀವವಿಲಕ್ಷಣನೂ ಆದ ನಾರಾಯಣನು ಇರುವನು; ಆತನನ್ನು ಧ್ಯಾನಮಾಡಬೇಕು.

ಜೀವಹೃನ್ಮಂಡಲಾವಿಷ್ಟಃ ಶ್ಯಾಮೋ ಹೃದಯನಾಮಕಃ ।
ನಾರಸಿಂಹಃ ಸದಾಜೀವಸಂಸ್ಥಿತೋ ಜೀವನಾಮಕಃ ॥ ೨೩೮ ॥

ಜೀವನ ಹೃದಯದ ಅವ್ಯಾಕೃತಾಕಾಶದಲ್ಲಿ ಶ್ಯಾಮವರ್ಣದ ಹೃದಯನೆಂಬ ನರಸಿಂಹನು ಸದಾ ಜೀವನಾಮದಿಂದಲೇ ಜೀವನಲ್ಲಿರುವನು.

ಅನಿರುದ್ಧೋಽಪಿ ಜೀವಾಂತಃ ಶರೀರೇ ವ್ಯಾಪ್ಯ ತಿಷ್ಠತಿ ।
ಸ ಸಾಕ್ಷಾಚ್ಛುಬಲೋ ವಿಷ್ಣುಃ ಶರೀರ ಇತಿ ನಾಮಕಃ ॥ ೨೩೯ ॥

ಜೀವನ ಒಳಶರೀರದಲ್ಲಿ ಅನಿರುದ್ಧನು ತುಂಬಿರುವನು; ಆತನು ಬಿಳಿಯ ಬಣ್ಣದಿಂದಿರುವನು; ಶರೀರ ಎಂದು ಹೇಳಲ್ಪಡುವನು; ಇದೇ ಅನಿರುದ್ಧ ಶರೀರವು.

ಜೀವಾಂತಃ ಪ್ರೇರಕೋ
ವಿಷ್ಣುರಂತರಾತ್ಮೇತಿ ಯಂ ವಿದುಃ ।
ಸ ಚೋಪಾಸ್ಯಃ ಸದೈವೇಷ್ಟಃ
ಸದಾ ಜೀವಚರೋ ಹರಿಃ ॥ ೨೪೦ ॥

ಜೀವನ ಅಂತರಂಗದಲ್ಲಿ ಪ್ರೇರಣೆಮಾಡುವ ವಿಷ್ಣುವು ಅಂತರಾತ್ಮನೆಂಬ ನಾಮವುಳ್ಳವನು; ಆತನು ಯಾವಾಗಲೂ ಜೀವರ ಕರ್ಮಫಲ ಭೋಜಕನಾಗಿ ಸಕಲರಿಗೂ ಅಪೇಕ್ಷಿತನಾದುದರಿಂದ ಸರ್ವರಿಂದಲೂ ಉಪಾಸ್ಯನು.

ಸೋಹಂಕಾರ ಇತಿ ಪ್ರೋಕ್ತಃ ಸರ್ವಾಹಂಕಾರ ಭಂಜಕಃ ।
ಮತ್ಸ್ಯಾದ್ಯಾಪಿ ವೈ ವಿಷ್ಣೋ ರವತಾರಾಶ್ಚ ಸರ್ವಶಃ ॥ ೨೪೧ ॥
ಜೀವಾಂತಃ ಸಂಸ್ಥಿತಾ ನಿತ್ಯಮುಪಾಸ್ಯಾಃ ಶಕ್ತಿಸಂಯುತಾಃ ।

ಅಂತರಾತ್ಮನಿಗೆ ಅಹಂಕಾರನೆಂದು ನಾಮ; ಆತನು ಸಕಲ ಅಹಂಕಾರವನ್ನು ನಾಶಮಾಡುವವನು; ವಿಷ್ಣುವಿನ ಮತ್ಸ್ಯ, ಕೂರ್ಮ, ವರಾಹ, ಮೊದಲಾದ ಅವತಾರಗಳು ಸಕಲವೂ ಜೀವರಲ್ಲಿ ಒಳಗೆ ಇರುತ್ತವೆ; ಶಕ್ತಿ ಸಮೇತವಾದ ಆ ರೂಪಗಳನ್ನೂ ಶಕ್ತಿಯನ್ನನುಸರಿಸಿ ನಿತ್ಯವೂ ಉಪಾಸನೆ ಮಾಡಬೇಕು.

ಏವಂ ವಿದ್ವಾನತೋ ಬಾಹ್ಯಹೃದಯಾಂಬುಜ
ಮಂದಿರೇ ॥ ೨೪೨ ॥

ನಾನಾರತ್ನೋಜ್ಜ್ವಲದ್ಧೇಮಮಂಟಪಂ ತದ್ರಮಾತ್ಮಕಮ್ ।
ಚಿಂತಯೇದ್ಮೌಕ್ತಿಕಾಭಾಸಂ ತಸ್ಮಿನ್ ತತ್ಕರ್ಣಿಕಾತಲೇ ॥ ೨೪೩ ॥

ದ್ವಿಷಟ್ಕೋಣಾದಿತ್ಯಬಿಂಬಂ
ತತ್ರವೃತ್ತೇಂದು ಮಂಡಲಮ್ ।
ತಸ್ಮಿನ್ ತ್ರಿಕೋಣಮಾಗ್ನೇಯೀ
ಮಂಡಲಂ ಸುವಿರಾಜಿತಮ್ ॥ ೨೪೪ ॥

ಹೀಗೆ ತಿಳಿದಿರುವ ಜ್ಞಾನಿಯು ನಂತರ ಹೊರಗಿನ ಸ್ಥೂಲ ದೇಹದ ಹೃದಯ ಕಮಲದ ಮನೆಯಲ್ಲಿ ನಾನಾಬಗೆಯ ರತ್ನಗಳಿಂದ ಪ್ರಕಾಶಿಸುವ ಭಂಗಾರದ ಮಂಟಪವನ್ನು ಚಿಂತಿಸುವುದು; ಇದು ಸಾಕ್ಷಾಲ್ಲಕ್ಷ್ಮ್ಯಾತ್ಮಕವಾದುದು; ಮುತ್ತಿನಂತೆ ಪ್ರಕಾಶಿಸುವುದು; ಅದರ ಕರ್ಣಿಕೆಯಲ್ಲಿ ಹನ್ನೆರಡು ಕೋಣಾತ್ಮಕವಾದ ಸೂರ್ಯಬಿಂಬವೂ ತನ್ಮಧ್ಯದಲ್ಲಿ ವರ್ತುಳಾಕಾರವಾದ ಚಂದ್ರಮಂಡಲವೂ ಅದರಲ್ಲಿ ತ್ರಿಕೋಣಾತ್ಮಕವಾದ ಅಗ್ನಿಮಂಡಲವೂ ಪ್ರಕಾಶಿಸುತ್ತಿರುವುದು.

ತಸ್ಮಿನ್ ಲಕ್ಷ್ಮ್ಯಾತ್ಮಕಂ ತಲ್ಪಂ
ಶೇಷಪರ್ಯಂಕಶೋಭಿತಮ್ ।
ಚಿತ್ರರತ್ನಾಸನಾಕೀರ್ಣಂ
ಚಿಂತಯೇತ್ಸೋಪಬರ್ಹಣಮ್ ॥ ೧೪೫ ॥

ಅಲ್ಲಿ ಶೇಷನೆಂಬ ಮಂಚವು, ಲಕ್ಷ್ಮ್ಯಾತ್ಮಕವಾದ ಹಾಸಿಗೆಯೂ, ವಿಚಿತ್ರ ರತ್ನಮಯವಾದ ಆಸನವು ಮತ್ತು ಅಲ್ಲಿ ಓರಗದಿಂಬು ಇರುವುದು.

ತತ್ರಸ್ಥೋ ಭಗವಾನ್ವಿಷ್ಣುಃ ಪರಮಾತ್ಮೇತ್ಯುದಾಹೃತಃ ।
ಸಾಕ್ಷಾನ್ನಾರಾಯಣಃ ಸರ್ವೈರುಪಾಸ್ಯೋ ಬಿಂಬನಾಮಕಃ॥ ೨೪೬ ॥

ಅಲ್ಲಿರುವ ಗುಣಪೂರ್ಣನಾದ ಶ್ರೀವಿಷ್ಣುವು ಪರಮಾತ್ಮನೆಂದು ಹೇಳಲ್ಪಡುವನು; ಆತನೇ ಸಾಕ್ಷಾನ್ನಾರಾಯಣನು, ಬಿಂಬನೆಂದು ಆತನು ಸಕಲರಿಂದಲೂ ಉಪಾಸಿಸಲ್ಪಡುವನು.

ಶ್ವೇತದ್ವೀಪಗತೋ ವಿಷ್ಣುಃ ಪರ್ಯಂಕಬ್ರಹ್ಮನಾಮಕಃ ।
ನಾರಾಯಣೋ ಹಿ ಭಗವಾನನಾದಿಸ್ಸೃತಿಸಂಸ್ಥಿತಾನ್ ॥ ೨೪೭ ॥

ಶ್ವೇತದ್ವೀಪದಲ್ಲಿರುವ ಶ್ರೀವಿಷ್ಣುವು ಬ್ರಹ್ಮನೆಂಬ ಮಂಚದಲ್ಲಿರುವನು; ಆತನೇ ನಾರಾಯಣನು; ಅನಾದಿಕಾಲದಿಂದ ಸಂಸೃತಿಯಲ್ಲಿರುವ (ಸಂಸಾರ - ಜನಿಸುವ ಮತ್ತು ಮೃತವಾಗುವ ದೇಹವನ್ನು ಹೊಂದುವ ಯೋಗ್ಯತೆ) ಜೀವರನ್ನು,

ಅವೇಕ್ಷ್ಯಲೋಕಾನ್ ಕೃಪಯಾ
ತಸ್ಮಾನ್ ಮೋಚಯಿತುಂ ಪ್ರಭುಃ ।
ತದ್ಯೋಗ್ಯಪದದಾನಾಯತೇಷಾ
ಮಾವಿಶ್ಯ ಹೃದ್ಗುಹಾಮ್ ॥ ೨೪೮ ॥

ದಯೆಯಿಂದ ಇವರನ್ನು ನೋಡಿ ಆ ಸಂಸಾರದ ದೆಸೆಯಿಂದ ಬಿಡುಗಡೆ ಮಾಡಲು ಮತ್ತು ಅವರವರ ಯೋಗ್ಯತೆಗೆ ತಕ್ಕ, ಇಂದ್ರ, ರುದ್ರ, ಬ್ರಹ್ಮ ಮೊದಲಾದ ಪದವಿಯನ್ನು ಕೊಡಲು ಸಮರ್ಥನಾದ ಶ್ರೀಹರಿಯು ಅವರ ಹೃದಯವೆಂಬ ಅಂತರ್ಗೃಹವನ್ನು ಹೊಕ್ಕು.

ತದ್ಯೋಗ್ಯತಾನುಸಾರೇಣ
ಸಾಧನೈಃ ಸಮುಪಾಸಿತಃ ।
ನಿರಸ್ಯ ಸ್ವಾಪರೋಕ್ಷ್ಯೇಣ ಕೃತಂ
ಕರ್ಮ ಶುಭಾಶುಭಮ್ ॥ ೨೪೯ ॥

ಅವರವರ ಯೋಗ್ಯತೆಯನ್ನನುಸರಿಸಿ ಸಾಧನಗಳಿಂದ ಚೆನ್ನಾಗಿ ಶ್ರವಣ, ಮನನ, ನಿಧಿಧ್ಯಾಸನರೂಪವಾದ ಉಪಾಸನೆಮಾಡಲ್ಪಡುವವನಾಗಿ ತನ್ನ ಅಪರೋಕ್ಷ ದರ್ಶನವಿತ್ತು ಅವರು ಮಾಡಿದ್ದ ಪುಣ್ಯ ಪಾಪಕರ್ಮಗಳನ್ನೆಲ್ಲಾ ಕಳೆದು,

ಮೋಚಯಿತ್ವಾ ಭೂತಬಂಧಾಜ್ಜೀವಸ್ವಾನಂದದಾಯಕಃ ।
ಶ್ವೇತದ್ವೀಪಗತೋ ಯಶ್ಚ ಬಾಹ್ಯಹೃತ್ಪದ್ಮಗಶ್ಚ ಯಃ ॥ ೨೫೦ ॥

ಸಂಸಾರ ಕಾರಣವಾದ ಭೂತಬಂಧನದ ದೆಸೆಯಿಂದ ಬಿಡಿಸಿ ಅವರವರ ಸ್ವರೂಪಾನಂದವನ್ನು ಕೊಡುವನು; ಶ್ವೇತದ್ವೀಪದಲ್ಲಿರುವ, ಶ್ರೀನಾರಾಯಣನು, ಜೀವರ, ಸ್ಥೂಲಶರೀರದ ಹೃದಯಕಮಲದಲ್ಲಿರುವನು.

ತಯೋರೈಕ್ಯಂ ವಿಜಾನೀಯಾ ಜ್ಜೀವ ಹೃತ್ಪದ್ಮಗಸ್ಯ ಚ ।
ಶರೀರಸರ್ವನಾಡೀಷು ನಿವಿಷ್ಟಾನಾಂ ಚೈವ ಹರೇಃ ॥ ೨೫೧ ॥

ಬ್ರಹ್ಮಾಂಡಾಂತರ್ಬಹಿಸ್ಥಾನಾಂ ರೂಪಾಣಾಮಪಿ ಸರ್ವಶಃ ।
ಆತ್ಮ ಹೃತ್ಪದ್ಮಗೇನೈಕ್ಯಂ ಚಿಂತನಂ ಪರಮಾರ್ಚನಮ್ ॥ ೨೫೨ ॥

ಹಿಂದಿನ ಶ್ಲೋಕದಲ್ಲಿ ಹೇಳಿದ ಎರಡು ರೂಪಗಳೂ ಒಂದೇ ಎಂದು ತಿಳಿಯುವುದು; ದೇಹದ ಸಕಲ ನಾಡಿಗಳಲ್ಲಿಯೂ ಸನ್ನಿಹಿತವಾದ ಭಗವದ್ರೂಪಗಳಿಗೂ, ಬ್ರಹ್ಮಾಂಡದ ಒಳಹೊರಗೆ ಇರುವ ಸಕಲ

ರೂಪಗಳಿಗೂ, ತನ್ನ ದೇಹದ ಹೃದಯಕಮಲದಲ್ಲಿರುವ ರೂಪಕ್ಕೂ ಏಕೀಭಾವವನ್ನು ತಿಳಿಯುವುದೇ ಪರಮಪುರುಷನ ಉತ್ತಮವಾದ ಆರಾಧನೆಯು.

ಹೃತ್ಪದ್ಮ ಕರ್ಣಿಕಾವಿಷ್ಟಂ ಬಿಂಬನಾಮಾನಮೀಶ್ವರಮ್ ।
ಉದ್ಯದಾದಿತ್ಯಸಂಕಾಶಂ ಸಚ್ಚಿದಾನಂದ ವಿಗ್ರಹಮ್ ॥ ೨೫೩ ॥

ಪೀತಾಂಬರಧರಂ ದೇವಂ
ಶಂಖಚಕ್ರಗದಾಧರಮ್ ।
ಹೇಮಹಂಸಕಮಂಜೀರ
ಕಿಂಕಿಣೀಕಾಂಘ್ರಿ ಪಂಕಜಮ್ ॥ ೨೫೪ ॥

ಸ್ವರ್ಣಾಂಬರಲಸತ್ಕಾಂಚೀ
ಭಾಸ್ವತ್ಕಟಿತಟೋದರಮ್ ।
ಹೆಮಕಂಕಣ ಕೇಯೂರ
ಮುದ್ರಿಕಾಬಾಹುಭೂಷಣಮ್ ॥ ೨೫೫ ॥

ಮುಕ್ತಾರತ್ನಪ್ರವಾಲಾಭಂ
ಸ್ವರ್ಣಗ್ರೈವೇಯವಕ್ಷಸಮ್ ।
ಶ್ರೀವತ್ಸಕೌಸ್ತುಭೋರಸ್ಕಂ
ನಾನಾ ಭೂಷಣ ಭೂಷಿತಮ್ ॥ ೨೫೬ ॥

ಮಂದಸ್ಮಿತ ಮುಖಾಂಭೋಜ
ಮರವಿಂದಾಯತೇಕ್ಷಣಮ್ ।
ನೀಲಾಲಕಲಸತ್ಸ್ವರ್ಣ
ಮುಕುಟಶ್ರುತಿಭೂಷಣಮ್ ॥ ೨೫೭ ॥

ಬ್ರಹ್ಮೇಶಾನಾದಿಭಿಃ ಸೇವ್ಯಂ
ಸ್ವರೂಪಗಣಮಧ್ಯಗಮ್ ।
ಆಪಾದಮೌಳಿಪರ್ಯಂತಂ
ಧ್ಯಾಯೇನ್ನಾರಾಯಣಂ ಪರಮ್ ॥ ೨೫೮ ॥

ಉದಯಿಸುತ್ತಲಿರುವ ಸೂರ್ಯನಂತೆ ಪ್ರಕಾಶಮಾನನಾದ ನಿರ್ದುಷ್ಟವಾದ ಜ್ಞಾನಾನಂದಾತ್ಮನಾದ, ಪೀತಾಂಬರವನ್ನು ಉಟ್ಟಿರುವ, ಕ್ರೀಡಾದಿ ಗುಣವಿಶಿಷ್ಟನಾದ, ಶಂಖಚಕ್ರ ಗದಾಪದ್ಮಧಾರಿಯಾದ, ಹಂಸಪಕ್ಷಿಯ

ಧ್ವನಿಯಂತೆ ಮಂಜುಳನಾದಮಾಡುವ ಗೆಜ್ಜೆಗಳಿಂದ ಸಹಿತವಾದ ಪಾದಕಮಲದ್ವಯಗಳುಳ್ಳ, ಪೀತಾಂಬರದಮೇಲೆ ಟೊಂಕದಲ್ಲಿ ಪ್ರಕಾಶಿಸುವ ರತ್ನಖಚಿತವಾದ ಒಡ್ಯಾಣದಿಂದ ಬೆಳಗುವ ಕಟಿಭಾಗಗಳುಳ್ಳ ಮುತ್ತು, ರತ್ನ, ಹವಳದಂತೆ ಹೊಳೆಯುವ ಭಂಗಾರದ ಕಂಠಹಾರದಿಂದ ಅಲಂಕೃತವಾದ ವಕ್ಷಸ್ಥಳವುಳ್ಳ - ಭಂಗಾರದ ಬಾಹುಪುರಿ, ಕಡಗ, ಉಂಗುರಗಳಿಂದ ಅಲಂಕೃತವಾದ ಬೆರಳುಗಳು, ಬಾಹುಗಳು ಉಳ್ಳ, ಶ್ರೀವತ್ಸ ಮತ್ತು ಕೌಸ್ತುಭರತ್ನಗಳೆರಡರಿಂದ ಅಲಂಕೃತವಾದ ಉರಸ್ಸುಳ್ಳ, ಇತರ ಅನೇಕ ಆಭರಣಗಳಿಂದ ಅಲಂಕೃತನಾದ, ಮಂದಹಾಸದಿಂದ ಕೂಡಿದ, ಅರಳಿದ ಕಮಲದಂತಿರುವ ಕಣ್ಣುಗಳ ದೃಷ್ಟಿಯುಳ್ಳ ಮುಖಕಮಲವುಳ್ಳ, ಪ್ರಕಾಶಿಸುವ ರತ್ನಖಚಿತವಾದ ಭಂಗಾರದ ಕಿರೀಟದಿಂದ ಅಲಂಕೃತವಾದ ನೀಲವರ್ಣದ ಉಂಗುರುಂಗರದಂತಿರುವ ಕೂದಲುಗಳಿಂದ ತುಂಬಿರುವ ಶಿರಸ್ಸುಳ್ಳ, ಮಕರಾಕಾರವಾದ ರತ್ನದ ಕುಂಡಲಗಳಿಂದ ಕೂಡಿದ ಕಿವಿಗಳುಳ್ಳ, ಬ್ರಹ್ಮರುದ್ರಾದಿ ದೇವತೆಗಳಿಂದ ಸೇವಿಸಲ್ಪಡುತ್ತಿರುವ, ತನ್ನ ಅನಂತಸ್ವರೂಪಗಳ ಸಮೂಹಮಧ್ಯದಲ್ಲಿರುವ, ಬಿಂಬನೆಂಬ ಶ್ರೀಹರಿಯನ್ನು ಪಾದದಿಂದ ಶಿರಸ್ಸಿನವರಿಗೂ ಧ್ಯಾನಮಾಡುವುದು.

ಧ್ಯಾನಂ ಚ ದ್ವಿವಿಧಂ ಪ್ರೋಕ್ತಂ ಖಂಡಾಖಂಡವಿಭೇದತಃ ।
ಏಕೈಕಶೋಂಗಾನಿ ಧಿಯಾ ಧಾರಣಂ ಖಂಡಮುಚ್ಯತೇ ॥ ೨೫೯ ॥

ಖಂಡ ಮತ್ತು ಅಖಂಡವೆಂಬ ಭೇದದಿಂದ ಧ್ಯಾನವು ಎರಡು ವಿಧವಾದುದು; ಬುದ್ಧಿಯಿಂದ ಒಂದೊಂದೇ ಅಂಗವನ್ನು ಧ್ಯಾನಿಸುವುದು ಖಂಡವೆಂದು ಹೇಳಲ್ಪಡುವುದು.

ಸರ್ವಾಂಗ ಸಂಸ್ಮೃತಿರ್ವಿಷ್ಣೋರ-
ಖಂಡಧ್ಯಾನಮೀರಿತಮ್ ।
ಸಂತತಂ ಧ್ಯಾನಯೋಗೇನ
ನಿಷ್ಪ್ರಯತ್ನಸಮಾಧಿಮಾನ್ ॥ ೨೬೦ ॥

ಶ್ರೀ ವಿಷ್ಣುವಿನ ಸಕಲ ಅವಯವಗಳನ್ನೂ ಒಂದೇ ಕಾಲದಲ್ಲಿ ಚೆನ್ನಾಗಿ ಸ್ಮರಿಸಿಕೊಳ್ಳುವುದು ಅಖಂಡ ಧ್ಯಾನವು; ನಿರಂತರ ಧ್ಯಾನವೆಂಬ ಉಪಾಯದಿಂದ ಪ್ರಯತ್ನವಿಲ್ಲದೆ ಸಮಾಧಿಯುಳ್ಳವನಾಗುವನು.

ಅಸಮಾಧಿರಪಿಜ್ಞಾನೀ ತದ್ಗತ್ಯೈಕಾಗ್ರಮಾನಸಃ ।
ಉಪಚಾರೈಃ ಷೋಡಶಭಿಸ್ತ್ವಾವಾಹನ ಮುಖೈರಪಿ ॥ ೨೬೧ ॥

ಪ್ರಾಕೃತಾ ಪ್ರಾಕೃತೈರ್ವಾಪಿ ವಿಷ್ಣುರೂಪಾತ್ಮಕೈರಪಿ ।
ಮಾನಸೈ ರಮಲೈರ್ದಿವ್ಯೈರ್ಮಹಾರಾಜೋಪಚಾರಕೈ ॥ ೧೬೨ ॥

ಹೃತ್ಪದ್ಮಕರ್ಣಿಕಾವಿಷ್ಟಂ
ಯೋಗಿಧ್ಯೇಯಾಂಘ್ರಿ ಪಂಕಜಮ್ ।
ಭಕ್ತ್ಯೈವಾನನ್ಯಮನಸಾ
ಬಾಹ್ಯಾರ್ಚನಮಿವಾರ್ಚಯೇತ್ ॥ ೧೬೩ ॥

ಸಮಾಧಿಯಿಲ್ಲದಿದ್ದರೂ ಜ್ಞಾನಿಯಾದವನು, ಆ ನಾರಾಯಣನಲ್ಲಿಯೇ ಏಕಾಗ್ರಮನಸ್ಸುಳ್ಳವನಾಗಿ, ಆವಾಹನವೇ ಮೊದಲಾದ ಹದಿನಾರು ಬಗೆಯಾದ ಉಪಚಾರ ಪೂಜೆಗಳಿಂದ, ಪ್ರಾಕೃತ ಮತ್ತು ಅಪ್ರಾಕೃತವಾದ ಅಥವಾ ಶ್ರೀವಿಷ್ಣುರೂಪಗಳೇ ಆದ, ಮಾನಸಿಕವಾದ, ನಿರ್ಮಲವಾದ, ಮನೋಹರವಾದ, ಮಹಾರಾಜನಿಂದ ಪೂಜಿಸಲ್ಪಡಲು ಯೋಗ್ಯವಾದ ಉತ್ತಮ ಸಾಮಗ್ರಿಗಳಿಗೆ ಸದೃಶವಾದ ಪದಾರ್ಥಗಳಿಂದ ಅಥವಾ ಮಹಾರಾಜನನ್ನು ಪೂಜಿಸುವಂತೆ, ಹೃದಯಕಮಲದ ಮಧ್ಯದಲ್ಲಿರುವ ಯೋಗಿಗಳಿಂದ ಧ್ಯಾನಿಸಲ್ಪಡುವ ಪಾದಕಮಲಗಳುಳ್ಳ ಶ್ರೀನಾರಾಯಣನನ್ನು ಹೊರಗೆ ಪ್ರತಿಮಾದಿಗಳನ್ನು ಪೂಜಿಸುವಂತೆ, ಅನನ್ಯಮನಸ್ಸಿನಿಂದ ಮತ್ತು ಭಕ್ತಿಯಿಂದ ಪೂಜಿಸುವುದು.

ಮನಃ ಪೂಜಾವಸಾನೇತು ಕಾಯಕೈರ್ವಾಚಕೈರಪಿ ।
ಪ್ರಣಮೇತ್ಪುಂಡರೀಕಾಕ್ಷಂ ಯಥಾಶಕ್ತಿ ಯಥಾಮತಿ ॥ ೧೬೪ ॥

ಹೀಗೆ ಮಾನಸಿಕಪೂಜೆಯನ್ನು ಮಾಡಿದಮೇಲೆ, ದೇಹದಿಂದ ವಾಕ್ಯಗಳಿಂದ, ತನ್ನ ಶಕ್ತಿಯನ್ನು ಮತ್ತು ಬುದ್ಧಿಯನ್ನು ಅತಿಕ್ರಮಿಸದಂತೆ ಪುಂಡರೀಕಾಕ್ಷನನ್ನು ನಮಸ್ಕರಿಸಬೇಕು.

ಯಾತ್ರಾ ಪ್ರದಕ್ಷಿಣಂ ವಿಷ್ಣೋಃ ಪ್ರಣಾಮಂ ಶಯನಂ ಹರೇಃ ।
ವಾಕ್ಯವೃತ್ತಿ ಸ್ತುತಿರ್ಭೂಯಾನ್ಮನೋವೃತ್ತಿರನುಸ್ಮೃತಿಃ ॥ ೧೬೫ ॥

ನಡೆಯುವದೇ ಶ್ರೀಹರಿಯ ಪ್ರದಕ್ಷಿಣೆಯು; ಮಲಗುವುದೇ ಶ್ರೀಹರಿಗೆ ನಮಸ್ಕಾರವು; ಮಾತನಾಡುವುದೇ ಸ್ತುತಿಯು; ಮನಸ್ಸಿನಲ್ಲಿ ಪ್ರತಿಕ್ಷಣದಲ್ಲಿಯೂ ಉಂಟಾಗುವ ತರಂಗತರಂಗವಾದ ವಿಷಯಚಿಂತನೆಗಳೇ ಆತನ ಅನುಸರಿಸಿದ ಸ್ಮೃತಿಯು ಆಗುವುದು.

ಸಮರ್ಪಯಿತ್ವಾ ಬಿಂಬೇಸ್ಮಿನ್
ಮಾನಸೇಪೂಜನಂ ಪುನಃ ।
ತತ್ತತ್ಸ್ಥಾನೇಷು ನಾಡೀಷು
ತತ್ತದ್ರೂಪಾಣಿ ಭಾವಯೇತ್ ॥ ೧೬೬ ॥

ಮನಸ್ಸಿನಲ್ಲಿರುವ ಈ ಬಿಂಬರೂಪೀ ಹರಿಯಲ್ಲಿ, ಈ ಪೂಜಾದಿಗಳನ್ನು ಸಮರ್ಪಿಸಿ ಮತ್ತು ಆಯಾಯ ಶ್ರೀಹರಿಯ ರೂಪಗಳನ್ನು ನಾಡಿಗಳೇ ಮೊದಲಾದ ಸ್ಥಳಗಳಲ್ಲಿ ಮೊದಲಿದ್ದಂತೆಯೇ ಭಾವಿಸುವುದು.

ಏವಂ ಯಃ ಕುರುತೇ
ನಿತ್ಯಮಪ್ರಮತ್ತಶ್ರಿಯಃಪತೇಃ ।
ಭಕ್ತ್ಯಾತು ಮಾನಸೀಮರ್ಚಾಂ
ಜೀವನ್ಮುಕ್ತೋ ನ ಸಂಶಯಃ ॥ ೧೬೭ ॥

ಅಪ್ರಮತ್ತನಾಗಿ ಯಾರು ಹೀಗೆ ತಿಳಿದು ಯಾವಾಗಲೂ ಲಕ್ಷ್ಮೀ ಪತಿಯ ಮಾನಸಪೂಜೆಯನ್ನು ಭಕ್ತಿಯಿಂದ ಮಾಡುವರೋ ಅವರು ನಿಸ್ಸಂಶಯವಾಗಿ ಜೀವನ್ಮುಕ್ತರೇ.

ಗ್ರಂಥೋಯಂ ಪಾಠಮಾತ್ರೇಣ ಭಕ್ತಿಜ್ಞಾನಾದಿಸಿದ್ಧಿದಃ ।
ಜ್ಞಾನೇನ ತದನುಷ್ಠಾನಾದ್ವಿಮುಕ್ತಿಃ ಶಾಶ್ವತೀಭವೇತ್ ॥ ೧೬೮ ॥

ಈ ಗ್ರಂಥವನ್ನು ಪಾರಾಯಣಮಾಡುವ ಮಾತ್ರದಿಂದಲೇ ಭಕ್ತಿ, ಜ್ಞಾನ, ವಿರಕ್ತಿಗಳು ಉಂಟಾಗುವುವು; ಜ್ಞಾನದಿಂದ ಇದರಂತೆ ಅನುಷ್ಠಾನ ಮಾಡುವದ ದೆಸೆಯಿಂದ ಶಾಶ್ವತವಾದ ಮುಕ್ತಿಸುಖವೇ ಆಗುವುದು.

ಅನಂತೋಪಿ ಪ್ರಮೇಯಾನಾಂ ಗ್ರಂಥಗೌರವ ಭೀತಿತಃ ।
ಸಂತತಧ್ಯಾನಸಿಧ್ಯರ್ಥಂ ಸಮಾಸಾತ್ಸಂಗ್ರಹಃ ಕೃತಃ ॥ ೧೬೯ ॥

ಪ್ರಮೇಯಗಳು ಅಸಂಖ್ಯಾಕವು; ಗ್ರಂಥವು ದೊಡ್ಡದಾಗುವುದೆಂಬ ಭೀತಿಯಿಂದಲೂ, ನಿರಂತರ ಧ್ಯಾನಮಾಡಲು ಅನುಕೂಲವಾಗಬೇಕೆಂಬ ಉದ್ದೇಶದಿಂದಲೂ ಸಂಕೋಚವಾಗಿ ಸಂಗ್ರಹಿಸಲ್ಪಟ್ಟಿರುವುದು.

ಅಜ್ಞಾನಾದ್ ಜ್ಞಾನತೋವಾಪಿ
ವದನ್ ಕಿಮಪಿ ಭಾಷಿತಮ್ ।
ಯುಕ್ತಾ ಯುಕ್ತ ವಿಚಾರಜ್ಞೈ
ಸದ್ಭಿಃ ಸಂಗೃಹ್ಯತಾಮಿದಮ್ ॥ ೧೭೦॥

ಅಜ್ಞಾನದ ದೆಸೆಯಿಂದಲೋ, ಜ್ಞಾನದ ದೆಸೆಯಿಂದಲೋ ಹೇಳುವಾಗ ಏನೋ ಹೇಳಲ್ಪಟ್ಟಿರುವುದು; ಯುಕ್ತಾ ಯುಕ್ತ ವಿಚಾರಮಾಡುವ ಜ್ಞಾನಿಗಳಾದ ಸತ್ಪುರುಷರಿಂದ ಇದು ಸಂಗ್ರಹಿಸಲ್ಪಡಲಿ.

ಶ್ರೀವ್ಯಾಸತತ್ವಜ್ಞ ತೀರ್ಥಾಖ್ಯಂ ಗುರುಂ ಯತಿವರಂ ಧೃಢಮ್ ।
ನೃಸಿಂಹಭಜಕಂ ನಿತ್ಯಂ ಭಜಮ್ಯಾನಂದದಾಯಕಮ್ ।

ಶ್ರೀರಾಘವೇಂದ್ರಾರ್ಯ ಶಿಷ್ಯೇಣ ಶೇಷಗಿರ್ಯಾಭಿದಾಯುಜಾ ।
ಕೃತಾಮಾನಸ ಸ್ಮೃತೇ ರ್ವ್ಯಾಖ್ಯಾ ಪ್ರೀತ್ಯೈಮಾಧವ ಮದ್ವಯೋಃ ।

ಹೀಗೆ ಶ್ರೀ ಐಜೀ ವೆಂಕಟರಾಮಾರ್ಯ (ವ್ಯಾಸತತ್ವಜ್ಞ) ವಿರಚಿತ ಕರ್ಣಾಟಕಾರ್ಥ ಸಮೇತವಾದ ಮಾನಸ ಸ್ಮೃತಿಯು ಮುಗಿದುದು.

ಶ್ರೀ ಭಾರತಿರಮಣ ಮುಖ್ಯ ಪ್ರಾಣಾಂತರ್ಗತ ಶ್ರೀಗೋಪಾಲ
ಕೃಷ್ಣಾರ್ಪಣಮಸ್ತು.

★ ★ ★

ಗಾಯತ್ರೀ

ಓಮ್
ಭೂರ್ಭುವಃಸ್ವಃ
ತತ್ಸವಿತುರ್ವರೇಣ್ಯಮ್
ಭರ್ಗೋ ದೇವಸ್ಯ ಧೀಮಹಿ
ಧಿಯೋ ಯೋ ನಃ ಪ್ರಚೋದಯಾತ್ ॥

ಋುಗ್ಭಾಷ್ಯ :

ಓಮಶೇಷ ಗುಣಾಧಾರ ಇತಿ ನಾರಾಯಣೋಽಪ್ಯಸೌ ।
ಪೂರ್ಣೋ ಭೂತಿವರೋಽನಂತಸುಖೋ
ಯದ್ವಾ ವ್ಯಾಹೃತೀರಿತಃ ।
ಗುಣೈಸ್ತತಃ ಪ್ರಸವಿತಾ ವರಣೀಯೋ ಗುಣೋನ್ನತೇಃ ।
ಭಾರತಿಜ್ಞಾನರೂಪತ್ವಾದ್ ಭರ್ಗೋ ಧ್ಯೇಯೋಽಖಿಲೈರ್ಜನೈಃ ।
ಪ್ರೇರಕೋಽಶೇಷಬುದ್ಧೀನಾಂ ಸ ಗಾಯತ್ರ್ಯರ್ಥ ಈರಿತಃ ॥

ಅನಂತಸದ್ಗುಣಗಳಿಗೆ ಆಶ್ರಯನು, ಗುಣಪರಿಪೂರ್ಣನು, ನಿರಧಿಕ ಐಶ್ವರ್ಯವಂತನು, ತನ್ನ ಸ್ವರೂಪಭೂತವಾದ ಅನಂತಸುಖವುಳ್ಳವನು, ಸದ್ಗುಣಗಳಿಂದ ವ್ಯಾಪ್ತನು, ಜಗತ್ಸೃಷ್ಟಿಕರ್ತನು, ಗುಣಪೂರ್ಣನಾದ್ದರಿಂದ ಸರ್ವರಿಂದಲೂ ಭಜನೀಯನು (ಭಜಿಸಲು ಯೋಗ್ಯನು), ದೀಪ್ತನು (ಅನಂತ ಪ್ರಕಾಶಮಾನನು), ಮಹಾ ಆನಂದಿಯು, ಪೂರ್ಣಜ್ಞಾನರೂಪನು, ಸರ್ವರಿಗೂ ಧ್ಯಾನಕ್ಕೆ ವಿಷಯನು, ಸರ್ವರ ಬುದ್ಧಿಗಳಿಗೆಲ್ಲಾ ಪ್ರೇರಕನು, ಗಾಯತ್ರೀ ಮಂತ್ರದಿಂದ ಪರಮಮುಖ್ಯ ಪ್ರತಿಪಾದ್ಯನಾದ ಶ್ರೀಮನ್ನಾರಾಯಣನನ್ನು ಧ್ಯಾನಿಸುತ್ತೇವೆ.

ಗಾಯತ್ರೀಸಾರಸಂಗ್ರಹ

ಪ್ರಣಮ್ಯ ಜಗತಾಮೀಶಂ ಶ್ರೀನಿವಾಸಂ ಸದಾಶ್ರಯಮ್ ।
ಗಾಯತ್ರೀಪ್ರತಿಪಾದ್ಯಾರ್ಥಸಾರಂ ಕಿಂಚಿದುದೀರಯೇ ॥ ೧ ॥

ಸಮಸ್ತ ಜಗತ್ತಿಗೆ ಸ್ವಾಮಿಯಾದ, ಸಕಲ ಸಜ್ಜನರಿಗೆ ಆಶ್ರಯನಾದ, ಗಾಯತ್ರೀ ಮಹಾಮಂತ್ರದಿಂದ ಪರಮಮುಖ್ಯ ಪ್ರತಿಪಾದ್ಯನಾದ ಭಗವಂತನನ್ನು ನಮಸ್ಕರಿಸುತ್ತಾ, ಗಾಯತ್ರಿಯಿಂದ ಪ್ರತಿಪಾದಿತವಾದ ಅರ್ಥದ ಸಾರವನ್ನು ನಮಗೆ ತಿಳಿದಷ್ಟು ಕಿಂಚಿತ್ ವ್ಯಾಖ್ಯಾನ ಮಾಡುತ್ತೇವೆ.

ಗಾಯತ್ರೀ ಛಂದಸಾಮಾದಿಃ
ಜನಿತ್ರೀ ಸರ್ವಸಂಪದಾಮ್ ।
ದಾತ್ರೀ ಸರ್ವಾಂಹಸಾಂ ಹಂತ್ರೀ
ಗಾಯತ್ರೀ ಜಪತಾಂ ಸತಾಮ್ ॥ ೨ ॥

ಸಕಲ ಛಂದಸ್ಸುಗಳಿಗೆ ಮೊದಲನೆಯದು, ಸಕಲ ಪಾಪಗಳ ಹಾರಕ, ಸರ್ವ ಸಂಪತ್ಕಾರಕ ಹಾಗೂ ಸಕಲ ಸಜ್ಜನರುಗಳಿಂದ ಜಪಕ್ಕೆ ಯೋಗ್ಯವಾದ ಈ ಗಾಯತ್ರಿಯು ಮಾತೃಸ್ಥಾನದಲ್ಲಿರುವುದು.

ಗಾಯತ್ರೀ ಚೈವ ಸಾವಿತ್ರೀ ತ್ರಿರೂಪೈವಂ ಸರಸ್ವತೀ ।
ಕಾಲತ್ರಯೇಽಪ್ಯುಪಾಸ್ಯಾ ಸಾ ಸಂಧ್ಯೇತ್ಯಪರನಾಮಿಕಾ ॥ ೩ ॥

ಉಪಾಸನೆಗೆ ಯೋಗ್ಯವಾದ ಈ ಮಂತ್ರವು ಕಾಲತ್ರಯದಲ್ಲಿ ಪ್ರತ್ಯೇಕವಾದ ನಾಮಗಳಿಂದ ಪ್ರತಿಪಾದಿತವಾಗಿದೆ.

ಪ್ರಾತಃ ಸಂಧ್ಯಾವಂದನೆಗೆ - ಗಾಯತ್ರೀ

ಮಾಧ್ಯಾಹ್ನಿಕ ಸಂಧ್ಯಾವಂದನೆಗೆ - ಸಾವಿತ್ರೀ

ಸಾಯಂ ಸಂಧ್ಯಾವಂದನೆಗೆ - ಸರಸ್ವತೀ

ಹೀಗೆ ನಾಮತ್ರಯದಿಂದ ಪ್ರಸಿದ್ಧವಾಗಿದ್ದು, 'ಸಂಧ್ಯಾ' ಎಂಬುದಾಗಿ ಮತ್ತೊಂದು ಹೆಸರಿನಿಂದ ಪ್ರಸಿದ್ಧವಾಗಿದೆ.

ಗಾಯತ್ರ್ಯುಷ್ಣಿಗನುಷ್ಟುಪ್ ಚ ಬೃಹತೀ ಪಂಕ್ತಿತ್ರಿಷ್ಟುಭೌ ।
ಜಗತೀ ಚಾತಿಜಗತೀ ಶಕ್ವರೀ ತ್ವತಿಶಕ್ವರೀ ॥ ೪ ॥

ಅಷ್ಟ್ಯತ್ಯಷ್ಟಿ ಧೃತಿಶ್ಚಾತಿಧೃತಿಶ್ಚೈವ ಕೃತಿಸ್ತಥಾ ।
ಪ್ರಕೃತಿಶ್ಚಾಕೃತಿಶ್ಚೈವ ವಿಕೃತಿಃ ಸಂಕೃತಿಸ್ತಥಾ ॥ ೫ ॥

ಅತಿಪೂರ್ವಕೃತಿಶ್ಚಾಪಿ
ಹ್ಯುತ್ಕೃತೀತ್ಯಾದಿಕಾನಿ ಚ ।
ಏತೇಷಾಂ ಛಂದಸಾಂ ವರ್ಣ
ಸಂಖ್ಯಾ ಲಕ್ಷಣ ಸಂಸ್ಮೃತಮ್ ॥ ೬ ॥

ಈ ಪ್ರಕಾರ ಛಂದಸ್ಸಿನಲ್ಲಿ ಅನೇಕ ವಿಧಗಳು :

ಗಾಯತ್ರೀ, ಉಷ್ಣಿಕ್, ಅನುಷ್ಟುಪ್, ಬೃಹತೀ, ಪಂಕ್ತಿ, ತ್ರಿಷ್ಟುಪ್, ಜಗತೀ, ಅತಿಜಗತೀ, ಶಕ್ವರೀ, ಅತಿಶಕ್ವರೀ, ಅಷ್ಟೀ, ಅತ್ಯಷ್ಟೀ, ಧೃತಿ, ಅತಿಧೃತಿ, ಕೃತಿ, ಪ್ರಕೃತಿ, ಆಕೃತಿ, ವಿಕೃತಿ, ಸಂಕೃತಿ, ಅತಿಪೂರ್ವಕೃತಿ, ಉತ್ಕೃತಿ.

ವರ್ಣಗಳನ್ನು ಎಣಿಸುವ ಮೂಲಕ ಈ ಛಂದಸ್ಸುಗಳನ್ನು ತಿಳಿಯಬೇಕೆಂಬುದು ಇಲ್ಲಿ ಹೇಳಲ್ಪಟ್ಟಿದೆ.

ಚತುರ್ವಿಂಶತ್ಯಕ್ಷರೇತಿ ಗಾಯತ್ರೀ ಸಮುದೀರಿತಾ ।
ತದೂರ್ಧ್ವಮುಷ್ಣಿಗಾದೀನಿ ಚತುರ್ವರ್ಣೋತ್ತರಾಣಿ ಚ ॥ ೭ ॥

ಇಪ್ಪತ್ತನಾಲ್ಕು (೨೪) ಅಕ್ಷರವುಳ್ಳದ್ದು ಗಾಯತ್ರೀ ಛಂದಸ್ಸು ಹಾಗೂ ಇದರ ಮುಂದಿನ ಛಂದಸ್ಸುಗಳಿಗೆಲ್ಲಾ ನಾಲ್ಕು ಅಕ್ಷರಗಳನ್ನು ಹೆಚ್ಚಾಗಿ ಸೇರಿಸಿ ಆ ಆ ಛಂದಸ್ಸಿನ ಹೆಸರುಗಳನ್ನು ತಿಳಿಯಬೇಕು.

ಪೂರ್ವಸ್ಮಾದುತ್ತರಾಧಿಕ್ಯಂ ಚತುರ್ವರ್ಣೈರ್ಯಥಾಕ್ರಮಮ್ ।
ಸರ್ವೇಷಾಂ ಛಂದಸಾಮೇವ ಲಕ್ಷಣಂ ಪರಿಕೀರ್ತಿತಮ್ ॥ ೮ ॥

ಮೊದಲು ಹೇಳಿರುವ ಛಂದಸ್ಸಿಗೆ ಯಥಾಕ್ರಮವಾಗಿ ನಾಲ್ಕು ವರ್ಣಗಳನ್ನು ಸೇರಿಸಿ, ಮುಂದಿನ ಛಂದಸ್ಸಿನ ಹೆಸರನ್ನು ತಿಳಿಯಬೇಕು. ಹೀಗೆ ಎಲ್ಲಾ ಮುಂದಿನ ಛಂದಸ್ಸುಗಳನ್ನು ಹೀಗೆಯೇ ನಾಲ್ಕು ನಾಲ್ಕು ವರ್ಣಗಳನ್ನು ಹೆಚ್ಚಾಗಿ ಸೇರಿಸಿ ತಿಳಿಯುವುದಾಗಿ ಹೇಳಲ್ಪಟ್ಟಿದೆ.

ಏತೇಷಾಂ ಛಂದಸಾಮೇವ ಪಾದಪಾದಾರ್ಧಭೇದತಃ ।
ಮಂತ್ರೇಷ್ವಷ್ಟಷಡಾರ್ಣೇಷ್ವಪಿ ಛಂದಸ್ತದೀರಿತಮ್ ॥ ೯ ॥

ಈ ಹಿಂದೆ ಹೇಳಿದ ಛಂದಸ್ಸುಗಳು, ಪಾದ, ಅರ್ಧಪಾದಗಳೆಂಬ ಭೇದದಿಂದ, ಮಂತ್ರಗಳಲ್ಲಿರುವ ಆರು ವರ್ಣಗಳು (೬) ಹಾಗು ಎಂಟು (೮) ವರ್ಣಗಳಿಂದಲೂ ಛಂದಸ್ಸುಗಳು ಹೇಳಲ್ಪಟ್ಟಿವೆ.

ಗಾಯತ್ರೀ ಕೇವಲಾ ಬ್ರಾಹ್ಮೀ
ದೈವೀ ಗಾಯತ್ರಿಕಾ ಸ್ಮೃತಾ ।
ಬ್ರಹ್ಮರ್ಷಿಕಾ ಚ ವಿಜ್ಞೇಯಾ
ಯಾ ಚ ವ್ಯಾಹೃತಿ ಸಂಯುತಾ ॥ ೧೦ ॥

ವಿಶ್ವಾಮಿತ್ರರ್ಷಿಕಾ ಪ್ರೋಕ್ತಾ
ಗಾಯತ್ರೀ ಛಂದಸಾಽನ್ವಿತಾ ।
ನಾರಾಯಣೋಽರ್ಕಮಧ್ಯಸ್ಥೋ
ದೇವತೋದಿತನಾಮಕಃ ॥ ೧೧ ॥

ವ್ಯಾಹೃತಿಯನ್ನು ಬಿಟ್ಟು ಹೇಳುವ ಕೇವಲ ಗಾಯತ್ರೀ ಮಂತ್ರಕ್ಕೆ ಬ್ರಹ್ಮಗಾಯತ್ರೀ ಎನ್ನುವರು. ಇದಕ್ಕೆ ಬ್ರಹ್ಮದೇವರು ಋಷಿಗಳು.

ಬ್ರಹ್ಮಗಾಯತ್ರೀ :- ಓಂ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್ ಹಾಗು ವ್ಯಾಹೃತಿಸಹಿತವಾಗಿ ಹೇಳುವ ಮಂತ್ರಕ್ಕೆ ವಿಶ್ವಾಮಿತ್ರ ಗಾಯತ್ರೀ ಎನ್ನುವರು. ಇದಕ್ಕೆ ವಿಶ್ವಾಮಿತ್ರರು ಋಷಿಗಳು. ವಿಶ್ವಾಮಿತ್ರ ಗಾಯತ್ರೀ:- ಓಂ ಭೂರ್ಭುವಃಸ್ವಃ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್ ಹಾಗೂ ಸೂರ್ಯಮಂಡಲ ಮಧ್ಯವರ್ತಿಯಾಗಿ (ಸೂರ್ಯಾಂತರ್ಯಾಮಿ) ಶ್ರೀಮನ್ನಾರಾಯಣನು 'ಉದಿತ' ನಾಮಕನಾಗಿ ನಿಯಾಮಕನಾಗಿರುವನು.

ಗಾಯತ್ರೀ ತ್ರಿಪದಾ ಜ್ಞೇಯಾ ಪ್ರಣವೇನ ಚತುಷ್ಪದಾ ।
ಪದಚ್ಛೇದೇ ದಶಪದಾ ಷಟ್ಕುಕ್ಷಿಶ್ಚತುರರ್ಣಕೈಃ ॥ ೧೨ ॥

ಗಾಯತ್ರೀ ಮಹಾಮಂತ್ರಕ್ಕೆ ಮೂರು ಪಾದಗಳು (ಒಂದೊಂದು ಪಾದಕ್ಕೂ ಎಂಟು ವರ್ಣಗಳು).

೧. ತತ್ಸವಿತುರ್ವರೇಣ್ಯಂ (ವರೇಣಿಯಂ)

೨. ಭರ್ಗೋದೇವಸ್ಯ ಧೀಮಹಿ

೩. ಧಿಯೋ ಯೋನಃ ಪ್ರಚೋದಯಾತ್

ಹಾಗೂ ಪ್ರಣವ (ಓಂಕಾರ) ಸೇರಿ ನಾಲ್ಕು ಪಾದಗಳು. ಓಂಕಾರದಲ್ಲಿ ಎಂಟು ವರ್ಣಗಳು ಇರುತ್ತವೆ. (ಅಕಾರ, ಉಕಾರ, ಮಕಾರ, ನಾದ, ಬಿಂದು, ಘೋಷ, ಶಾಂತಾ ಮತ್ತು ಅತಿಶಾಂತಾ)

ಗಾಯತ್ರೀ ಮೂರು ಪಾದಗಳು - 8 X 3 = 24

ಓಂಕಾರದಲ್ಲಿ ಎಂಟು ವರ್ಣಗಳು - = 08

= 32 ವರ್ಣಗಳು

ಈ ಕ್ರಮದಲ್ಲಿ ಗಾಯತ್ರೀ ಮಂತ್ರವು ನಾಲ್ಕು ಪಾದವುಳ್ಳದ್ದಾಗಿದೆ. ಹಾಗೂ ಗಾಯತ್ರೀ ಮಂತ್ರವನ್ನು ಪದಚ್ಛೇದ ಮಾಡಿದರೆ ದಶಪದ ಗಾಯತ್ರೀ ಆಗುವುದು.

ಆದ್ಯೋಂಕಾರಸ್ತಥೈವಾಪೌ ಜ್ಯೋತೀರಸ ಇತಿ ದ್ವಯಮ್ ।
ವ್ಯಾಹೃತಿತ್ರಯಮಿತ್ಯೇತದ್ಗಾಯತ್ರೀ ಶೀರ್ಷಪಂಚಕಮ್ ॥ ೧೩ ॥

ಆದಿಯಲ್ಲಿ ಓಂಕಾರವು ಹಾಗು ಆಪಃ, ಜ್ಯೋತಿ ರಸಗಳು, ಹಾಗೂ ವ್ಯಾಹೃತೀತ್ರಯಗಳು, ಭೂಃ, ಭುವಃ, ಸ್ವಃ ಇವುಗಳನ್ನು ಗಾಯತ್ರಿಯ ಪಂಚಶೀರ್ಷಕೆಗಳು ಎನ್ನುವರು.

ಓಂ, ಆಪಃ = ೨

ಜ್ಯೋತೀ, ರಸ = ೨

ಭೂಃ, ಭುವಃ, ಸ್ವಃ = ೧

= ೫

ಗಾಯತ್ರ್ಯಾದಿಮವರ್ಣಂ ತು ಮುಖಮಾಹುರ್ಮನೀಷಿಣಃ ।
ಮುಖೇತ್ವಗ್ನಿಸ್ತದಂತಸ್ಥೋ ರಾಮೋ ಧೃತಪರಶ್ವಧಃ ॥ ೧೪ ॥

ಧ್ಯೇಯಃ ಸ ಸರ್ವದೋಷಾಣಾಂ ಸಂಹರ್ತಾ ಸರ್ವದಾಹಕಃ ।
ಗಾಯತ್ರೀಶೀರ್ಷಕೋ ಬ್ರಹ್ಮಾ ಪದ್ಮನಾಭಸ್ತದಂತರಃ ॥ ೧೫ ॥

ಗಾಯತ್ರೀಮಂತ್ರದ ಮೊದಲನೆಯ 'ತ' ಎಂಬ ವರ್ಣವು ಗಾಯತ್ರಿಯ ಮುಖವೆಂದು ಜ್ಞಾನಿಗಳು ಹೇಳುತ್ತಾರೆ ಹಾಗೂ ಈ ಮುಖದಲ್ಲಿ ಅಗ್ನಿಯು ಇರುವನು, ಅಗ್ನ್ಯಂತರ್ಯಾಮಿಯಾಗಿ ಪರಶು ಎಂಬ ಆಯುಧವನ್ನು ಹಿಡಿದಿರುವ ಭಾರ್ಗವರಾಮನನ್ನು ಧ್ಯಾನಿಸಿದರೆ, ಸರ್ವದೋಷಗಳನ್ನು ನಾಶಪಡಿಸಿ ಹಾಗು ಸರ್ವಪಾಪಗಳನ್ನು (ಪಾಪದ ಬೀಜಗಳನ್ನು) ಸುಟ್ಟು ಬಿಡುತ್ತಾನೆ. (ಹುರಿದು ಬಿಡುತ್ತಾನೆ). ಗಾಯತ್ರಿಯ ಶಿರಸ್ಸಿಗೆ ಬ್ರಹ್ಮದೇವರೇ ಅಭಿಮಾನಿಗಳು ಈ ಬ್ರಹ್ಮದೇವರಲ್ಲಿ ಪರಮಾತ್ಮನ 'ಪದ್ಮನಾಭ' ರೂಪವನ್ನು ಧ್ಯಾನಿಸಬೇಕು.

ಹೃದಯಂ ಭಗವಾನ್ ವಿಷ್ಣುಃ ಸರ್ವವೇದೋದಿತಃ ಪ್ರಭುಃ ।
ರುದ್ರಃ ಶಿಖಾಮಣಿಸ್ತಸ್ಮಿನ್ ಸ್ಥಿತಃ ಸಂಕರ್ಷಣೋ ಹರಿಃ ॥ ೧೬ ॥

ಸಕಲ ವೇದಗಳಿಂದ ಗಮ್ಯನಾದ (ತಿಳಿಯಲ್ಪಡುವ), ಸಮರ್ಥನಾದ, ಷಡ್ಗುಣೈಶ್ವರ್ಯ ಸಂಪನ್ನನಾದ, ಪರಮಾತ್ಮನು ಹೃದಯಕ್ಕೆ ದೇವತೆಯು. ಶಿಖೆಯಲ್ಲಿ ಮಹಾರುದ್ರ ದೇವರಿರುವರು, ಈ ರುದ್ರನಲ್ಲಿ ಸಂಕರ್ಷಣರೂಪಿ ಶ್ರೀಹರಿಯು ಸನ್ನಿಹಿತನಾಗಿರುವನು.

ಯೋನಿಶ್ಚ ಪೃಥಿವೀ ದೇವೀ ವರಾಹಸ್ತನ್ನಿಯಾಮಕಃ ।
ಪ್ರಾಣಾಪಾನಾದಿ ಸಂಸೇವ್ಯಸ್ತತ್ಪ್ರಾಣಾಖ್ಯೋಽಂತರಾತ್ಮಕಃ ॥ ೧೭ ॥

ಯೋನಿಗೆ ಭೂದೇವಿಯು ನಿಯಾಮಕಳು, ಅವಳಲ್ಲಿ ನಿಯಾಮಕನಾಗಿ ವರಾಹರೂಪಿ ಶ್ರೀಹರಿಯು ಇರುವನು ಹಾಗು ಪ್ರಾಣಾಪಾನಾದಿಗಳಿಂದ ಸಂಸೇವಿತನಾಗಿ ಮುಖ್ಯಪ್ರಾಣಾಂತರ್ಯಾಮಿಯಾಗಿ ಪ್ರಾಣ ಶಬ್ದವಾಚ್ಯನಾಗಿರುವನು.

ಮುಖ್ಯಾಭಿಮಾನೀ ಗಾಯತ್ರ್ಯಾಃ
ಶ್ರೀರಮುಖ್ಯಾ ಸರಸ್ವತೀ ।
ಶ್ರೀಗತಃ ಶ್ರೀಧರೋ ಭಾಷಾ
ಸಂಸ್ಥಿತೋ ಹಯಶೀರ್ಷಕಃ ॥ ೧೮ ॥

ಗಾಯತ್ರೀ ಮಹಾಮಂತ್ರಕ್ಕೆ ಮುಖ್ಯಾಭಿಮಾನಿ ಮಹಾಲಕ್ಷ್ಮೀದೇವಿಯು ಇವರಂತರ್ಯಾಮಿಯಾಗಿ ಭಗವಂತನು ಶ್ರೀಧರ ರೂಪದಿಂದ ಇರುವನು ಹಾಗು ಭಾಷೆಗೆ ಅಭಿಮಾನಿಯು ಹಾಗು ಗಾಯತ್ರಿಗೆ ಅಮುಖ್ಯಾಭಿಮಾನಿಯೂ ಆಗಿರುವ ಸರಸ್ವತೀ ದೇವಿಯರಲ್ಲಿ ಹಯಗ್ರೀವ ರೂಪದಿಂದ ಶ್ರೀಹರಿಯು ನಿಯಾಮಕನಾಗಿರುವನು.

ಗಾಯತ್ರೀ ಸಂಸ್ಥಿತೋ ವಿಷ್ಣುಃ
ಗಾಯತಿ ತ್ರಾಯತೇ ಯತಃ ।
ಗಾಯತ್ರೀತ್ಯುಚ್ಯತೇ ವೇದ್ಯೈ ಸ
ಏಕೋ ಬಹುರೂಪವಾನ್ ॥ ೧೯ ॥

ಗಾಯತ್ರಿಯಲ್ಲಿ ಸನ್ನಿಹಿತನಾದ ವಿಷ್ಣುವು ವೇದಗಳನ್ನು ಗಾನಮಾಡುತ್ತಾ ಹಾಗು ವೇದಗಾನ ಮಾಡುವವರನ್ನು ಸಂರಕ್ಷಿಸುತ್ತಾನೆ ಹಾಗು ವೇದಗಳಿಂದ 'ಗಾಯತ್ರೀ' ಎಂದು ಕರೆಯಲ್ಪಡುವ ಭಗವಂತನು ಒಬ್ಬನೇ ಆಗಿದ್ದರೂ ಅವನು, ಬಹುರೂಪನಾಗಿದ್ದಾನೆ.

ಓಂಕಾರ ವ್ಯಾಹೃತೀಸಪ್ತ
ಗಾಯತ್ರೀ ಚ ತತಃ ಪರಂ ।
ಓಮಾಪೋ ಜ್ಯೋತಿರಿತ್ಯೇತಚ್ಛಿರಃ
ಪಶ್ಚಾದುದೀರಯೇತ್॥ ೨೦ ॥

ಪ್ರಾಣಾಯಾಮೋಽಯಮುದ್ದಿಷ್ಟಃ
ಸರ್ವಕರ್ಮಸು ಪಾವನಃ ।
ಸೋಽಪ್ಯರ್ಥಜ್ಞಾನ ಪೂರ್ವಶ್ಚೇತ್
ಅನಂತ ಫಲದೋ ಭವೇತ್ ॥ ೨೧ ॥

ಓಂಕಾರಸಹಿತ ಸಪ್ತವ್ಯಾಹೃತಿಗಳು ಹಾಗು ಗಾಯತ್ರೀ, ಗಾಯತ್ರೀ ಶಿರಸ್ಸು ಹೀಗೆ ಸರ್ವಕರ್ಮಗಳಿಗೂ, ಪಾವನವಾದ ಹಾಗು ಸರ್ವಕರ್ಮಗಳ ಆರಂಭದಲ್ಲಿ ಮಾಡಬೇಕಾದ ಪ್ರಾಣಾಯಾಮದ ಕ್ರಮವನ್ನು ಇಲ್ಲಿ ತಿಳಿಸಲಾಗಿದೆ, ಈ ಪ್ರಾಣಾಯಾಮವನ್ನು ಅರ್ಥಜ್ಞಾನಾನು ಸಂಧಾನದಿಂದ ಮಾಡಿದವರಿಗೆ ಅನಂತ ಫಲ ಪ್ರಾಪ್ತಿ ಆಗುವುದು.

ನಾರಾಯಣೋಽಖಿಲಗುಣೈಃ ಪೂರ್ಣತ್ವಾದೋಮಿತೀರ್ಯತೇ ।
ಐಶ್ವರ್ಯಾದಿ ಪ್ರಭುತ್ವಾಚ್ಚ ಭೂರಿತಿ ವ್ಯಾಹೃತೀರಿತಃ ॥ ೨೨ ॥

ಓಂ - ಅನಂತಗುಣಗಳಿಂದ ಪರಿಪೂರ್ಣ.

ಭೂಃ - ಐಶ್ವಯಾದಿಗಳಿಂದ ಪೂರ್ಣನು.

"ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರಿಯಃ ।
ಜ್ಞಾನ ವಿಜ್ಞಾನಯೋಶ್ಚೈವ ಷಣ್ಣಾಂ ಭಗ ಇತೀರಿಣಾ ॥"

ಎಂಬ ಉಕ್ತಿಯಂತೆ, ಭಗವಾನ್ ಎಂಬರ್ಥದಲ್ಲಿ ವ್ಯಾಹೃತಿಯ ಭೂಃ ಎಂಬ ಶಬ್ದವನ್ನು ಇಲ್ಲಿ ಪ್ರಯೋಗಿಸಲಾಗಿದೆ.

ಲಕ್ಷ್ಮ್ಯಾ ಅಪಿ ವರತ್ವೇನ ಭುವ ಇತ್ಯುಚ್ಯತೇ ಹರಿಃ ।
ಅನಂತಸುಖವತ್ವಾಚ್ಚ ಸುವರಿತ್ಯುಚ್ಯತೇಽಚ್ಯುತಃ ॥ ೨೩ ॥

ಮಹಃ ಸರ್ವಪ್ರಪೂಜ್ಯತ್ವಾಜ್ಜಗತ್ಸ್ರಷ್ಟತ್ವತೋ ಜನಃ।
ಲೀಲಾಲೋಚನಕರ್ತೃತ್ವಾತ್ತಪ ಇತ್ಯೇವ ಶಬ್ದಿತಃ ॥ ೨೪ ॥

ಭುವಃ - ನಿತ್ಯಮುಕ್ತಳು ನಾಶರಹಿತಳು, ನಿರ್ದುಷ್ಟಳು, ಆದ ಮಹಾಲಕ್ಷ್ಮೀದೇವಿಗಿಂತಲೂ ಉತ್ತಮನು.

ಸುವಃ - ನಾಶರಹಿತನು ಹಾಗು ಅನಂತಸುಖಿಯು.

ಮಹಃ - (ಮಹ ಧಾತುವಿನಿಂದ) ಲಕ್ಷ್ಮೀ, ಬ್ರಹ್ಮಾ ರುದ್ರ, ಇಂದ್ರಾದಿ ದೇವತೆಗಳೇ ಮೊದಲಾದ ಸಕಲ ಜೀವರಿಂದಲೂ ಪೂಜ್ಯನು.

ಜನಃ - ಸೃಷ್ಟಿ, ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ, ರೂಪ ಅಷ್ಟಕಾರ್ಯ ನಡೆಸುವವನು.

ತಪಃ - ಯಾವ ಆಯಾಸವಿಲ್ಲದೇ ಲೀಲೆಯಿಂದ ಆಲೋಚಿಸಿ ಸರ್ವವನ್ನು ತಿಳಿಯುತ್ತಾನೇ ಹಾಗು ಸರ್ವಕರ್ತನೂ ಆಗಿದ್ದಾನೆ.

ಸತ್ಯಜ್ಞಾನಪ್ರಮೋದತ್ವಾತ್ಸತ್ಯಮಿತ್ಯಭಿಧೀಯತೇ ।
ವ್ಯಾಹೃತ್ಯರ್ಥೋಽಯಮುದ್ದಿಷ್ಟೋ
ಗಾಯತ್ರ್ಯರ್ಥೋಽಪ್ಯುದೀರ್ಯತೇ ॥ ೨೫ ॥

ಸತ್ಯಂ - ಉತ್ತಮನು ಹಾಗು ಪೂರ್ಣಾನಂದನು. **ಸಚ್ಛಬ್ದ ಉತ್ತಮಂ ಬ್ರೂಯಾತ್ ಆನಂದೇತೀತಿ ವೈವದೇತ್ । ಏತಿ ಜ್ಞಾನಂ ಸಮುದ್ದಿಷ್ಟಂ ಪೂರ್ಣಾನಂದೋ ಹರಿಸ್ಸ್ವತಃ ।** ಇದು ವ್ಯಾಹೃತಿಯ ಅರ್ಥವು. ಅದರಂತೆಯೇ ಗಾಯತ್ರಿಯ ಅರ್ಥವೂ ಕೂಡ ಇದೇ ಆಗಿದೆ.

ಏಕೋನವಿಂಶದ್ವರ್ಣಂ ತು ವಿಷ್ಣುರ್ದೈವತ್ಯಮೀರಿತಮ್ ।
ತಸ್ಮಾದ್ಯಚ್ಛಬ್ದವಾಚ್ಯೋ ಹಿ ವಿಷ್ಣುರೇವ ನ ಚಾಪರಃ ॥ ೨೬ ॥

ಗಾಯತ್ರೀ ಮಂತ್ರದಲ್ಲಿ ಒಟ್ಟು ಇಪತ್ತನಾಲ್ಕು ವರ್ಣಗಳು. ಅದರಲ್ಲಿ ಹತ್ತೊಂಭತ್ತನೇ (೧೯) **ಯಃ** - ಎಂಬ ವರ್ಣವು ವಿಷ್ಣುವೇ ದೇವತೆಯಾಗಿ ವುಳ್ಳದ್ದಾಗಿದೆ. ಈ ಕಾರಣದಿಂದ ಈ ವರ್ಣಕ್ಕೆ ಪರಮಾತ್ಮನೇ ವಾಚ್ಯನು ಮತ್ತೊಬ್ಬರಾರೂ ಅಲ್ಲ.

ಯಚ್ಚ ವಿಷ್ಣುರ್ಧಿಯೋಽಸ್ಮಾಕಂ ಪ್ರೇರಯೇತ್ಸವಿತುರ್ದಿವಿ ।
ದೇವಸ್ಯ ಪ್ರೇರಕಂ ದೀಪ್ತಿರಿತಿ ಜ್ಞಾನಾತ್ಮಕತ್ವತಃ ॥ ೨೭ ॥

'ಯ' ಎಂಬ ಪದದಿಂದ ವಾಚ್ಯನಾದ ಶ್ರೀ ಹರಿಯು ಜಗತ್ತಿಗೆಲ್ಲಾ ಪ್ರಕಾಶಪ್ರದನಾದ ಹಾಗು ನಮಗೆಲ್ಲಾ ಪ್ರೇರಕನಾದ ಸೂರ್ಯನಿಗೂ ಪರಮ ಮುಖ್ಯಪ್ರೇರಕನಾಗಿರುವನು. ಅದರಂತೆಯೇ ಜ್ಞಾನದಿಂದ ದೀಪ್ತನಾದ ಶ್ರೀಹರಿಯು ನಮ್ಮ ಬುದ್ಧಿ ಜ್ಞಾನಕ್ಕೆ ಪ್ರಚೋದಕನಾಗಿರುವನು.

ಭರ್ಗಸ್ತದ್ವೈಷ್ಣವಂ ತೇಜೋ-
ರೂಪಂ ಸಂಚಿತಯಾಮ್ಯಹಮ್ ।
ಏವಮೇವ ಹಿ ಗಾಯತ್ರ್ಯಾ-
ಸ್ತರ್ಥೋ ಜ್ಞೇಯೋ ಮನೀಷಿಭಿಃ ॥ ೨೮ ॥

ಪರಮ ವೈಷ್ಣವ ರೂಪವಾದ 'ಭರ್ಗ' ಎಂಬ ತೇಜೋರೂಪವನ್ನು ಚೆನ್ನಾಗಿ ಚಿಂತಿಸುವೆನು. ಇದೇ ರೀತಿ ಗಾಯತ್ರೀಮಂತ್ರದ ಅರ್ಥವು ಜ್ಞಾನಿಗಳಿಂದ ತಿಳಿಯಲ್ಪಡಲಿ.

ಸದಾ ಸರ್ವಗುಣಾಪಾನಾತ್
ಅಜಗತ್ಪಾಲನಾದಪಿ ।
ಆಪೋ ನಾರಾಯಣಃ ಪ್ರೋಕ್ತೋ
ಜ್ಯೋತಿಶ್ಚ ಸ್ವಪ್ರಕಾಶತಃ ॥ ೨೯ ॥

ಶ್ರೇಷ್ಠತ್ವಾತ್ಸರಸಃ ಪ್ರೋಕ್ತೋಽಮೃತಂ ಮೋಕ್ಷಪ್ರದಾನತಃ ।
ಬೃಂಹಿತತ್ವಾದ್ಗುಣೈಬ್ರಹ್ಮ ಭೂರಿತಿ ಪೂರ್ಣರೂಪತಃ ॥ ೩೦ ॥

ಭುವೋ ವೀರ್ಯಸ್ವಭಾವತ್ವಾತ್
ಸುವಸ್ಸುಬಲ ರೂಪತಃ ।
ಏವಂ ಶೀರ್ಷಾರ್ಥಪೂರ್ವಂ ತು
ಪ್ರಾಣಾಯಾಮಾರ್ಥ ಈರಿತಃ ॥ ೩೧ ॥

೧. **ಅಪಃ** - ಸದಾ ಸಕಲ ಸದ್ಗುಣಗಳ ಪಾನ ಮಾಡುವವನು. ಸಕಲ ಜಗತ್ತನ್ನು ರಕ್ಷಿಸುವವನು. (ಅಸಮಂತಾತ್ ಪಿಬತಿ ಪಾಲಯತಿ ಚ ಇತಿ ಆಪಃ)

೨. **ಜ್ಯೋತಿಃ** - ಸ್ವಸಾಮರ್ಥ್ಯದಿಂದ ಪ್ರಕಾಶಿಸುವವನು.
(ಅಗ್ನಿ, ಸೂರ್ಯ, ಮೊದಲಾದವರ ಸಹಾಯವಿಲ್ಲದೇ).

೩. **ರಸಃ** - ಸರ್ವಶ್ರೇಷ್ಠನು (ರಸೋಸಾರಃ ಪ್ರಧಾನೇ ಚ)।

೪. **ಅಮೃತಂ** - ಜನನ ಮರಣಾದಿ ದೋಷರಹಿತನು ಹಾಗೂ ಮೋಕ್ಷಪ್ರದನು.

೫. **ಬ್ರಹ್ಮ** - ಅನಂತ ಸದ್ಗುಣಗಳಿಂದ ಪೂರ್ಣನು.
(ಅಥಕಸ್ಮಾದುಚ್ಯತೇ ಬ್ರಹ್ಮೇತಿ ಬೃಹಂತೋ ಯಸ್ಮಿನ್ ಗುಣಾಃ).

೬. **ಭೂಃ** - ಮೂಲರೂಪ ಹಾಗು ಅವತಾರ ರೂಪಗಳು ಪೂರ್ಣ. (ಭೂ ಬಹೌ ಇತಿ ಧಾತುಃ ಬಹುತ್ವಂ ಚ ಪೂರ್ಣತ್ವಂ).

೭. **ಭುವಃ** - ಸ್ವಭಾವತಃ ಮಹಾಪರಾಕ್ರಮಿಯು.

೮. **ಸುವಃ** - ಶ್ರೇಷ್ಠ ಹಾಗು ಬಲಿಷ್ಠದೇಹವುಳ್ಳವನು. ಈ ಪ್ರಕಾರ ಗಾಯತ್ರಿಯ ಶೀರ್ಷಾರ್ಥಪೂರ್ವಕವಾಗಿ ಪ್ರಾಣಾಯಾಮದ ಅರ್ಥವನ್ನು ನಿರೂಪಿಸಿದ್ದಾರೆ.

ಅಥಧ್ಯಾನಂ ಪ್ರವಕ್ಷ್ಯಾಮಿ
ಸೂರ್ಯಮಂಡಲಗಸ್ಯ ಚ ।
ದ್ಯುನಾಮಿಕಾಯಾ ಭಾರತ್ಯಾರೂಪಂ
ಜ್ಯೋತಿರ್ಮಯಂ ಹಿ ಯತ್ ॥ ೩೨ ॥

ಬ್ರಹ್ಮಣಸ್ತದಧಿಷ್ಠಾನಂ ಪದ್ಮರೂಪಧರಸ್ಯ ಚ ।
ತತ್ಸರೋಜಾಸನಾವಿಷ್ಟಃ ಪುಂಡರೀಕಾಯತೇಕ್ಷಣಃ ॥ ೩೩ ॥

ಹಿರಣ್ಮಯವಪುಃ ಶ್ರೀಮಾನ್
ಧೃತ ಶಂಖಾರಿದೋರ್ದ್ವಯಃ ।
ಧ್ಯೇಯೋ ನಾರಾಯಣಃ
ಪಶ್ಚಾದ್ಗಾಯತ್ರೀಂ ಸಂಜಪೇದ್ಬುಧಃ ॥ ೩೪ ॥

ಗಾಯತ್ರೀ ಜಪದ ಮೊದಲು ಮಾಡುವ ಧ್ಯಾನದ ಕ್ರಮವನ್ನು ನಿರೂಪಿಸುತ್ತಾರೆ. ಸೂರ್ಯಮಂಡಲದಲ್ಲಿ ಪ್ರಕಾಶಮಾನವಾದ 'ದ್ಯು' ಎಂಬ ಹೆಸರಿನ ಭಾರತೀದೇವಿಯ ತೇಜೋಮಯವಾದ ರೂಪವು ಬೆಳಗುತ್ತದೆ. ಈ ಭಾರತೀ ದೇವಿಯರ ಅಧಿಷ್ಠಾನದಲ್ಲಿ ಪದ್ಮರೂಪಧರರಾದ ಬ್ರಹ್ಮದೇವರು ಸನ್ನಿಹಿತರಾಗಿರುವರು. ಇವರ ಅಧಿಷ್ಠಾನದಲ್ಲಿ ಕಮಲನೇತ್ರನು, ಭಂಗಾರದಂತೇ ದೇಹವುಳ್ಳವನು, ಕಾಂತಿಯುಕ್ತನು, ಎರಡು ಕರಗಳಿಂದ ಶಂಖ, ಚಕ್ರಗಳನ್ನು ಧರಿಸಿರುವವನು, ಪೂಜ್ಯನು ಆದ ಶ್ರೀಮನ್ನಾರಾಯಣನ ರೂಪವನ್ನು ಮೊದಲು ಧ್ಯಾನಿಸಬೇಕು. ಅನಂತರ ಗಾಯತ್ರೀ ಜಪವನ್ನು ಮಾಡಬೇಕೆಂಬುದು ಜ್ಞಾನಿಗಳ ಅಭಿಪ್ರಾಯ.

ಧ್ಯೇಯಃ ಸದಾ ಸವಿತೃಮಂಡಲಮಧ್ಯವರ್ತೀ ನಾರಾಯಣಃ ಸರಸಿಜಾಸನಾ ಸನ್ನಿವಿಷ್ಟಃ ಕೇಯೂರವಾನ್, ಮಕರಕುಂಡಲವಾನ್, ಕಿರೀಟಿ, ಹಾರೀ, ಹಿರಣ್ಮಯವಪುಃ ಧೃತಶಂಖಚಕ್ರಃ

ಸೂರ್ಯಮಂಡಲ ಮಧ್ಯವರ್ತೀಯು, ಕಮಲಾಸನವಿಷ್ಟನು, ಕೇಯೂರ-ಧರನು, ಮಕರಕುಂಡಲಧರನು, ವಜ್ರಕಿರೀಟಧಾರಿಯೂ, ವನಮಾಲೆಯಿಂದ ಶೋಭಿಸುವವನು, ಭಂಗಾರದಂತೆ ದೇಹವುಳ್ಳವನು, ಶಂಖ ಚಕ್ರಧರನು, ಹೀಗೆ ಪರಮಾತ್ಮನ ರೂಪವನ್ನು ಮೊದಲು ಧ್ಯಾನಿಸಬೇಕು. ಅನಂತರ ಗಾಯತ್ರೀಜಪವನ್ನು ಮಾಡಬೇಕು.

ಅನಂತ ಸದ್ಗುಣೋತತ್ವಾತ್ ಪೂರ್ಣತ್ವಾದೋಮಿತೀರಿತಃ ।
ಅಧಿಕೋಜಸ್ತತೋ ವಿಷ್ಣುಃ ಸ ಜಗದ್ಭರಣಾದಪಿ ॥ ೩೫ ॥

ಓತತ್ವಾಜ್ಜಗತಸ್ತಸ್ಮಿನ್ನಾಮ್ನಾ ತತ್ವಾತ್ತತೋಽಪಿ ವಾ ।
ಜಗತಾಮವನಾದ್ವಿಷ್ಣುಃ ವೇದೈರೋಮಿತಿ ಚೋದಿತಃ ॥ ೨೬ ॥

ಓಂ : ಅನಂತ ಸದ್ಗುಣೋಪೇತನು, ಪೂರ್ಣನು, ಅತ್ಯಧಿಕ ಸಮರ್ಥನು, ಜಗದ್ಧಾರಕನು.

ತತ್ : ದೇಸತಃ ಕಾಲತಃ ಗುಣತಃ ಓತಪ್ರೋತವಾಗಿ ಸರ್ವತ್ರವ್ಯಾಪ್ತನು (ವಸ್ತ್ರದಲ್ಲಿ ಸೇರಿರುವ ದಾರಗಳಂತೆ) ಅಂದರೇ ದಾರವಿಲ್ಲದೇ ವಸ್ತ್ರ ಹೇಗಿಲ್ಲವೊ ಹಾಗೆ ಪರಮಾತ್ಮನಿಲ್ಲದ ಜಗತ್ತಿಲ್ಲ ಎಂದರ್ಥ ಹಾಗು ಸಕಲ ಜಗದ್ರಕ್ಷಕನಾಗಿರುವನು ಎಂದರ್ಥ.

ಪ್ರವೃತ್ತಾನಾಗತಾತೀತ ಕಾಲೇಽಪ್ಯೇಕ ಪ್ರಕಾರತಃ ।
ನಿತ್ಯಸಚ್ಚಿತ್ಪ್ರಮೋದತ್ವಾದೋಮುಪಾಸ್ಯೋ ರಮಾಪತಿಃ ॥ ೩೭ ॥

ಭೂತ, ಭವಿಷ್ಯತ್, ವರ್ತಮಾನ, ಕಾಲದಲ್ಲಿಯೂ ಏಕಪ್ರಕಾರವಾಗಿ ಸಚ್ಚಿದಾನಂದಮೂರ್ತಿ ಅದ್ದರಿಂದ, ರಮಾಪತಿಯು 'ಓಂ' ಎಂದು ಕರೆಯಲ್ಪಟ್ಟು ಉಪಾಸನೆಗೆ ಯೋಗ್ಯನಾಗಿದ್ದಾನೆ.

ಅಕಾರೇಣೋಚ್ಯತೇ ಬ್ರಹ್ಮ ಯೋಽಸೃಜಚ್ಚತುರಾನನಮ್ ।
ಉಕಾರೇಣೋಚ್ಯತೇ ವಿಷ್ಣುಃ ಜಗತ್ಪಾಲನ ತತ್ಪರಃ ॥ ೩೮ ॥

ಮಕಾರೇಣಾಂತಕೋ ರುದ್ರೋ ಯಶ್ಚ ರುದ್ರಾಂತರಾತ್ಮಕಃ ।
ಏವಂ ತ್ರಿರೂಪೀ ಭಗವಾನ್ ಪ್ರಣವೋಪಿ ತ್ರಯಾತ್ಮಕಃ ॥ ೩೯ ॥

ಅಕಾರ : ಚತುರ್ಮುಖ ಬ್ರಹ್ಮದೇವರನ್ನು ಸೃಷ್ಟಿ ಮಾಡುವವನು.

ಉಕಾರ : ಸಕಲ ಜಗದ್ರಕ್ಷಕನು.

ಮಕಾರ : ಪ್ರಳಯಕರ್ತೃರುದ್ರನ ಅಂತರ್ಯಾಮಿ ನರಸಿಂಹ. ಹೀಗೆ ಪ್ರಣವದಲ್ಲಿರುವ ಅಕಾರ, ಉಕಾರ, ಮಕಾರ, ಎಂಬ ಮೂರು ವರ್ಣಗಳಿಗೆ ಮೂರು ರೂಪಗಳಿಂದ ಪ್ರತಿಪಾದ್ಯನಾಗಿರುವನು.

ಅಕಾರೇಣಾಖಿಲಾಧಿಕ್ಯಂ
ಉಕಾರೇಣ ಗುಣೋಚ್ಚತಾಮ್ ।
ಮಕಾರೇಣಾಮಿತತ್ವಂ ತು
ತಾರಾರ್ಥೋ ವೇದ ಭೋದಿತಃ ॥ ೪೦ ॥

ಅಕಾರ : ಅಖಿಲಾಧಿಕನು (ಸರ್ವೋತ್ತಮ).

ಉಕಾರ : ಉತ್ಕೃಷ್ಟವಾದ ಗುಣಗಳಿಂದ ಪೂರ್ಣನು.

ಮಕಾರ : ಅಪರಿಮಿತನು, ಅಪ್ರಮೇಯನು ಹೀಗೇ ವೇದೋಕ್ತವಾದ ಓಂಕಾರಕ್ಕೆ ಶ್ರೀಹರಿಯೇ ವಿಷಯನಾಗಿರುವನು.

ತಾರಾಭಿಮಾನೀ ಶೇಷಶ್ಚ ಪ್ರಣವೋಷ್ಟಾರ್ಣ ಈರಿತಃ ।
ಅಕಾರಾದಿ ತ್ರಿವರ್ಣಾನಾಮಭಿಮಾನೀ ಸದಾಶಿವಃ ॥ ೪೧ ॥

ಬಿಂದುನಾದಾದಿ ವರ್ಣಾನಾಮಭಿಮಾನೀ ಸರಸ್ವತೀ ।
ಅಕಾರಾದ್ಯಷ್ಟವರ್ಣಾನಾಂ ಚತುರ್ವಿಂಶತಿ ದೇವತಾಃ ॥ ೪೨ ॥

ಇಲ್ಲಿ ಹೇಳಿರುವ **'ತಾರ'** ಎಂಬ ಶಬ್ದಕ್ಕೆ ಪ್ರಣವ ಎಂದರ್ಥ. **(ತರಂತಿ ಅನೇನ ಅನಿಷ್ಟನಿಚಯಂ ಇತಿ ತಾರಃ ಓಂಕಾರಃ)** ಎಂಟು ವರ್ಣಗಳಿಂದ ಯುಕ್ತವಾದ ಪ್ರಣವಕ್ಕೆ ಶೇಷದೇವರು ಅಭಿಮಾನಿಗಳು.

ಪ್ರಣವ : **ಅ,ಉ,ಮ,ಬಿಂದು, ನಾದ, ಘೋಷ, ಶಾಂತ, ಅತಿಶಾಂತ** ಈ ಎಂಟು ವರ್ಣಗಳಲ್ಲಿ, **ಅಕಾರ, ಉಕಾರ, ಮಕಾರ,** ವೆಂಬ ಮೂರುವರ್ಣಗಳಿಗೆ ಮಹಾರುದ್ರ ದೇವರು ಅಭಿಮಾನಿಗಳು ಹಾಗು **ಬಿಂದು, ನಾದ, ಘೋಷ, ಶಾಂತ, ಅತಿಶಾಂತ,** ವೆಂಬ ಐದು ವರ್ಣಗಳಿಗೆ ಸರಸ್ವತೀ ದೇವಿಯು ಅಭಿಮಾನಿದೇವತೆಯು ಹಾಗು ಈ ಪ್ರಣವದಲ್ಲಿರುವ ಎಂಟು ವರ್ಣಗಳಿಗೇ ಭಗವಂತನು ತನ್ನ ಇಪ್ಪತ್ತನಾಲ್ಕು ರೂಪಗಳಿಂದ ಪ್ರತಿಪಾದ್ಯನಾಗಿರುವನು.

ವಿಶ್ವಃ ಕೃಷ್ಣಃ ಪದ್ಮನಾಭಸ್ತ್ವಕಾರಸ್ಯಾಧಿ ದೇವತಾಃ ।
ತೈಜಸೋ ರಾಮ ವಿಷ್ಣೂಚ ಉಕಾರಸ್ಯ ನಿಯಾಮಕಃ ॥ ೪೩ ॥

ಪ್ರಾಜ್ಞೋ ರುದ್ರಾಂತರಸ್ಥೋ
ಯೋ ನೃಸಿಂಹೋ ರುದ್ರನಾಮಕಃ ।
ಶ್ರೀನೃಸಿಂಹೋ ಮಕಾರಾರ್ಥೋ
ತುರೀಯಸ್ತು ವರಾಹಕಃ ॥ ೪೪ ॥

ಅನಿರುದ್ಧ ಇತಿ ಹ್ಯೇತೇ ಬಿಂದುಶ್ಚಾತ್ಮೇತಿ ನಾಮಕಃ ।
ವಿಷ್ಣುಃ ಪ್ರದ್ಯುಮ್ನ ಇತ್ಯೇತೇ ನಾದೋಕ್ತಾಸ್ತ್ವಂತರಾತ್ಮಕಾಃ ॥ ೪೫ ॥

ಸಂಕರ್ಷಣಃ ಪರಂಜ್ಯೋತಿಃ ಘೋಷದೇವಾಃ ಪ್ರಕೀರ್ತಿತಾಃ ।
ಪರಮಾತ್ಮಾ ಪರಬ್ರಹ್ಮ ವಾಸುದೇವ ಇತಿತ್ರಯಃ ॥ ೪೬ ॥

ಶಾಂತಾಧಿದೇವತಾಃ ಪ್ರೋಕ್ತಾಃ ಜ್ಞಾನಾತ್ಮಾ ವಾಸುದೇವಕಃ ।
ನಾರಾಯಣ ಇತಿ ಪ್ರೋಕ್ತಾಸ್ತ್ವತಿ ಶಾಂತಾಧಿದೇವತಾಃ ॥ ೪೭ ॥

ಏವಮೇಕೈಕವರ್ಣಸ್ಯ ತ್ರಿತ್ರಿರೂಪ ಪ್ರಕಾರತಃ ।
ಚತುರ್ವಿಂಶತಿ ಸಂಖ್ಯಾಕಾಃ ಪ್ರಣವಾಷ್ಟಾರ್ಣ ದೇವತಾಃ ॥ ೪೮ ॥

ಪ್ರಣವದಲ್ಲಿರುವ ಅಕಾರಾದಿ ಎಂಟು ವರ್ಣಗಳಲ್ಲಿ ಪ್ರತೀ ಒಂದು ವರ್ಣಕ್ಕೂ ಮೂರು ರೂಪಗಳಂತೇ ಎಂಟು ವರ್ಣಗಳಿಗೆ ಒಟ್ಟು ಇಪ್ಪತ್ತನಾಲ್ಕು ಭಗವಂತನ ರೂಪಗಳು ಪ್ರತಿಪಾದಿತವಾಗಿದೆ. (೮x೩=೨೪)

೧. ಅಕಾರಕ್ಕೆ : ವಿಶ್ವ, ಕೃಷ್ಣ, ಪದ್ಮನಾಭ

೨. ಉಕಾರಕ್ಕೆ : ತೈಜಸ, ರಾಮ, ವಿಷ್ಣು

೩. ಮಕಾರಕ್ಕೆ : ಪ್ರಾಜ್ಞ ರುದ್ರ, ಶ್ರೀನರಸಿಂಹ

೪. ಬಿಂದು : ತುರೀಯ, ವರಾಹ, ಅನಿರುದ್ಧ

೫. ನಾದ : ಆತ್ಮಾ ವಿಷ್ಣು, ಪ್ರದ್ಯುಮ್ನ

೬. ಘೋಷ : ಅಂತರಾತ್ಮಾ ಸಂಕರ್ಷಣ, ಪರಂಜ್ಯೋತಿಃ

೭. ಶಾಂತಾ : ಪರಮಾತ್ಮಾ ಪರಬ್ರಹ್ಮ ವಾಸುದೇವ

೮. ಅತಿಶಾಂತಾ : ಜ್ಞಾನಾತ್ಮಾ ವಾಸುದೇವ, ನಾರಾಯಣ

ಧ್ಯಾತವ್ಯಾಶ್ಚ ಜಪಾದೌ ಚ ತತ್ತನ್ಮಂತ್ರಾರ್ಥಸಿದ್ಧಿದಾಃ ।
ಭೂರ್ಭುವಸ್ಸುವರಿತ್ಯೇತದ್ ವ್ಯಾಹೃತಿತ್ರಯ ಮಾನಿನಃ ॥ ೪೯ ॥

ಹುತಭುಗ್ವಾಯು ಸೂರ್ಯಶ್ಚ ತೇಷು ಭೂರಾದಿನಾಮಕಃ ।
ಅನಿರುದ್ಧಾದಯೋ ಜ್ಞೇಯಾಸ್ಸರ್ವಕರ್ಮಪ್ರಪೂರಕಾಃ ।। ೩೦ ।।

ಗಾಯತ್ರೀ ಜಪಮಾಡುವ ಮೊದಲು ಹಿಂದೆ ಹೇಳಿದ ಭಗವಂತನ ರೂಪಗಳನ್ನು ಧ್ಯಾನಿಸಿ, ಅನಂತರ ಜಪಮಾಡಿದರೆ ತತ್ತನ್ಮಂತ್ರಗಳ ಅರ್ಥವು ಸಿದ್ಧಿಸುವುವು ಹಾಗು ಭೂಃ ಭುವಃ ಸುವಃ ಎಂಬ ಮೂರು ವ್ಯಾಹೃತಿಗಳಿಗೆ, ಅಗ್ನಿ, ವಾಯು, ಸೂರ್ಯ, ಈ ದೇವತೆಗಳು ಅಭಿಮಾನಿಗಳು ಹಾಗು ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣವೆಂಬ ಭಗವಂತನ ಮೂರು ರೂಪಗಳು ಸರ್ವಕರ್ಮಗಳಿಗೆ ಪೂರಕವಾಗಿರುತ್ತವೆ.

ಗಾಯತ್ರ್ಯಾದಿ ಪದೋದ್ದಿಷ್ಟ ತ್ರಿಲೋಕಸ್ಥೋಽನಿರುದ್ಧಕಃ ।
ಶ್ವೇತದ್ವೀಪಗತೋ ವಿಷ್ಣುರ್ಬಾಹ್ಯದೇಹ ನಿಯಾಮಕಃ ।। ೩೧ ।।

ಶ್ವೇತದ್ವೀಪ, ಅನಂತ, ವೈಕುಂಠ ವೆಂಬ ಮೂರು ಲೋಕಗಳಲ್ಲಿ ಸನ್ನಿಹಿತನಾದ ಪರಮಾತ್ಮನು, **ಗಾಯತ್ರಿಯ ಮೊದಲನೆಯ ಪಾದಕ್ಕೆ** ನಿಯಾಮಕನು ಹಾಗು ಬಾಹ್ಯದೇಹಕ್ಕೆ **'ಅನಿರುದ್ಧ'** ವೆಂಬ ರೂಪದಿಂದ ನಿಯಾಮಕನಾಗಿ **'ಶ್ವೇತದ್ವೀಪ'**ದಲ್ಲಿ ಸನ್ನಿಹಿತನಾಗಿರುವನು.

ವಾಸುದೇವಶ್ಚ ಋಗ್ವೇದೋ ಸೂರ್ಯಲೋಹಿತ ರಶ್ಮಿಗಃ ।
ವಾಸುದೇವ ಇತಿ ಹ್ಯೇತೇ ಚತ್ವಾರೋಽಭೀಷ್ಟದಾಯಕಾಃ ।। ೩೨ ।।

ಸೂರ್ಯನ ಕೆಂಪು ಕಿರಣಗಳಲ್ಲಿ ಸ್ಥಿತನಾದ ಶ್ರೀಹರಿಯು **'ವಾಸುದೇವ'**ವೆಂಬ, ರೂಪದಿಂದ **'ಋಗ್ವೇದಕ್ಕೆ'** ವಿಷಯನಾಗಿ ನಿಯಾಮಕನಾಗಿರುವನು ಹಾಗು **ಧರ್ಮ, ಅರ್ಥ, ಕಾಮ, ಮೋಕ್ಷ**ಗಳೆಂಬ ಪುರುಷಾರ್ಥ ಪ್ರದನೂ ಆಗಿರುವನು.

ಪ್ರದ್ಯುಮ್ನಶ್ಚ ಚತುರ್ವೇದೋದಿತಾನಂತಾಸನಸ್ಥಿತಃ ।
ವಾಸುದೇವಸ್ತಥಾ ಬಾಹ್ಯಹೃದ್ಗತೋ ವಾಸುದೇವಕಃ ।। ೩೩ ।।

ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ - ಎಂಬ ನಾಲ್ಕು ವೇದಗಳಿಂದ ಗಮ್ಯನಾದ (ತಿಳಿಯಲ್ಪಡುವ) ಶ್ರೀಹರಿಯು **'ಪ್ರದ್ಯುಮ್ನ'** ಎಂಬ ರೂಪದಿಂದ **'ಅನಂತಾಸನ'**ದಲ್ಲಿದ್ದು ಪ್ರತಿಪಾದ್ಯನಾಗಿರುವನು ಹಾಗು **'ವಾಸುದೇವ'** ರೂಪದಿಂದ ಬಾಹ್ಯ ಹೃದಯಕ್ಕೆ ನಿಯಾಮಕನಾಗಿರುವನು.

ಯಜುರ್ವೇದೋದಿತಃ
ಸೂರ್ಯದಕ್ಷಶ್ವೇತಾಂಶು ಸಂಸ್ಥಿತಾಃ ।

ಸಂಕರ್ಷಣ ಇತಿ ಹ್ಯೇತೇ
ತದ್ ದ್ವಿತೀಯ ಪದೋದಿತಾಃ ।। ೩೪ ।।

ಸೂರ್ಯನ ಬಲಭಾಗದ ಬಿಳಿಕಿರಣಗಳಲ್ಲಿ ಸ್ಥಿತನಾದ ಶ್ರೀಹರಿಯು **'ಯಜುರ್ವೇದ'**ಕ್ಕೆ ವಿಷಯನಾಗಿ ಹಾಗು **'ಸಂಕರ್ಷಣ'** ರೂಪದಿಂದ **ಗಾಯತ್ರಿಯ ಎರಡನೇ ಪಾದದಿಂದ** ಪ್ರತಿಪಾದ್ಯನಾಗಿರುವನು.

ಸಂಕರ್ಷಣಮರುತ್ಸಂಸ್ಥೋ ವಿಷ್ಣುರ್ವೈಕುಂಠ ಸಂಸ್ಥಿತಃ ।
ತಥಾ ಜೀವಸ್ವದೇಹಸ್ಥೋ ವಾಸುದೇವಸ್ತದಾಶ್ರಯಃ ।। ೩೫ ।।

'ವೈಕುಂಠ' ಲೋಕದಲ್ಲಿ ಸಂಸ್ಥಿತನಾದ ವಿಷ್ಣುವು ಗಾಯತ್ರಿಯ ತೊಡೆಗಳಿಗೆ ಸಂಕರ್ಷಣ ರೂಪದಿಂದ ನಿಯಾಮಕನು ಹಾಗು ಸ್ವದೇಹಸ್ಥನಾದ ಜೀವನು **'ವಾಸುದೇವ'** ಎಂಬ ಭಗವದ್ರೂಪವನ್ನು ಆಶ್ರಯಿಸಿರುವನು.

ಸಾಮವೇದೋದಿತಃ ಸೂರ್ಯ ಪ್ರತ್ಯಕ್ ಶ್ಯಾಮಾಂಶು ಸಂಸ್ಥಿತಃ ।
ಪ್ರದ್ಯುಮ್ನಶ್ಚೇತಿ ಚತ್ವಾರಸ್ತೃತೀಯ ಪದದೇವತಾಃ ।। ೩೬ ।।

ಸಾಮವೇದದಿಂದ ಗಮ್ಯನಾದ ಭಗವಂತನು ಸೂರ್ಯನ ಪಶ್ಚಿಮ ಭಾಗದ ನೀಲಿ ಕಿರಣಗಳಲ್ಲಿ ಸಂಸ್ಥಿತನು ಹಾಗೂ **ಗಾಯತ್ರಿಯ ಮೂರನೇ ಪಾದಕ್ಕೆ 'ಪ್ರದ್ಯುಮ್ನ'** ರೂಪದಿಂದ ಪ್ರತಿಪಾದ್ಯನು.

ಚತುರ್ಥಪಾದ ಪ್ರಣವ ಪ್ರತಿಪಾದ್ಯಾರ್ಕ ಮಂಡಲೇ ।
ಸತ್ಯಾತ್ಮಕ ರಮಾಸಂಸ್ಥಃ ತತ್ಪರೋ ವಾಸುದೇವಕಃ ।। ೩೭ ।।

ಸೂರ್ಯಮಂಡಲ ಮಧ್ಯವರ್ತಿಯಾದ ಭಗವಂತನು ಗಾಯತ್ರಿಯ ನಾಲ್ಕನೇ ಪಾದವಾದ **'ಪ್ರಣವ'**ಕ್ಕೆ ಪ್ರತಿಪಾದ್ಯನು ಹಾಗು **ಸತ್ಯಾ** ಎಂಬ ಹೆಸರಿನ **ರಮಾದೇವಿಯಲ್ಲಿ** ಸನ್ನಿಹಿತನಾದ **ವಾಸುದೇವನು** ಅವಳಿಗಿಂತಲೂ ಉತ್ತಮನಾಗಿರುವನು.

ಪರೋರಜೋ ವಿಧಾನಶ್ಚ
ತಥಾಜೀವ ಹೃದಿಸ್ಥಿತಃ ।
ವಾಸುದೇವಸ್ಚಥರ್ವೋಕ್ತಃ
ಸೂರ್ಯನೀಲೋತ್ತರಾಂಶುಗಃ ।। ೪೮ ।।

ಜೀವರ ಹೃದಯದಲ್ಲಿ, ಸಂಸ್ಥಿತನಾದ ವಿಷ್ಣುವು ರಜೋಗುಣಕ್ಕೆ ಅಭಿಮಾನಿಯಾದ ಲಕ್ಷ್ಮೀದೇವಿಗಿಂತಲೂ ಉತ್ತಮನು ಹಾಗು ಸೂರ್ಯನ

ಉತ್ತರ ಭಾಗದ ನೀಲಿ ಕಿರಣಗಳಲ್ಲಿ ಸಂಸ್ಥಿತನಾದ ವಾಸುದೇವನು **ಅಥರ್ವಣ** ವೇದದಿಂದ ಪ್ರತಿಪಾದ್ಯನಾಗಿರುವನು.

ನೀಲವರ್ಣೋಽನಿರುದ್ಧಶ್ಚ
ಚತುರ್ಥಪದ ದೇವತಾಃ ।
ಚತುಷ್ಪಾದೋದಿತಾ ದೇವಾ
ವಿಜ್ಞಾತಾಃ ಸ್ವಾಪರೋಕ್ಷದಾಃ ॥ ೫೯ ॥

ನೀಲವರ್ಣದಿಂದ ಯುಕ್ತನಾಗಿ **'ಅನಿರುದ್ಧ'**ರೂಪದಿಂದ ಗಾಯತ್ರಿಯಲ್ಲಿ ಸ್ಥಿತನಾಗಿದ್ದು **ಗಾಯತ್ರಿಯ ನಾಲ್ಕನೇ ಪಾದದಿಂದ** ಪ್ರತಿಪಾದ್ಯನಾಗಿರುವನು ಹಾಗು ಗಾಯತ್ರಿಯ ನಾಲ್ಕನೇ ಪಾದವಾದ ಓಂಕಾರದಿಂದ ತಿಳಿಯಲ್ಪಡುವ ಕ್ರೀಡಾದಿಗುಣವಿಶಿಷ್ಟನಾದ ಭಗವಂತನು ಯಾರ ಸಹಾಯವಿಲ್ಲದೆ ತನ್ನದೇ ಆದ ಸ್ವಯೋಗ್ಯತೆಯಿಂದ (ಸ್ವಸಾಮರ್ಥ್ಯದಿಂದ) ಸರ್ವವನ್ನೂ ತಿಳಿಯುತ್ತಾನೆ.

ಷಟ್ ಕುಕ್ಷಯಶ್ಚ ಗಾಯತ್ರ್ಯಾ
ಚತುರ್ವರ್ಣ ಪ್ರಭೇದತಃ ।
ಗಾಯತ್ರೀನಾಮಕಾಶ್ಚಾದ್ಯಃ
ಸ್ತ್ರೀರೂಪೋಽರ್ಕ ಸಮದ್ಯುತಿಃ ॥ ೬೦ ॥

ದ್ವಿತೀಯ ಕುಕ್ಷಿಗಾ ಜ್ಞೇಯಾ
ಮತ್ಸ್ಯಾದ್ಯಾ ಭೂತಿನಾಮಕಾಃ ।
ತೃತೀಯೋ ವಾಕ್ಸ್ಥಿತೋ ವಿಷ್ಣುಃ
ಸ್ತ್ರೀರೂಪೋ ಹಯಶೀರ್ಷಕಃ ॥ ೬೧ ॥

ಚತುರ್ಥಃ ಪೃಥಿವೀಸಂಸ್ಥಃ ಸ್ತ್ರೀರೂಪೋ ಪೀತವರ್ಣಕಃ ।
ಜೀವಸ್ಯಾಂತರ್ಗತೋ ವ್ಯಾಪ್ಯ ಶರೀರ ಇತಿ ನಾಮಕಃ ॥ ೬೨ ॥

ಪಂಚಮಸ್ತದ್ ಹೃದಿಸ್ಥಸ್ತು ಷಷ್ಠೋ ಹೃದಯನಾಮಕಃ ।
ಗಾಯತ್ರೀಸಂಸ್ಥಿತೋ ವಿಷ್ಣುರೇವಂ ಷಡ್ವಿಧ ಉಚ್ಯತೇ ॥ ೬೩ ॥

ಷಟ್ಕುಕ್ಷಿಗಳ ವಿವರ

"ಗಾಯತ್ರೀ, ಭೂತ, ವಾಕ್, ಪೃಥಿವೀ, ಶರೀರ, ಹೃದಯ" ಎಂಬ ಷಟ್ಕುಕ್ಷಿಗಳು, **ಭೂಃ, ಭುವಃ, ಸ್ವಃ, ಭೂರ್ಭುವಃಸ್ವಃ** ಎಂಬ ಸಮಷ್ಟಿಯಾದ

ನಾಲ್ಕು ವ್ಯಾಹೃತಿಯ ವರ್ಣಗಳ ಪ್ರಭೇಧದಿಂದ ಭಗವಂತನು ಗಾಯತ್ರೀ ನಾಮಕನಾಗಿ ಹಾಗು ಸೂರ್ಯಾಂತರ್ಯಾಮಿಯಾಗಿ ಸ್ತ್ರೀರೂಪದಿಂದಿರುವನು.

೧. **ಗಾಯತ್ರೀ-** ಭಗವಂತನು, ಸೂರ್ಯನಲ್ಲಿ ಸನ್ನಿಹಿತನಾಗಿ, ಸ್ತ್ರೀರೂಪದಿಂದ **ಗಾಯತ್ರೀ** ನಾಮಕನಾಗಿರುವನು.

೨. **ಭೂತ** - ಮತ್ಸ್ಯಾದಿರೂಪಗಳಿಂದ **'ಭೂತ'** ನಾಮಕನಾಗಿ ಎರಡನೆಯ ಕುಕ್ಷಿಗೆ ಪ್ರತಿಪಾದ್ಯನು.

೩. **ವಾಕ್** - ಸರ್ವವ್ಯಾಪಿಯಾದ ವಿಷ್ಣುವು **'ವಾಕ್'** ನಲ್ಲಿ ಸ್ಥಿತನಾಗಿದ್ದು ಹಯಮುಖನಾಗಿ ಸ್ತ್ರೀರೂಪದಿಂದ ಪ್ರತಿಪಾದ್ಯನಾಗಿರುವನು.

೪. **ಪೃಥಿವೀ** - ಪೀತವರ್ಣದಿಂದ ಯುಕ್ತನಾಗಿ ಶ್ರೀಹರಿಯು ಸ್ತ್ರೀರೂಪದಿಂದ **ಪೃಥ್ವಿಯಲ್ಲಿ** ಸನ್ನಿಹಿತನಾಗಿರುವನು.

೫. **ಶರೀರ** - ಸಕಲ ಜೀವರುಗಳಲ್ಲಿ ಅಂತಃಸ್ಥಿತನಾಗಿ, **ಶರೀರ** ನಾಕಮನಾಗಿರುವನು.

೬. **ಹೃದಯ** - ಸಕಲರ ಹೃದಯದಲ್ಲಿ **'ಹೃದಯ'** ನಾಮಕನಾಗಿ ಸನ್ನಿಹಿತನಾಗಿರುವನು. ಹೀಗೆ ಗಾಯತ್ರಿಯಲ್ಲಿ ಸನ್ನಿಹಿತನಾದ ಭಗವಂತನು ಆರು ವಿಧ (ಷಟ್ಕುಕ್ಷಿ) ಕುಕ್ಷಿಗಳಿಗೆಲ್ಲಾ ನಿಯಾಮಕನು ಹಾಗು ಪ್ರತಿಪಾದ್ಯನಾಗಿರುವನು.

ಅನಿರುದ್ಧಾದಿ ಚತ್ವಾರೋ ವಿಶ್ವಾದ್ಯಾಃ ಪುರುಷೋತ್ತಮಃ ।
ನಾರಾಯಣಶ್ಚೇತಿ ದಶಗಾಯತ್ರೀ ಪದದೇವತಾಃ ॥ ೬೪ ॥

'ಅನಿರುದ್ಧಾದಿ ನಾಲ್ಕು ರೂಪಗಳು'

ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ.

ವಿಶ್ವಾದಿ ನಾಲ್ಕು ರೂಪಗಳು : **ವಿಶ್ವ, ತೈಜಸ, ಪ್ರಾಜ್ಞ,ತುರ್ಯ.**

ಪುರುಷೋತ್ತಮ ಹಾಗು **ನಾರಾಯಣ** ಎಂಬ ಹತ್ತು ಭಗವಂತನ ರೂಪಗಳು ದಶಪದ ಗಾಯತ್ರೀಯಿಂದ ಪ್ರತಿಪಾದಿತವಾಗಿವೆ.

ದಶಪದ ಗಾಯತ್ರೀ : ತತ್, ಸವಿತುಃ, ವರೇಣ್ಯಂ, ಭರ್ಗಃ, ದೇವಸ್ಯ, ಧೀಮಹಿ, ಧಿಯಃ, ಯಃ , ನಃ ಪ್ರಚೋದಯಾತ್ ॥

ಅಗ್ನಿಃ ಪ್ರಜಾಪತಿಃ ಸೋಮಃ ಈಶಾನಃ ಸವಿತಾ ತಥಾ ।
ಬೃಹಸ್ಪತಿಃ ಪೈತೃದೇವೋ ಭಗವೋಽರ್ಯಮಾ ತಥಾ ॥ ೧೫ ॥

ಸಾವಿತ್ರೀ ಚ ತಥಾ ತ್ವಷ್ಟಾ ಪೂಷಾ ಚಂದ್ರಾಗ್ನಿಕಾವುಭೌ ।
ವಾಯುಶ್ಚ ವಾಮದೇವಶ್ಚ ಮಿತ್ರಾವರುಣಕಾವುಭೌ ॥ ೧೬ ॥

ಭ್ರಾತೃದೇವಾತಥಾ ವಿಶ್ವೇದೇವಾ ವಿಷ್ಣುಶ್ಚ ವಾಸವಃ ।
ತೃಷ್ಟುಬ್ದೇವೋ ಕುಬೇರಶ್ಚ ದಸ್ರೌ ಬ್ರಹ್ಮೇತಿ ದೇವತಾಃ ॥ ೧೭ ॥

ಗಾಯತ್ರ್ಯಾಶ್ಚತುರ್ವಿಂಶದ್ವರ್ಣಾನಾಂ ದೇವತಾಃ ಕ್ರಮಾತ್ ।
ಕೇಶವಾದ್ಯಾ ಚತುರ್ವಿಂಶದ್ವರ್ಣದೇವ ನಿಯಾಮಕಃ ॥ ೧೮ ॥

ಗಾಯತ್ರೀ ಮಂತ್ರದಲ್ಲಿರುವ ಇಪ್ಪತ್ತನಾಲ್ಕು ವರ್ಣಗಳಿಗೆ ಅಭಿಮಾನಿದೇವತೆಗಳಿರುವರು. ಭಗವಂತನು ಈ ದೇವತೆಗಳಿಗೆಲ್ಲಾ ನಿಯಾಮಕನಾಗಿ ತನ್ನ ಉಪ್ಪತ್ತನಾಲ್ಕು ಕೇಶವಾದಿ ರೂಪಗಳಿಂದ ಪ್ರತಿಪಾದ್ಯನಾಗಿರುವನು

ಗಾಯತ್ರೀ ಸಂಹಿತಾದಿಸ್ಥ
ವರ್ಣಾನಾಂ ಚ ಪರಸ್ಪರಮ್ ।
ಪೂರ್ವೋತ್ತರಾರ್ಣ
ಮಧ್ಯಸ್ಥಮಧಿಲೋಕಾದಿ ಪಂಚಕಮ್ ॥ ೧೯ ॥

ತಸ್ಮಿನ್ನಾರಾಯಣಾದೀನಿ
ಪಂಚರೂಪಾಣಿ ಸಾಧಕಃ ।
ರೂಪಾರ್ಣವರ್ಣಗಾಃ
ಸಂಧಿಸಂಧಾನಕರಣಾನಿ ಚ ॥ ೨೦ ॥

ಸಂಚಿಂತಯೇನ್ಮಹಾಪಾಪೀ ಶುದ್ಧೋಭವತಿ ಮುಕ್ತಿಭಾಕ್ ।
ಪೃಥ್ವ್ಯಗ್ನ್ಯಾಚಾರ್ಯ ಮಾತೃಸ್ಥಸ್ವಧರಾಹನು ಸಂಸ್ಥಿತಃ ॥ ೨೧ ॥

ವಾಸುದೇವಾಭಿಧೋ ವಿಷ್ಣುಃ ಪೂರ್ವವರ್ಣ ನಿಯಾಮಕಃ ।
ದ್ಯುಸೂರ್ಯಶಿಷ್ಯಪಿತೃಗಶ್ಚೋತ್ತರಾಹನು ಸಂಸ್ಥಿತಃ ॥ ೨೨ ॥

ಸಂಕರ್ಷಣಾಭಿಧೋ ದೇವಶ್ಚೋತ್ತರಾರ್ಣಸ್ಯ ದೇವತಾ ।
ಆಕಾಶಜಲಸದ್ವಿದ್ಯಾ ಪ್ರಜಾವಾಕ್ ಸಂಸ್ಥಿತೋ ಹರಿಃ ॥ ೨೩ ॥

ಪ್ರದ್ಯುಮ್ನನಾಮಕಃ ಸಂಧಿ ನಿಯಾಮಕ ಉದಾಹೃತಃ ।
ವಾಯುವೈದ್ಯುತಗಶ್ಚೈವ ಪ್ರಪೂರ್ವವಚನ ಸ್ಥಿತಃ ॥ ೨೪ ॥

ಪ್ರಪೂರ್ವಜನ ಸಂಸ್ಥೋಽಪಿ ಜಿಹ್ವಾಸಂಸ್ಥೋ ರಮಾಪತಿಃ ।
ಅನಿರುದ್ಧಾಭಿಧೋ ವರ್ಣಸಂಧಾನಸ್ಯಾಧಿದೇವತಾ ॥ ೨೫ ॥

ಗಾಯತ್ರೀ ಸಂಹಿತಾದಿಗಳಲ್ಲಿರುವ ವರ್ಣಗಳಿಗೆ ಪರಸ್ಪರವಾಗಿ ಪೂರ್ವವರ್ಣ, ಉತ್ತರವರ್ಣ, ಮಧ್ಯಸ್ಥವರ್ಣ, ಸಂಧಿ ಹಾಗು ಸಂಧಾನಗಳಿಗೆಲ್ಲಾ ಶ್ರೀಹರಿಯೇ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ನಾರಾಯಣವೆಂಬ ಪಂಚರೂಪಗಳಿಂದ ಪ್ರತಿಪಾದ್ಯನಾಗಿರುವನೆಂದು ಅನುಸಂಧಾನ ಮಾಡಿದವನು ಮಹಾಪಾಪಿಯಾಗಿದ್ದರೂ ಪರಿಶುದ್ಧನಾಗಿ ಮುಕ್ತಿಭಾಗಿಯಾಗುವನು.

ಪೂರ್ವವರ್ಣ : ಪೃಥಿವೀ, ವಾಕ್, ಆಚಾರ್ಯ, ಮಾತೃಸ್ಥನಾದ, ಹಾಗು ಅಧರಾಹನು ಸಂಸ್ಥಿತನಾದ ಭಗವಂತನು ತನ್ನಾಮಗಳಿಂದ **'ಪೂರ್ವ'** ವರ್ಣಕ್ಕೆ **'ವಾಸುದೇವ'** ರೂಪದಿಂದ ನಿಯಾಮಕನಾಗಿ ಪ್ರತಿಪಾದ್ಯನಾಗಿರುವನು.

ಉತ್ತರವರ್ಣ : ದ್ಯು, ಸೂರ್ಯ, ಶಿಷ್ಯ, ಪಿತೃಸ್ಥನಾದ ಹಾಗು ಉತ್ತರಾಹನು ಸಂಸ್ಥಿತನಾದ ಭಗವಂತನು ತನ್ನಾಮಗಳಿಂದ **'ಉತ್ತರ ವರ್ಣಕ್ಕೆ' 'ಸಂಕರ್ಷಣ'** ರೂಪದಿಂದ ನಿಯಾಮಕನಾಗಿ ಪ್ರತಿಪಾದ್ಯನಾಗಿರುವನು.

ಸಂಧಿ : ಆಕಾಶ, ಜಲ, ಸದ್ವಿದ್ಯಾ, ಪ್ರಜಾ, ವಾಕ್, ಗಳಲ್ಲಿ ಸಂಸ್ಥಿತನಾದ ಭಗವಂತನು ತನ್ನಾಮಗಳಿಂದ **'ಪ್ರದ್ಯುಮ್ನ'** ರೂಪದಿಂದ **'ಸಂಧಿ'**ಗೆ ನಿಯಾಮಕನಾಗಿ ಪ್ರತಿಪಾದ್ಯನಾಗಿರುವನು.

ಸಂಧಾನ : ವಾಯು, ವೈದ್ಯುತ, (ವಿದ್ಯುತ್ ಸಮೂಹಗಳಲ್ಲಿರುವ) ಹಾಗೂ ಪೂರ್ವಜನ ಸಂಸ್ಥಿತನು, ಜಿಹ್ವೆಯಲ್ಲಿ ಸನ್ನಿಹಿತವಾದ ರಮಾಪತಿಯು **'ಅನಿರುದ್ಧ'** ರೂಪದಿಂದ ವರ್ಣ **'ಸಂಧಾನ'**ಕ್ಕೆ ನಿಯಾಮಕನಾಗಿ ಪ್ರತಿಪಾದ್ಯನಾಗಿರುವನು.

ಪೃಥ್ವ್ಯಾದೀನಾಂ ತು ನಾಮ್ನೈವ ಹ್ಯನಿರುದ್ಧಾದಯಃ ಸ್ಮೃತಾಃ ।
ನಾರಾಯಣೋ ವರಾಹಶ್ಚ ಪೂರ್ವವರ್ಣ ನಿಯಾಮಕಃ ॥ ೨೬ ॥

ಹರೇಃ ಸರ್ವಾವತಾರಶ್ಚ ವಾಮನಶ್ಚೋತ್ತರಾರ್ಣಗಃ ।
ಮಧ್ಯಸ್ಥ ಸಿಂಹನಾಮಾಸೌ ವರ್ಣಸಂಧಾನ ಕಾರಕಃ ॥ ೭೭ ॥

ಈ ಹಿಂದೇ ಹೇಳಿದ ಶ್ಲೋಕಗಳಿಂದ ಪೃಥ್ವ್ಯಾದಿ ನಾಮಗಳಿಗೆಲ್ಲಾ **ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ,** ವೆಂಬ ರೂಪಗಳಿಂದ ಶ್ರೀಹರಿಯೇ ನಿಯಾಮಕನಾಗಿ ಪ್ರತಿಪಾದ್ಯನಾಗಿರುವನೆಂದು ತಿಳಿಸಲಾಗಿದೆ. **'ನಾರಾಯಣ'** ಹಾಗು **'ವರಾಹ'**ವೆಂಬ ರೂಪಗಳಿಂದ **'ಪೂರ್ವ'** ವರ್ಣಕ್ಕೆ ನಿಯಾಮಕನು ಸರ್ವಾವತಾರನಾದ ಶ್ರೀಹರಿಯು **'ವಾಮನ'** ರೂಪದಿಂದ **'ಉತ್ತರ'** ವರ್ಣಕ್ಕೆ ನಿಯಾಮಕನು.

'ಮಧ್ಯಮ' ವರ್ಣಕ್ಕೆ **'ನರಸಿಂಹ'** ರೂಪದಿಂದ ನಿಯಾಮಕ ಹಾಗು ಸಂಧಾನಕಾರಕನೂ ಆಗಿರುವನು.

ವಾಙ್ನಾಮಿಕಾ ಮಹಾಲಕ್ಷ್ಮೀಃ
ಪೂರ್ವವರ್ಣಸ್ಯ ದೇವತಾ ।
ಪ್ರಾಣಾಖ್ಯಶ್ಚೋತ್ತರಾರ್ಣಸ್ಯ
ದೇವೋ ನಾರಾಯಣಃ ಸ್ಮೃತಃ ॥ ೭೮ ॥

ತನ್ಮಧ್ಯೇ ಸಿಂಹಿಕಾಖ್ಯಸ್ಯಾ-
ರ್ಧನಾರೀ ಪುಮಾತ್ಮಕಃ ।
ಸ್ತ್ರೀರೂಪ ಸಿಂಹಿಕಾಂಶೇನ
ಪೂರ್ವಾರ್ಣ ಶ್ರೀಶ್ಚ ಯುಜ್ಯತೇ ॥ ೭೯ ॥

ಪುಂರೂ ಸಿಂಹಿಕಾಂಶೇನ
ಯುಜ್ಯತೇ ಚೋತ್ತರಾರ್ಣಗಃ ।
ಪೂರ್ವೋತ್ತರಾರ್ಣ
ಮಧ್ಯಸ್ಥರೂಪಾಣಾಂ ಪರಮಾತ್ಮನಃ ॥ ೮೦ ॥

ಅನ್ಯೋನ್ಯಯೋಗ ವಿಜ್ಞಾನ
ಗಾಯತ್ರೀಸಂಹಿತಾ ಭವೇತ್ ।
ಸಂಹಿತಾ ಪ್ರತಿಪಾದ್ಯಂ ತು
ಪೃಥಿವೀಲೋಕ ಸಂಸ್ಥಿತಮ್ ॥ ೮೧ ॥

ತನ್ನಾಮಕ ವರಾಹಶ್ಚ
ಹ್ಯನಿರುದ್ಧಂ ವಿಚಿಂತಯೇತ್ ।
ತತ್ಪದ ಪ್ರತಿಪಾದ್ಯಂ ತು
ದ್ಯುಲೋಕಸ್ಥಂ ದ್ಯುನಾಮಕಮ್ ॥ ೮೨ ॥

ಚಿಂತಯೇ ದ್ವಾಮನಂ ದೇವಂ
ಪ್ರದ್ಯುಮ್ನಂ ಚಾಪಿ ಸತ್ತಮಃ ।
ತತ್ಕ್ರಮ ಪ್ರತಿಪಾದ್ಯಂ ತು
ಹ್ಯಂತರಿಕ್ಷಂ ಸ್ಥಿತಂ ಬುಧಃ ॥ ೮೩ ॥

ತನ್ನಾಮಕಂ ನೃಸಿಂಹಂ ಚ
ಸಂಕರ್ಷಣಮನುಸ್ಮರೇತ್ ।
ಏವಂ ಜ್ಞಾತ್ವಾ ತು ಯೋ ನಿತ್ಯಂ
ಗಾಯತ್ರೀ ಜಾಪಕೋ ಭವೇತ್ ॥ ೮೪ ॥

ಏಕವಾರಂ ಜಪೇನ್ನೈವ
ಸಹಸ್ರಜಪವಾನ್ ಭವೇತ್ ।
ಯ ಇದಂ ಜಪತೇ ನಿತ್ಯಂ
ಬ್ರಾಹ್ಮಣ್ಯಾದಚ್ಯುತಾ ಭವೇತ್ ॥೮೫ ॥

'ವಾಙ' ನಾಮಿಕ ಮಹಾಲಕ್ಷ್ಮೀದೇವಿಯು ಪೂರ್ವವರ್ಣಕ್ಕೆ ದೇವತೆಯು. **'ಪ್ರಾಣ'**ಶಬ್ದ ವಾಚ್ಯನಾದ ನಾರಾಯಣನು ಉತ್ತರವರ್ಣಕ್ಕೆ ದೇವತೆಯು. ತನ್ಮಧ್ಯ **'ನರಸಿಂಹರೂಪಿ'**ಅರ್ಧನಾರೀ ಪುರುಷರೂಪದ ಭಗವಂತನು ಹಾಗು ಸಂಹಿಕಾಂಶದಿಂದ ಮಹಾಲಕ್ಷ್ಮೀದೇವಿಯು ಅರ್ಧನಾರೀ ಸ್ತ್ರೀರೂಪದಿಂದ ಪ್ರತಿಪಾದ್ಯರಾಗಿರುವರು.

ಪೂರ್ವವರ್ಣಕ್ಕೆ : ಮಹಾಲಕ್ಷ್ಮೀದೇವಿ (ಸಿಂಹಿಕಾಂಶಳು)

ಉತ್ತರ ವರ್ಣಕ್ಕೆ : ನರಸಿಂಹ (ಪುರುಷರೂಪ) ಹೀಗೆ ಲಕ್ಷ್ಮೀನರಸಿಂಹರ ಅರ್ಧನಾರೀ ರೂಪಗಳಿಂದಲೇ ಪ್ರತಿಪಾದ್ಯರು ಹಾಗೂ ಪೂರ್ವವರ್ಣ, ಉತ್ತರವರ್ಣ, ಮಧ್ಯಮ ವರ್ಣಗಳಲ್ಲಿ ಸ್ಥಿತನಾದ ಪರಮಾತ್ಮನ ರೂಪಗಳಿಗೆ **'ಅನ್ಯೋನ್ಯಯೋಗ ವಿಜ್ಞಾನಗಾಯತ್ರೀ ಸಂಹಿತೆ'** (ಪರಸ್ಪರವಾಗಿ ಎರಡು

ವರ್ಣಗಳ ಸಂಯೋಗದ ವಿಶಿಷ್ಟ ಜ್ಞಾನಕ್ಕೆ ಗಾಯತ್ರೀ ಸಂಹಿತೆ) ಎನ್ನುವರು ಹಾಗೂ **'ಗಾಯತ್ರೀ ಸಂಹಿತೆ'**ಯಿಂದ ಪ್ರತಿಪಾದ್ಯನಾದ ಭಗವಂತನು ಪೃಥಿವೀಲೋಕ ಸಂಸ್ಥಿತನಾಗಿರುವನು.

ಪೃಥಿವೀ ನಾಮಕನಾದ ಶ್ರೀಹರಿಯನ್ನು **'ವರಾಹ' 'ಅನಿರುದ್ಧ'**ವೆಂಬ ರೂಪಗಳಿಂದ ಚಿಂತಿಸಬೇಕು. ಗಾಯತ್ರೀ ಪದಕ್ಕೆ ಪ್ರತಿಪಾದ್ಯನಾದ ದ್ಯುಲೋಕಸ್ಥನು ಹಾಗು **'ದ್ಯು'** ನಾಮಕನಾದ ಪರಮಾತ್ಮನನ್ನು **'ವಾಮನ' 'ಪ್ರದ್ಯುಮ್ನ'**ವೆಂಬ ರೂಪಗಳಿಂದ ಸಜ್ಜನರು ಚಿಂತಿಸಬೇಕು. **'ಗಾಯತ್ರೀ ಸಂಹಿತೆಯ'** ಕ್ರಮಪ್ರತಿಪಾದ್ಯನು ಹಾಗೂ ಅಂತರಿಕ್ಷಸ್ಥಿತನು ಹಾಗು 'ಅಂತರಿಕ್ಷ'ನಾಮಕನಾದ **'ನರಸಿಂಹ' 'ಸಂಕರ್ಷಣ'** ರೂಪಗಳನ್ನು ಜ್ಞಾನಿಯು ಸ್ಮರಿಸಬೇಕು.

ಈ ಅನುಸಂಧಾನದಿಂದ ಯಾರು ನಿರಂತರವಾಗಿ ಗಾಯತ್ರೀ ಜಪವನ್ನು ಮಾಡುವರೋ ಅವರು ಒಂದೊಂದು ಜಪಕ್ಕೂ ಸಾವಿರಾರು ಗಾಯತ್ರೀ ಜಪದ ಫಲವನ್ನು ಹೊಂದುವರು. ಹಾಗೂ ಈ ಗಾಯತ್ರಿಯನ್ನು ಯಾರು ನಿತ್ಯದಲ್ಲಿಯೂ ನಿರಂತರವಾಗಿ ಜಪಿಸುವರೋ ಅವರು ಬ್ರಾಹ್ಮಣ ಜನ್ಮದಿಂದ ಚ್ಯುತರಾಗದೇ ಇರುವರು. ಅಂದರೇ (ಬ್ರಾಹ್ಮಣರಾಗಿಯೇ ಹುಟ್ಟುತ್ತಾರೆಂದರ್ಥ).

ಬ್ರಹ್ಮವಿದ್ಯಾಸು ನಿರತೋ
ಭವೇಜ್ಜನ್ಮನಿ ಜನ್ಮನಿ ।
ಗಾಯತ್ರ್ಯರ್ಥೋ ಪ್ರಮಾಶಕ್ತೇಃ
ಪ್ರಣವಾರ್ಥ ಪ್ರಮಾಬಲಾತ್ ॥ ೭೬ ॥

ಉಪಾಸ್ಯಸ್ತದ್ಗತಂ ವಿಷ್ಣುಂ ವಾಸುದೇವಂ ಪ್ರಪಶ್ಯತಿ ।
ಷಡಶೀತಿಮಿತಾ ಹ್ಯೇತೇ ಶ್ಲೋಕಾಸ್ತತ್ರೈವ ಭಾಷ್ಯಗಮ್ ॥ ೭೮ ॥

ಶ್ಲೋಕತ್ರಯಂ ಪರಿಕ್ಷಿಪ್ತಮೇತದ್
ಗ್ರಂಥವಿಶುದ್ಧಯೇ ।
ಸ್ವೈಜೀ ವೇಂಕಟಗಿರ್ಯಾರ್ಯ
ಪುತ್ರೇಣಾಲ್ಪಧಿಯಾಕೃತಃ ॥ ೮೮ ॥

ಗಾಯತ್ರೀ ಯಥಾರ್ಥ ಜ್ಞಾನ ಶಕ್ತಿಯಿಂದ ಹಾಗೂ ಓಂಕಾರದ ಯಥಾರ್ಥ ಜ್ಞಾನ ಬಲದಿಂದ ಪ್ರತೀ ಜನ್ಮದಲ್ಲೂ ಬ್ರಹ್ಮವಿದ್ಯೆಯಲ್ಲಿ ನಿರತರಾಗುವರು ಹಾಗು ಶ್ರೀಮದಾಚಾರ್ಯರು ಭಾಷ್ಯದಲ್ಲಿ ಹೇಳಿರುವ ಪ್ರಕಾರ,

ಗಾಯತ್ರೀ ಹಾಗೂ ಪ್ರಣವದಿಂದ ಉಪಾಸ್ಯನಾದ ವಿಷ್ಣುವನ್ನು ಉಪಾಸನೇ ಮಾಡಿ ವಾಸುದೇವರೂಪಿ ಭಗವಂತನನ್ನು ದರ್ಶನ ಮಾಡುತ್ತಾರೆ. (ಮುಕ್ತರಾಗುತ್ತಾರೆ) ಎಂದು ಎಂಭತ್ತಾರು (೮೬) ಶ್ಲೋಕಗಳಿಂದ ತಿಳಿಸಿರುತ್ತಾರೆ.

ಐಜೀ ವೇಂಕಟಗಿರಿ ಆರ್ಯರ (ಪೂಜ್ಯರ) ಪುತ್ರರಾದ ಅಲ್ಪಮತಿಯಾದ ಐಜೀ ವೇಂಕಟರಾಮಾಚಾರ್ಯರಿಂದ ಈ ಗ್ರಂಥದ ಪರಿಶುದ್ಧಿಗೋಸ್ಕರ ಈ ಶ್ಲೋಕತ್ರಯಗಳನ್ನು ಸೇರಿಸಿ ರಚಿಸಲ್ಪಟ್ಟಿದೆ.

ಹೀಗೆ ಅಲ್ಪಮತಿ ಎಂದು ಸ್ವಾಹಂಕಾರ ಖಂಡನ ಪೂರ್ವಕವಾಗಿ, ಐಜೀ ವೇಂಕಟರಾಮಾಚಾರ್ಯರು ಫಲಶ್ರುತಿಯೊಂದಿಗೆ 'ಗಾಯತ್ರೀಸಾರಸಂಗ್ರಹ' ವೆಂಬ ಗ್ರಂಥವನ್ನು - ಉಪಸಂಹಾರ ಮಾಡಿರುತ್ತಾರೆ.

॥ ಶ್ರೀ ಮದ್ವೇಶಾರ್ಪಣಮಸ್ತು ॥

★ ★ ★

भारतीय संस्कृतियु प्रस्थानत्रयगळेंब बेरन्नु आश्रयिसि निन्तिरुव, सनातन प्रज्ञेयुळ्ळ महावृक्ष. ई वृक्षवन्नु आधरिसिये जगद्विख्यातराद दार्शनिकरु तम्म सिद्धान्तवन्नु प्रसारगोळिसुव साहित्यलतेयन्नु हब्बिसिद्दु. वेदान्तसाहित्य कृषिप्रपञ्चदल्लि अत्यन्त विशिष्टवाद मत्तु वैज्ञानिकवाद रीतियल्लि प्रमेयगळन्नु विवरिसुव मूलक ख्यातरादवरु श्रीआनन्दतीर्थरु. अर्थविवरणेयल्लि अत्यन्त विस्तारवाद हरहन्नु होन्दि आनन्दतीर्थर ई ज्ञानलतेय कुसुमगळन्नु आय्दु, अदर सौरभवन्नु जनसामान्यरेडेगे तंदिद्दु श्रीजयतीर्थरु-श्रीविजयीन्द्रतीर्थरु-श्रीराघवेंद्रतीर्थगुरुसार्वभौमरंतह महान् चेतनरु हागू श्रीपुरन्दर-कनक-विजयदासरादियाद असंख्य हरिदासरुगळु. इदक्के पूरकवागि जगद्गुरुगळ मूलसंस्थानवे आद श्रीराघवेन्द्रस्वामिगळवर मठवंतू ज्ञानकृषिगे प्राचीनकालदिन्दलू अव्याहतवाद पोषणेयन्नु नीडुत्ता बंदिदे.

सर्वज्ञपीठदल्लि मण्डिसि वेदान्तप्रपञ्चवन्नु बेळगिद श्रीरघुनन्दनतीर्थर ५००ने वर्षद हागू श्रीराघवेंद्रस्वामिगळवर ३३३ने आराधनोत्सवद अंगवागि २००३-२००४ने वर्षवन्नु ''**श्रीरघुनन्दन-श्रीराघवेन्द्रवर्ष**'' एंबुदागि श्रीमठद प्रस्तुत पीठाधिपतिगळाद १०८ श्रीमत्सुशमींद्रतीर्थश्रीपादंगळवरु घोषिसि हलवारु वैविध्यमयवाद कार्यक्रमगळन्नु हम्मिकोंडरु. '**एकोत्तरशतग्रन्थमालेयु**' ई कार्यक्रमद प्रमुख अङ्ग. देशदेल्लेडे विविध भागगळल्लि अरळिद्द, अरळिद्दरू जनमानसक्के गोचरवागदे गुप्तवागुळिदिद्द हलवारु अपूर्व ग्रन्थकुसुमगळन्नु आय्दु तंदु ई मालेयन्नु पोणिसिदे. संस्कृत, कन्नड, तेलुगु, तमिळु हागू आंग्लभाषेय उत्कृष्ट कुसुमगळन्नोळगोंड ई मालेयु वैजयंतियेन्दे नम्म भावने. ई वैजयंतिय ओंदु उत्कृष्ट कुसुमवे ईग निम्म करग्राहियागिदे.

ओट्टिनल्लि हेळुवुदादरे, ई सनातनवाद ज्ञानवृक्षवन्नु अलुगाडिसुव किरुप्रयत्नवन्नु नावु माडिद्देवे. केळगे बिद्द फल हागू पुष्पगळु जिज्ञासुगळ हृन्मनोमंदिरगळन्नु अलंकरिसिदरे साहित्यकृषिकर श्रम सार्थकवागि श्रीहरिवायुगुरुगळ संप्रीतिगे पात्रवादीतु.

राजा. एस्. राजगोपालाचार्यरु
श्रीश्रीपादंगळवर आप्तकार्यदर्शिगळु